ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕಾಶಿ ವಿಶ್ವನಾಥನಿಗೆ ಮೋದಿ ಪೂಜೆ

ಉತ್ತರಪ್ರದೇಶದ ಕಾಶಿ ವಿಶ್ವನಾಥ ದೇಗುಲಕ್ಕೆ ಬುಧವಾರ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಪೂಜೆ ಸಲ್ಲಿಸಿದರು. ದೇಗುಲದ ಆವರಣದಲ್ಲಿ ಸಂಚರಿಸಿದ ಪ್ರಧಾನಿ, ಅನ್ನಪೂರ್ಣಾ ಮಂದಿರದಲ್ಲೂ ಪ್ರಾರ್ಥನೆ ಸಲ್ಲಿಸಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್
(1916 ರಿಂದ)

ಶತಮಾನದ ಸುಗಂಧ ಸಾಧನೆಯ ನವಯುಗ

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಯು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸಾಧಿಸಿದ ಪ್ರಗತಿ ಅಭೂತಪೂರ್ವವಾದುದು. ಉತ್ಪಾದನೆ, ಮಾರಾಟ ಮತ್ತು ಲಾಭದಲ್ಲಿ ಹೊಸ ದಾಖಲೆಗಳನ್ನು ಸೃಷ್ಟಿಸಿದೆ. ತನ್ನ ಜನಪ್ರಿಯ "ಮೈಸೂರು ಸ್ಯಾಂಡಲ್" ಉತ್ಪನ್ನಗಳ ಮೂಲಕ ಗ್ರಾಹಕರ ಮನಸ್ಸಿನಲ್ಲಿ ಅಚ್ಚೊತ್ತಿರುವ ಸಂಸ್ಥೆಯು ಮಾರುಕಟ್ಟೆ ವಿಸ್ತರಣೆಯೊಂದಿಗೆ ತನ್ನ ನೆಲೆಯನ್ನು ಇನ್ನಷ್ಟು ಭದ್ರಪಡಿಸುತ್ತಿದೆ. ಅಷ್ಟು ಮಾತ್ರವಲ್ಲದೆ ದಕ್ಷ ನಾಯಕತ್ವ ಮತ್ತು ಕಾರ್ಯತಂತ್ರದ ಯೋಜನೆ ಮೂಲಕ ನಿರಂತರ ಪ್ರಗತಿಯನ್ನು ಖಚಿತಗೊಳಿಸುತ್ತಿದೆ.



ಶ್ರೀ ಎಂ.ಬಿ. ಪಾಟೀಲ, ಮಾನ್ಯ ಬೃಹತ್ & ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು, ಮತ್ತು **ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ**, ಮಾನ್ಯ ಶಾಸಕರು & ಅಧ್ಯಕ್ಷರು-ಕೆಎಸ್&ಡಿಎಲ್, ಇವರು ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ**ನವರಿಗೆ, ಮೈಸೂರ್ ಸ್ಯಾಂಡಲ್ ಉತ್ಪನ್ನಗಳನ್ನು ನೀಡುತ್ತಿರುವುದು.

2025-26ನೇ ಸಾಲಿನಲ್ಲಿ ಕೆಎಸ್&ಡಿಎಲ್ ಸಾರ್ವಕಾಲಿಕ ದಾಖಲೆ

₹2,016 ಕೋಟಿ ವಹಿವಾಟು

₹507 ಕೋಟಿ ನಿವ್ವಳ ಲಾಭ

₹150 ಕೋಟಿ ಸರ್ಕಾರಕ್ಕೆ ಲಾಭಾಂಶ
ಸರ್ಕಾರಕ್ಕೆ ಲಾಭಾಂಶ ಪಾವತಿಯಲ್ಲಿ 21ನೇ ಸ್ಥಾನದಿಂದ 1ನೇ ಸ್ಥಾನಕ್ಕೆ

47,494 ಮೆಟ್ರಿಕ್ ಟನ್ ಉತ್ಪಾದನೆ

57 ಹೊಸ ಉತ್ಪನ್ನಗಳು

ರಫ್ತು ಹೆಚ್ಚಳ

ರಾಜ್ಯಾದ್ಯಂತ 'ಮೈಸೂರ್ ಸ್ಯಾಂಡಲ್ ಸೋಪ್ ಮೇಳ' ಆಯೋಜನೆ

ಶ್ರೀಗಂಧ ಸಾಗುವಳಿ ವಿಸ್ತರಣೆ
700+ ಬೆಳೆಗಾರರು, 3,800+ ಎಕರೆಗಳು

ತನ್ನ 105 ವರ್ಷಗಳ ಇತಿಹಾಸದಲ್ಲಿ ₹1,000 ಕೋಟಿ ವಾರ್ಷಿಕ ವಹಿವಾಟು ದಾಟಿದ ಸಂಸ್ಥೆಯು ಕೇವಲ ನಾಲ್ಕು ವರ್ಷಗಳಲ್ಲಿ ಅದನ್ನು ₹2,000 ಕೋಟಿಗೆ ಏರಿಸುವ ಮೂಲಕ ಬೆಳವಣಿಗೆಯ ಚಿತ್ರಣವನ್ನು ಆಮೂಲಾಗ್ರವಾಗಿ ಬದಲಿಸಿದೆ.

ಕಳೆದ 5 ವರ್ಷಗಳಲ್ಲಿ ಕೆಎಸ್&ಡಿಎಲ್ ಲಾಭದ ಬೆಳವಣಿಗೆ: 35% ಸಿಎಜಿಆರ್

ಉತ್ಪಾದನೆ, ವಹಿವಾಟು ಹಾಗೂ ಲಾಭದಲ್ಲಿನ ಈ ಐತಿಹಾಸಿಕ ದಾಖಲೆಯನ್ನು ಯಾವುದೇ ಹೆಚ್ಚುವರಿ ಯಂತ್ರೋಪಕರಣಗಳ ಬಳಕೆಯಿಲ್ಲದೆ ಹಾಗೂ ನೌಕರರ ಸಂಖ್ಯೆಯಲ್ಲಿ ಹೆಚ್ಚಳವಿಲ್ಲದೆ, ಕ್ಷಮತೆಯನ್ನು ಹೆಚ್ಚಿಸಿ ಸಾಧಿಸಲಾಗಿದೆ.

ಸಂಸ್ಥೆಗೆ ಮಾನ್ಯ ಸಚಿವರಾದ ಶ್ರೀ ಎಂ.ಬಿ. ಪಾಟೀಲರ ಮುಂದಿನ ಮಹತ್ವಾಕಾಂಕ್ಷೆಯ ಗುರಿ

ವಹಿವಾಟನ್ನು **2028ರ ವೇಳೆಗೆ ₹3,000 ಕೋಟಿಗೆ** ಮತ್ತು **2030ರ ವೇಳೆಗೆ ₹5,000 ಕೋಟಿಗೆ** ಕೊಂಡೊಯ್ಯುವುದು.

ಸಂಸ್ಥೆಗೆ ಸಂದಿರುವ ಪ್ರಶಸ್ತಿ-ಗೌರವಗಳು

- ಉತ್ತಮ ಆಡಳಿತಕ್ಕಾಗಿ ರಾಜ್ಯ ಸರ್ಕಾರದಿಂದ **"ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ 2025"**
- ಐ.ಐ.ಎಂ.ಎಂ. ವತಿಯಿಂದ **"ಬೆಸ್ಟ್ ಸಿ.ಇ.ಒ. 2025"** ಪ್ರಶಸ್ತಿ
- ನಿರ್ದೇಶಕರ ಸಲಹೆಗಾರರ ಒಕ್ಕೂಟದ (DAC) ವತಿಯಿಂದ **"ಎಕ್ಸಲೆನ್ಸ್ ಇನ್ ಸಿ.ಎಸ್.ಆರ್. 2025"** ಪ್ರಶಸ್ತಿ
- ನ್ಯೂಸ್ 18 ನೆಟ್ ವರ್ಕ್ ವತಿಯಿಂದ **"ಬೆಸ್ಟ್ ಎಮರ್ಜಿಂಗ್ ಸ್ಟೇಟ್ ಪಿ.ಎಸ್.ಯು. 2025"** ಪ್ರಶಸ್ತಿ

ಭಾರತ ಚಿತ್ರರಂಗದಲ್ಲಿ ಜನಪ್ರಿಯರಾಗಿರುವ ಹಾಗೂ ಸಾಮಾಜಿಕ ಮಾಧ್ಯಮದಲ್ಲಿ ಸುಮಾರು 3 ಕೋಟಿಗೂ ಅಧಿಕ ಅನುಯಾಯಿಗಳನ್ನು ಹೊಂದಿರುವ ಕು|| ತಮನ್ನಾ ಭಾಟಿಯಾ ಅವರನ್ನು ಮೈಸೂರ್ ಸ್ಯಾಂಡಲ್ ಸೋಪ್ ರಾಯಭಾರಿಯನ್ನಾಗಿ ನೇಮಿಸಲಾಗಿದೆ.

ಸಂಸ್ಥೆಯ ಈ ಅದ್ಭುತ ಸಾಧನೆಗೆ ಕಾರಣರಾದ ಕಾರ್ಮಿಕರು, ಸಿಬ್ಬಂದಿ ವರ್ಗ, ನೌಕರರ ಸಂಘ, ಅಧಿಕಾರಿ ವೃಂದ, ಪ್ರಧಾನ ವ್ಯವಸ್ಥಾಪಕರು-ಆಡಳಿತ, ಪ್ರಧಾನ ವ್ಯವಸ್ಥಾಪಕರು-ಹಣಕಾಸು, ಎಲ್ಲರಿಗೂ ಅವರ ಅಮೂಲ್ಯ ಕೊಡುಗೆಗಳಿಗೆ ಧನ್ಯವಾದಗಳು.

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು. -ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ

ಡಾ. ಪ್ರಶಾಂತ್ ಪಿಕೆಎಂ, ಭಾ.ಅ.ಸೇ., ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

ಸಮಾಚಾರ ಸಣ್ಣದಲ್ಲ

‘ಸುನ್ನತಿ ಇಬ್ರಾಹಿಮಿ’ ಕಾರ್ಯಕ್ರಮ ನಾಳೆ

ಚಿಕ್ಕನಾಯಕನಹಳ್ಳಿ: ಪಟ್ಟಣದ ಧಾರ್ಮಿಕ ಭಾವೈಕ್ಯತೆಯ ಕೇಂದ್ರವಾದ ತಾತಯ್ಯನಗೋರಿಯಲ್ಲಿ ಮೇ.1 ರಂದು ಮುಸ್ಲಿಂ ಸಮುದಾಯದ ಬಾಂಧವರಿಗಾಗಿ ‘ಸುನ್ನತಿ ಇಬ್ರಾಹಿಮಿ’ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾತಯ್ಯನವರ ದರ್ಗಾ ಮುಜಾವರ್ ಅಸ್ಲಾಂಪಾಷ ತಿಳಿಸಿದ್ದಾರೆ. ತಾತಯ್ಯನಗೋರಿಯು ಪಟ್ಟಣದಲ್ಲಿ ಶಾಂತಿ ಮತ್ತು ಸೌಹಾರ್ದತೆಯ ಪ್ರತೀಕವಾಗಿದ್ದು, ಇಲ್ಲಿನ ಹಳೆಯ ಪರಂಪರೆಯಂತೆ ಸಮಾಜದ ಹಿತದೃಷ್ಟಿಯಿಂದ ಈ ಧಾರ್ಮಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಅಂದು ಬೆಳಗ್ಗೆಯಿಂದಲೇ ಕಾರ್ಯಕ್ರಮವು ಶಾಸ್ತ್ರೋಕ್ತವಾಗಿ ಆರಂಭವಾಗಲಿದ್ದು, ಈ ಬಾರಿ ವಿಶೇಷವಾಗಿ ನುರಿತ ವೈದ್ಯರ ತಂಡವನ್ನು ಆಹ್ವಾನಿಸಲಾಗಿದೆ. ತಜ್ಞವೈದ್ಯರ ಮಾರ್ಗದರ್ಶನದಲ್ಲಿ ವೈದ್ಯಕೀಯ ವಿಧಿವಿಧಾನಗಳೊಂದಿಗೆ ಸುನ್ನತಿ ಕಾರ್ಯಕ್ರಮವು ಅತ್ಯಂತ ವ್ಯವಸ್ಥಿತವಾಗಿ ನೆರವೇರಲಿದೆ. ಈ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ದರ್ಗಾದ ಧಾರ್ಮಿಕ ಸಂಪ್ರದಾಯಗಳಿಗೆ ಚ್ಯುತಿ ಬಾರದಂತೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಆಸಕ್ತರು ಹೆಸರು ನೋಂದಾಯಿಸಿಕೊಳ್ಳಲು ದರ್ಗಾದ ಸಮಿತಿಯನ್ನು ಸಂಪರ್ಕಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಹಾಸನ್‌ಗೆ ಗಣಿತದ ಎರಡನೇ ರ್‍ಯಾಂಕ್

ಕೋಲಾರ: ಇಲ್ಲಿನ ವಿದ್ಯಾಜ್ಯೋತಿ ಶಾಲೆಯ 7ನೇ ತರಗತಿಯ ವಿದ್ಯಾರ್ಥಿ ಎನ್.ಎಸ್.ಸುಹಾಸನ್ ಅವರು

ಮುಂಬೈನಲ್ಲಿ ನಡೆದ ಅಂತಾರಾಷ್ಟ್ರೀಯ ಗಣಿತ ಚಾಂಪಿಯನ್ ಶಿಪ್‌ನಲ್ಲಿ ಎರಡನೇ ರ್‍ಯಾಂಕ್ ಪಡೆಯುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ನರಸಾಪುರ ವಕೀಲ ಎನ್.ಡಿ.ಶ್ರೀನಿವಾಸ್- ಜಿ.ವಿ.ಮಂಜುಳ ಪುತ್ರನಾಗಿರುವ ಪ್ರತಿಭಾನ್ವಿತ ಸುಹಾಸನ್ ಸಾಧನೆಗಾಗಿ ಮುಂಬೈನ ಅಂಬಾನಿ ಇಂಟರ್ ನ್ಯಾಷನಲ್ ಸ್ಕೂಲ್, ಮೇಘಾಲಯದ ಇಂಟರ್‌ನ್ಯಾಷನಲ್ ಶಾಲೆ ಹಾಗೂ ಚಂಡಿಘರ್‌ನ ಡೆಲ್ಲಿ ಪಬ್ಲಿಕ್ ಸ್ಕೂಲ್ನಲ್ಲಿ ಉಚಿತ ಪ್ರವೇಶಕ್ಕಾಗಿ ಅವಕಾಶ ಬಂದಿದ್ದು, ತಾಯ್ನಾಡಿನಲ್ಲೇ ಓದಿ ವಿದ್ಯಾಭ್ಯಾಸ ಮಾಡಿ ತಂದೆಯ ವಕೀಲಿ ವೃತ್ತಿಯನ್ನು ಮುಂದುವರೆಸುತ್ತೇನೆ ಎಂದು ಪ್ರತಿಕ್ರಿಯಿಸಿದ್ದಾರೆ. ಗಮನಾರ್ಹ ಸಾಧನೆಯ ಹಿಂದೆ ಸಮರ್ಪಣೆ ಮತ್ತು ಕಠಿಣ ಪರಿಶ್ರಮವಿದ್ದು ಶಿಕ್ಷಕರು ಒದಗಿಸಿದ ಬಲವಾದ ಶೈಕ್ಷಣಿಕ ಅಡಿಪಾಯ ಮತ್ತು ಮಾರ್ಗದರ್ಶನ ಇದಾಗಿದೆ. ತಂದೆ, ತಾಯಿ, ತಂಗಿ ವಿಹಾನ ಸಹಕಾರ ಇದೆ ಎಂದು ಸುಹಾಸನ್ ಹೇಳುತ್ತಾರೆ.

ಮೇ.2ರಂದು ವಿದ್ಯುತ್ ಪೂರೈಕೆ ವ್ಯತ್ಯಯ

ತುಮಕೂರು: ಬೆಸ್ಕಾಂ ನಗರ ಉಪವಿಭಾಗ-1ರ ವ್ಯಾಪ್ತಿಯಲ್ಲಿ ಫೀಡರ್ ನಿರ್ವಹಣೆ ಹಾಗೂ ರಸ್ತೆ ಅಗಲೀಕರಣ ಕಾಮಗಾರಿ ಕೈಗೊಂಡಿರುವುದರಿಂದ ಮೇ.2ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಬೆಳಗುಂಬ, ಬೆಳಗುಂಬ ಗ್ರಾಮ ಲಂಬಾಣಿ ತಾಂಡ್ಯ, ಜೋತಿಪುರ, ಎಸ್.ಎಸ್. ಲೇಔಟ್ ಕುಂದೂರು ಗ್ರಾಮ, ವೆಂಕಟಾದ್ರಿ, ಬಡಾವಣೆಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ನಾಗರಾಜು ಎಚ್.ಪಿ. ಅವರು ಮನವಿ ಮಾಡಿದ್ದಾರೆ.

ದಾಖಲೆ ಕಳೆದಿವೆ

ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ಕಂದಿಕೆರೆ ಹೋಬಳಿಯ ತಿಮ್ಮನಹಳ್ಳಿ ಗ್ರಾಮದ ನಿವಾಸಿಯಾದ ಲಕ್ಷ್ಮಮ್ಮ ಕೋಂ ಲೇಟ್ ತಿಮ್ಮಯ್ಯ ಹಾಗೂ ಟಿ.ಎಂ. ರಂಗಪ್ಪ ಇವರಿಗೆ ಸೇರಿದ ಆಸ್ತಿಗೆ ಸಂಬಂಧಿಸಿದ ಮೂಲ ವಿಭಾಗ ಪತ್ರವು ದಿನಾಂಕ 06-04-2026 ರಂದು ಮನೆ ವಸ್ತುಗಳನ್ನು ಶಿಫ್ಟ್ ಮಾಡುವ ಸಮಯದಲ್ಲಿ ತಿಮ್ಮನಹಳ್ಳಿಯಲ್ಲಿ ಕಳೆದುಹೋಗಿದೆ.

ಈ ಆಸ್ತಿಯು ಚಿಕ್ಕನಾಯಕನಹಳ್ಳಿ ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ದಿನಾಂಕ 27-04-2002 ರಂದು 1ನೇ ಪುಸ್ತಕದ, 1621ನೇ ಸಂಪುಟದ, 224/236 ಪುಟಗಳಲ್ಲಿ, 2002-2003ನೇ ಸಾಲಿನ 155ನೇ ನಂಬರ್ ಆಗಿ ನೋಂದಣಿಯಾಗಿರುತ್ತದೆ.

ಈ ದಾಖಲೆಗಳು ಕಳೆದುಹೋಗಿರುವ ಬಗ್ಗೆ ಈಗಾಗಲೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದ್ದು, ಅದರ ಕ್ರಮ ಸಂಖ್ಯೆ: 2170935/2026 ಆಗಿರುತ್ತದೆ. ಈ ಮೂಲ ದಾಖಲೆಗಳು ಯಾರಿಗಾದರೂ ದೊರೆತಲ್ಲಿ ಸಮೀಪದ ಪೊಲೀಸ್ ಠಾಣೆಗೆ ಸಲ್ಲಿಸಲು ವಿನಂತಿಸಲಾಗಿದೆ.

IN THE COURT OF THE PRINCIPAL J.M.F.C AT MALUR
CMC 123/2026
PETITIONER: R.Sathish Kumar S/o Late Ravi Aged about 29 years R.Anand Kumar S/o Late Ravi Aged about 26 years R/o, Ward No.18., Patalamma Extension, Malur Town, Malur Talk
VS
RESPONDENT: Town Municipal counsel Malur, Town Malur.

Paper publication

WHEREAS the petitioners have filed the petition Under Section 13(3) of Registration of Birth and Death act, for obtaining the Death certificate Ravi S/o. Late Ragavan R/o. ward No.18, Patalamma Extension Malur Town, who was expired on 26-01-2003 at home.
The hearing date of the case is posted on 20/6/26, if any person having any claim or objections, has to appear before this Hon'ble court in person or by pleader in the above said hearing date at about 11.00 AM to answer the same, failing which the petition will be disposed off as ex-parte,
Given under my hand and seal of this court on this 24th day of APRIL 2026
PLACE : MALUR
DATE :24/4/2026
By the order of the court
Siresthedar
Office of the Principal and Civil judge and JMFC Court Malur
Advocate for petitioner
N.A.Sarvesha

ಜಿಪಂ ತ್ರೈಮಾಸಿಕ ಕೆಡಿಪಿ ಸಭೆ | ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್ ಅಧಿಕಾರಿಗಳಿಗೆ ಸೂಚನೆ

ಕುಡಿಯುವ ನೀರಿನ ಸಮಸ್ಯೆಗೆ ಕ್ರಮವಹಿಸಿ

ವಿಶ್ವವಾಣಿ ಸುದ್ದಿಮನೆ ಚಿಕ್ಕಬಳ್ಳಾಪುರ

ಹಿಂದೆಂದೂ ಕಂಡರಿಯದ ರೀತಿಯಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿ ಬಿಸಿ ಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದ್ದು, ಸಾರ್ವಜನಿಕರು ಆರೋಗ್ಯ ಇಲಾಖೆಯವರು ಕಾಲಕಾಲಕ್ಕೆ ನೀಡಲಿರುವ ಮಾರ್ಗಸೂಚಿ ಕ್ರಮಗಳನ್ನು ಪಾಲಿಸಿ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಉನ್ನತ ಶಿಕ್ಷಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಮನವಿ ಮಾಡಿದರು.

ನಗರ ಹೊರವಲಯ ಜಿಲ್ಲಾ ಪಂಚಾಯತ್ ನ ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಬುಧವಾರ ನಡೆದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಹವಾಮಾನ ಇಲಾಖೆಯ ಪ್ರಕಾರ ರಾಜ್ಯದಲ್ಲಿ ಈ ವರ್ಷ ವಾಡಿಕೆ ಮಳೆಗಿಂತ ಕಡಿಮೆ ಪ್ರಮಾಣದ ಮಳೆ ಆಗಲಿದೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಾಡಿಕೆ ಮಳೆ ಆಗಬಹುದು ಎಂದು ಅಭಿಪ್ರಾಯಿಸಿದೆ. ಮಳೆಯ ವೈಪರೀತ್ಯಗಳು ಏನೇ ಆದರೂ ನೀರು ಪೂರೈಕೆ ಹಾಗೂ ಇನ್ನಿತರ ಮುನ್ನೆಚ್ಚರಿಕೆ ಕ್ರಮಗಳನ್ನು ಜಿಲ್ಲಾಡಳಿತ ಕೈಗೊಳ್ಳಬೇಕೆಂದು ಸೂಚನೆ ನೀಡಲಾಗಿದೆ. ಜಲಜೀವನ್ ಮಿಷನ್ ಯೋಜನೆಯಡಿ ಜಿಲ್ಲೆಯಲ್ಲಿ ಕೊರೆದಿರುವ 313 ಕೊಳವೆ ಬಾವಿಗಳಿಗೆ ಒಂದೆರಡು ದಿನಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿ ಜನರಿಗೆ ನೀರು ಪೂರೈಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಅಲ್ಲದೆ ಕುಡಿಯುವ ನೀರಿನ ಪೂರೈಕೆಯ ತುರ್ತು ಕ್ರಮಕ್ಕಾಗಿ ರಾಜ್ಯ ಸರಕಅರ 1.5 ಕೋಟಿ ಹಣವನ್ನು ಜಿಲ್ಲೆಗೆ ಬಿಡುಗಡೆ ಮಾಡಿದೆ. ಜತೆಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಅಗತ್ಯಕ್ಕೆ ತಕ್ಕಂತೆ ಅನುದಾನವನ್ನು ಕಾಲವಿಳಂಬವಿಲ್ಲದೆ ಅನುದಾನ ಬಿಡುಗಡೆ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ ಎಂದು ಮಾಹಿತಿ

ಜಿಲ್ಲಾ ಪಂಚಾಯತ್ ನ ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಬುಧವಾರ ನಡೆದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್‌ಮಾತನಾಡಿದರು.

ನೀಡಿದರು.

ಚಿಕ್ಕಬಳ್ಳಾಪುರ ನಗರಕ್ಕೆ ಹೊಂದಿಕೊಂಡಿರುವ ಕಂದವಾರ ಮತ್ತು ಗೋಪಾಲಕೃಷ್ಣ ಅಮಾನಿ ಕೆರೆಗೆ ನಗರದ ಚರಂಡಿ ನೀರು ಸೇರುತ್ತಿರುವುದು ಗಮನಕ್ಕೆ ಬಂದಿದೆ. ಇದನ್ನು ತಡೆಯಲು ಚಿಕ್ಕಬಳ್ಳಾಪುರ ನಗರಕ್ಕೆ ಪೂರ್ಣಪ್ರಮಾಣದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ನಿರ್ಮಿಸಲು 30 ಕೋಟಿ ಅನುದಾನದಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದ್ದು, ಈ ಕಾರ್ಯ ಟೆಂಡರ್ ಪ್ರಕ್ರಿಯೆಯ ಹಂತದಲ್ಲಿದೆ ಎಂದು ಮಾಹಿತಿ ನೀಡಿದರು.

ಕಳೆದ ಫೆಬ್ರವರಿಯಲ್ಲಿ 12 ಗ್ರಾಮಗಳು, ಮಾರ್ಚ್ ನಲ್ಲಿ 23 ಗ್ರಾಮಗಳು, ಪ್ರಸ್ತುತ 31 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ನೀರಿನ ಸಮರ್ಪಕ ಪೂರೈಕೆಗಾಗಿ ಖಾಸಗಿ ಕೊಳವೆ ಮಾಲಿಕರ ಸಹಕಾರ ಪಡೆದು ನೀರು ಪೂರೈಸಲಾಗುತ್ತಿದೆ. ಮುಂದಿನ ದಿನಗಳಲ್ಲಿ 108 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು ಗುರುತಿಸಲಾಗಿದೆ. ಅದಕ್ಕೆ ತಕ್ಕಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಸಭೆಯಲ್ಲಿ ಸರಕಾರದ ಕಾರ್ಯದರ್ಶಿಗಳು ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಡಾ.ಎನ್.ಮಂಜುಳ, ಶಾಸಕ ಸುಬ್ಬಾರೆಡ್ಡಿ, ಕೆ.ಎಚ್.ಪುಟ್ಟಸ್ವಾಮಿಗೌಡ, ಬಿ.ಎನ್.ರವಿಕುಮಾರ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಾಧಿಕಾರದ ಉಪಾಧ್ಯಕ್ಷ ಸೂರಜ್ ಹೆಗಡೆ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎನ್.ರಮೇಶ್, ಜಿಲ್ಲಾಧಿಕಾರಿ ಜಿ.ಪ್ರಭು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ವೈ.ನವೀನ್ ಭಟ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ, ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಗಿರೀಶ್, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಎನ್.ಕೇಶವರೆಡ್ಡಿ, ಚಿಂತಾಮಣಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀನಾಥ್, ಚಿಮುಲ್ ಅಧ್ಯಕ್ಷ ಮಂಜುನಾಥರೆಡ್ಡಿ, ಉಪವಿಭಾಗಾಧಿಕಾರಿ ಡಿ.ಎಚ್.ಅಶ್ವಿನ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಅತಿಕ್ ಪಾಷಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

15 ದಿನಗಳಲ್ಲಿ ಹೊಸ ಬೋರ್ ವೆಲ್ ಕೊರೆಯಿಸಿ

ನೀರಿನ ಕೊರತೆ ನೀಗಿಸುವ ಸಲುವಾಗಿ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆದು ಸಮಸ್ಯೆ ನೀಗಿಸಲು ಈಗಾಗಲೇ ಸೂಚನೆ ನೀಡಲಾಗಿದೆ. ವರ್ಗ-1ರ ಅನುದಾನದಲ್ಲಿ ಶೇ.30-40ರಷ್ಟು ಕುಡಿಯುವ ನೀರಿಗೆ ಬಳಸಲು ಅವಕಾಶ ನೀಡಲಾಗಿದೆ. ಇದನ್ನು ಬಳಸಿಕೊಂಡು ಸಮಸ್ಯೆ ಆಗದಂತೆ ಎಚ್ಚರವಹಿಸಿ. ಸಣ್ಣ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಮತ್ತು ಜೆಜೆಎಂ ಅಧಿಕಾರಿಗಳು ಯುದ್ಧದ ತೀವ್ರತೆ ಬೋರ್‌ವೆಲ್ ಕೊರೆಸುವುದರ ಮೇಲೂ ಆಗಿದೆ. ಎಸ್.ಆರ್.ಬೆಲೆಗಿಂತ ಹೆಚ್ಚಾಗಿದೆ. ಬಿಟ್‌ಗಳ ಬೆಲೆ ಹೆಚ್ಚಳವಾಗಿರುವುದೇ ಹೊಸ ಬೋರ್‌ವೆಲ್ ಕೊರೆಸಲು ಏಜೆನ್ಸಿಗಳು ಮುಂದೆ ಬರದಂತೆ ಆಗಿದೆ. ಆ ಪ್ರಕಾರ ಮಂಚೇನಹಳ್ಳಿ- 3, ಚಿಕ್ಕಬಳ್ಳಾಪುರ -8, ಗೌರಿಬಿದನೂರು-15 ಬಾಗೇಪಲ್ಲಿ-1 ಹೊಸ ಬೋರ್ ಕೊರೆಯಬೇಕಿದೆ. 15 ದಿನಗಳಲ್ಲಿ ಹೊಸ ಬೋರ್ ಕೊರೆಸಬೇಕು. ಇಲ್ಲವಾದಲ್ಲಿ ಶಿಸ್ತುಕ್ರಮ ತೆಗೆದುಕೊಳ್ಳಿ ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಹಣದ ಲೆಕ್ಕ ಪ್ರತ್ಯೇಕವಾಗಿರಲಿ

ಜಿಲ್ಲೆಯಲ್ಲಿ ಒಟ್ಟು 1272 ಶುದ್ಧಕುಡಿಯುವ ನೀರಿನ ಘಟಕಗಳಿದ್ದು ಈ ಪೈಕಿ 120 ಕೆಲಸ ಮಾಡುತ್ತಿಲ್ಲ, 30 ದುರಸ್ಥಿಯಲ್ಲಿವೆ. ಉಳಿದಂತೆ 1152 ಕೆಲಸ ಮಾಡುತ್ತಿವೆ.ಇವುಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಅವುಗಳಿಂದ ಬರುವ ಹಣದ ಲೆಕ್ಕಚಾರವನ್ನು ಪ್ರತ್ಯೇಕವಾಗಿ ಇಡುವ ವ್ಯವಸ್ಥೆ ಆಗಬೇಕು.2012-13ರಲ್ಲಿ ಇವುಗಳು ಕಾರ್ಯಾರಂಭ ಮಾಡಿದಾಗ 20 ಲೀಟರ್‌ಗೆ 5 ರುಪಾಯಿ ಪಡೆಯಲಾಗುತ್ತಿತ್ತು. ನಂತರದಲ್ಲಿ 10 ರೂಪಾಯಿ ಗೇರಿಸಲಾಗಿದೆ.ಇಷ್ಟಾದರೂ ಇದರ ಲೆಕ್ಕಾಚಾರ ಅಸ್ಪಷ್ಟವಾಗಿದೆ.ಇದು ಸೇವಾವಲಯವಾಗಿದ್ದು ಲಾಭದ ದೃಷ್ಟಿ ಇರಬಾರದು.ಇಲ್ಲಿನ ಹಣ ಇದರ ಯಂತ್ರೋಪಕರಣಗಳ ದುರಸ್ಥಿಗೆ ಬಳಸಬೇಕು.ಆದರೆ ಇದರ ಉಸ್ತುವಾರಿ ಮಾಡುತ್ತಿದ್ದವರು ಲಕ್ಷಗಟ್ಟಲೆ ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ. ಮುಂದೆ ಹೀಗಾಗಬಾರದು ಎಂದು ಎಚ್ಚರಿಸಿದರು.

ಖಚಿತ ಅಂಕಿ ಅಂಶಗಳ ಮಾಹಿತಿಯಿರಬೇಕು !

ಬೇಸಿಗೆ ತೀವ್ರಗೊಂಡಿದ್ದು ಬಿಸಿಹವೆ ಹೆಚ್ಚಾಗಿದ್ದು, ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಬಹುದು. ಇದನ್ನು ಮನಗಂಡು ತಹಸೀಲ್ದಾರ್ ಮತ್ತು ಶಾಸಕರ ನೇತೃತ್ವದಲ್ಲಿ ನಡೆಯುವ ಸಭೆಯ ಮಾಹಿತಿ, ತಹಸೀಲ್ದಾರ್‌ಗಳು ನಡೆಸುವ ಪಿಡಿಒ ಇತ್ಯಾದಿ ಸಂಬಂಧಿತ ಅಧಿಕಾರಿಗಳ ನೇತೃತ್ವದಲ್ಲಿ ನಡೆಸುವ ಸಭೆಯ ಮಾಹಿತಿ ಒಂದೇ ಆಗಿರಬೇಕು. ನಿಮ್ಮ ತಾಲೂಕಿನಲ್ಲಿ ಎಷ್ಟು ಹಳ್ಳಿಗಳಲ್ಲಿ ಹೋಬಳಿ ಪಂಚಾಯಿತಿ ಕೇಂದ್ರಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ ಎಂಬುದನ್ನು ಖಚಿತ ಅಂಕಿ ಅಂಶಗಳ ಸಹಿತಿ ತಿಳಿಸುವ ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಚನ್ನರಾಯಪುರ ರೈತರ ಪರವಾಗಿ ಪ್ರತಿಭಟನೆ

ಕೋಲಾರ: ತಾಲೂಕಿನ ಹುತ್ತೂರು ಹೋಬಳಿಯ ಚನ್ನರಾಯಪುರ ಬೇಷರಕ್ ವೆಂಕಟಾಪುರದಲ್ಲಿ 80 ಎಕರೆ ಜಮೀನನ್ನು 70 ವರ್ಷದಿಂದ ಗ್ರಾಮಸ್ಥರು ಸಾಗುವಳಿ ಮಾಡುತ್ತಾ ಬಂದಿದ್ದರೂ ಕಂದಾಯ ಇಲಾಖೆಯವರು ಸಾಗುವಳಿ ಚೀಟಿ ಕೊಡದೆ ಭೂಗಳ್ಳರಿಗೆ ನಕಲಿ ದಾಖಲೆಗಳನ್ನು ಕೊಟ್ಟಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಅಂಬೇಡ್ಕರ್ ಸೇವಾ ಸಮಿತಿ ಕರ್ನಾಟಕ ಸಂಘಟನೆಯಿಂದ ಇಲ್ಲಿನ ತಹಸೀಲ್ದಾರ್ ಕಚೇರಿ ಮುಂದೆ ನೂರಾರು ಮಂದಿ ಪ್ರತಿಭಟನೆ ನಡೆಸಿದರು.

ವೆಂಕಟಾಪುರದ 80 ಎಕರೆ ಜಮೀನಿನಲ್ಲಿ ಚನ್ನರಾಯಪುರದ ದಲಿತ ಮತ್ತು ಹಿಂದುಳಿದವರು 70 ವರ್ಷದಿಂದ ಸ್ವಾಧೀನದಲ್ಲಿದ್ದು ಸಾಗುವಳಿ ಮಾಡುತ್ತಿದ್ದಾರೆ. 30 ವರ್ಷದ ಹಿಂದೆ ಸ್ಥಳಕ್ಕೆ ಭೇಟಿ ನೀಡಿದ್ದ ತಹಸೀಲ್ದಾರ್ ಅವರು ಅನುಭವದ ಆಧಾರದ ಮೇಲೆ ಅಳತೆ ಮಾಡಿ ಸರ್ವೇ ನಕ್ಷೆಯನ್ನು ತಯಾರಿಸಿ ಎಸಿಯವರಿಗೆ ವರದಿ ನೀಡಿದ್ದಾರೆ. ಹಾಗಿದ್ದರೂ ಕಂದಾಯ ಇಲಾಖೆ ಅಧಿಕಾರಿಗಳು ರೈತರಿಗೆ ಮೋಸ ಮಾಡಿ

ಅಂಬೇಡ್ಕರ್‌ಸೇವಾ ಸಮಿತಿ ಕರ್ನಾಟಕ ಸಂಘಟನೆಯಿಂದ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ಅನಾಮಧೇಯ ವ್ಯಕ್ತಿಗಳಿಗೆ ದಾಖಲೆಗಳನ್ನು ಮಾಡಿಕೊಟ್ಟಿದ್ದು, ಅವರು ಹೊಸಕೋಟೆಯ ರಿಯಲ್ ಎಸ್ಟೇಟ್ ಕುಳ ಚಿರಂಜೀವಿಗೆ ಮಾರಾಟ ಮಾಡಿದ್ದಾರೆ. ಇದೀಗ ಬಲಾಢ್ಯರು ರೈತರನ್ನು ಹೊರಹಾಕಿ ಕಾಂಪೌಂಡ್ ಹಾಕಲು ಯತ್ನಿಸುತ್ತಿದ್ದು, ಇನ್ನಾದರೂ ತಹಸೀಲ್ದಾರ್ ಅವರು ಸ್ಥಳಕ್ಕೆ ಭೇಟಿ ನೀಡಿ, ರೈತರಿಗೆ ಸಾಗುವಳಿ ಚೀಟಿ ಕೊಟ್ಟು ಬಡವರನ್ನು ಉಳಿಸಬೇಕೆಂದು ಅಂಬೇಡ್ಕರ್ ಸೇವಾ ಸಮಿತಿ ಕರ್ನಾಟಕ ಸಂಘಟನೆ ಅಧ್ಯಕ್ಷ ಸಂದೇಶ್ ಆಗ್ರಹಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಹಂಸಮರಿಯ ಅವರು ಈ ಸಂಬಂಧ ಹಿರಿಯ ಅಧಿಕಾರಿಗಳ ಜತೆಗೆ ಚರ್ಚೆ ಮಾಡಿ ಕ್ರಮ ಕೈಗೊಳ್ಳುವುದಾಗಿ ಪ್ರತಿಕ್ರಿಯಿಸಿದರು.

ಅಂಬೇಡ್ಕರ್ ಸೇವಾ ಸಮಿತಿ ಕರ್ನಾಟಕ ಸಂಘಟನೆ ಮುಖಂಡರಾದ ಅನಿಲ್ ಕುಮಾರ್, ಕಾಂತರಾಜ್, ಚಲಪತಿ, ಪಾರ್ವತಮ್ಮ, ವೆಂಕಟಮ್ಮ, ಶಾಂತಮ್ಮ, ಕಾಂತಮ್ಮ, ಮಂಜುನಾಥ್ ಪ್ರತಿಭಟನೆ ನೇತೃತ್ವ ವಹಿಸಿದ್ದರು. ಗಲ್ಪೇಟೆ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಶ್ರೀಶಾರದ ಶಾಲೆಯ ಎಸ್ಸೆಸ್ಸೆಲ್ಸಿ ಸಾಧಕರಿಗೆ ಸನ್ಮಾನ

ಬಾಗೇಪಲ್ಲಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿನ ಯಲ್ಲಂಪಲ್ಲಿ ಶ್ರೀ ಶಾರದ ಮಹಿಳಾ ವಿದ್ಯಾ ಸಂಸ್ಥೆ ಯ ಒಟ್ಟು 22 ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಗಳಿಸಿ 100% ಫಲಿತಾಂಶ ಬಂದಿದ್ದು ಬುಧವಾರ ಶಾಲಾ ಆಡಳಿತ ಮಂಡಳಿ ಎಸ್‌ಎಸ್‌ಎಲ್‌ಸಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಬಾಗೇಪಲ್ಲಿ ತಾಲೂಕಿನ ಯಲ್ಲಂಪಲ್ಲಿ ಶ್ರೀ ಶಾರದ ಮಹಿಳಾ ವಿದ್ಯಾಸಂಸ್ಥೆ ಆವರಣದಲ್ಲಿ ಶಾಲಾ ಆಡಳಿತ ಮಂಡಳಿ ಹಾಗೂ ಮುಖ್ಯ ಅತಿಥಿಗಳು ಎಸ್‌ಎಸ್‌ಎಲ್‌ಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಶಾಲು ಹೊದಿಸಿ, ಹಾರ ಹಾಕಿ, ಫಲ ತಾಂಬೂಲ ನೀಡಿ ಗೌರವಿಸಿದರು. ಮುಂದಿನ ವಿದ್ಯಾರ್ಥಿ ಜೀವನದಲ್ಲಿಯೂ ಇನ್ನೂ ಹೆಚ್ಚಿನ ಸಾಧನೆ ಮಾಡುವಂತೆ ಹಾರೈಸಿದರು.

ಈ ಸಂದರ್ಭದಲ್ಲಿ ಕವಿ ಹಾಗೂ ಶಿಕ್ಷಕ ವಲ್ಲಿಬಾಷಾ ಮಾತನಾಡಿ, ವಿದ್ಯಾರ್ಥಿಗಳಿಗೆ ಎಸ್ ಎಸ್‌ಎಲ್‌ಸಿ ಪರೀಕ್ಷೆ ಮುಂದಿನ ಜೀವನಕ್ಕೆ ಪ್ರಮುಖ ಘಟ್ಟವಾಗಿದ್ದು ಇಲ್ಲಿಂದ ನಿಮ್ಮ ಪಯಣ ದೊಡ್ಡ ಮಟ್ಟದಲ್ಲಿ ಸಾಧನೆ ಮಾಡುವ ಹಾದಿಯಾಗಲಿದೆ. ಈ ನಿಟ್ಟಿನಲ್ಲಿ ಶಾಲಾ ಆಡಳಿತ ಮಂಡಳಿಯ ಈ ಸನ್ಮಾನವು ಮುಂದೆ ತಾಲೂಕಿಗೆ ಕೀರ್ತಿ ತರುವ ಹಂತದಲ್ಲಿ ನಿಮ್ಮ ಸಾಧನೆಗೆ ದಾರಿ

ಬಾಗೇಪಲ್ಲಿ ತಾಲೂಕಿನ ಯಲ್ಲಂಪಲ್ಲಿ ಶ್ರೀ ಶಾರದ ಮಹಿಳಾ ವಿದ್ಯಾ ಸಂಸ್ಥೆ ಆವರಣದಲ್ಲಿ ಶಾಲಾ ಆಡಳಿತ ಮಂಡಳಿ ಹಾಗೂ ಮುಖ್ಯ ಅತಿಥಿಗಳು ಎಸ್‌ಎಸ್‌ಎಲ್‌ಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಶಾಲು ಹೊದಿಸಿ, ಹಾರ ಹಾಕಿ, ಫಲ ತಾಂಬೂಲ ನೀಡಿ ಸನ್ಮಾನಿಸಿದರು.

ದೀಪವಾಗಲಿ ಎಂದು ಕಿವಿಮಾತು ಹೇಳಿದರು.

ತಿಮ್ಮಂಪಲ್ಲಿ ಮುಖ್ಯ ಶಿಕ್ಷಕ ಬಾಲರಾಜು ಮಾತನಾಡಿ, ವಿದ್ಯಾರ್ಥಿಗಳಿಗೆ ಅಭಿನಂದಿಸುವ ಮೂಲಕ ಅವರ ಶ್ರಮಕ್ಕೆ ಪ್ರೋತ್ಸಾಹ ನೀಡಿದ್ದು ಈ ಸನ್ಮಾನಗಳು ನಿಮಗೆ ಹೆಚ್ಚಿನ ಜವಾಬ್ದಾರಿಯನ್ನು ಹೊರಿಸುತ್ತಿವೆ. ಮುಂದೆ ಪಿಯುಸಿ, ಡಿಗ್ರಿ ಸೇರಿದಂತೆ ಸ್ನಾತಕೋತ್ತರ ಪದವಿ, ಐಎಎಸ್. ಕೆಎಎಸ್ ಪರೀಕ್ಷೆಗಳಲ್ಲಿ ನಿಮ್ಮ ಸಾಧನೆ ಇದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ನಿರೀಕ್ಷೆ ಮಾಡುವಂತೆ ಈ ಸನ್ಮಾನದ ಜವಾಬ್ದಾರಿ ನಿಮ್ಮನ್ನು ಸದಾ ಎಚ್ಚರಿಸಿ ನಿಮ್ಮ ಶ್ರದ್ದೆ ಮತ್ತು ಏಕಾಗ್ರತೆಗೆ ದಾರಿದೀಪವಾಗಲಿ ಎಂದು ಸಲಹೆ ನೀಡಿದರು.

ಶ್ರೀ ಶಾರದಾ ಮಹಿಳಾ ವಿದ್ಯಾ ಸಂಸ್ಥೆ ಸಂಸ್ಥಾಪಕ ಕೃಷ್ಣಾರೆಡ್ಡಿ ಮಾತನಾಡಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಅನುಸೂಯಮ್ಮ, ಅಯಿಷಾ ಹುಸೇನ್, ಮಹಬೂಬ್ ಉನಿಸಾ, ಗಿರೀಜಾ, ಆನಂದ್, ಪವನ್, ಮಂಜುನಾಥ್ ರೆಡ್ಡಿ ಸೇರಿದಂತೆ ಎಲ್ಲ ಶಾಲಾ ಮಕ್ಕಳ ಪೋಷಕರು, ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು ಪೋಷಕರು ಸಾರ್ವಜನಿಕರು ಹಾಜರಿದ್ದರು.

ಆನೆ ದಾಳಿ ತಡೆಗೆ ರೈಲ್ವೆ ಹಳಿ ಬ್ಯಾರಿಕೇಡ್

ಕನಕಪುರ: ಕುಡಿಯುವ ನೀರು ಪೂರೈಕೆ, ಕಾಡುಪ್ರಾಣಿಗಳ ದಾಳಿ ಹಾಗೂ ಕ್ಷೇತ್ರದಲ್ಲಿನ ಪ್ರಗತಿ

ಕಾರ್ಯಗಳ ಬಗ್ಗೆ ಇಂದಿನ ಕೆಡಿಪಿ ಸಭೆಯಲ್ಲಿ ಚರ್ಚೆ ಮಾಡಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ತಾಲೂಕು ಕಚೇರಿ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಪ್ರತಿಕ್ರಿಯೆ ನೀಡಿದರು.

ಬೇಸಿಗೆ ಹಿನ್ನೆಲೆಯಲ್ಲಿ ನೀರು, ಆಹಾರ ಹುಡುಕಿಕೊಂಡು ಆನೆಗಳು ಹಳ್ಳಿಗಳತ್ತ ಬರುತ್ತಿವೆ. ಆನೆಗಳು ಬರುವುದನ್ನು ತಪ್ಪಿಸಲು ರೈಲ್ವೇ ಹಳಿ ಕಂಬಿಯ ಬ್ಯಾರಿಕೇಡ್ ನಿರ್ಮಿಸಲು ಸಾಕಷ್ಟು ಅನುದಾನ ನೀಡಲಾಗಿದೆ. ನಿನ್ನೆ ಕೂಡ ಅರಣ್ಯ ಇಲಾಖೆ ಸಚಿವರು ಹಾಗೂ ಅಧಿಕಾರಿಗಳ ಜತೆ ಚರ್ಚೆ ಮಾಡಿದ್ದು ಮತ್ತಷ್ಟು ಅನುದಾನ ನೀಡುತ್ತಿದ್ದಾರೆ. ಇತ್ತೀಚೆಗೆ ಒಂದು ಸಾವು ಸಂಭವಿಸಿದ್ದು, ಚನ್ನಪಟ್ಟಣದಲ್ಲೂ ಸಮಸ್ಯೆಯಾಗಿದೆ. ಕುಡಿಯುವ ನೀರಿನ ಸಮಸ್ಯೆ ಎದುರಾಗಿರುವ ಬಗ್ಗೆ ವರದಿ ಬಂದಿರುವ ಹಿನ್ನೆಲೆಯಲ್ಲಿ ಇಂದು ಪರಿಶೀಲನಾ ಸಭೆ ಮಾಡಿದ್ದೇವೆ ಎಂದರು.

ಪ್ರಾಣಿಗಳ ರಕ್ಷಣೆಗಾಗಿ ಟೊಯೋಟಾ ಅವರು ಇಂದು ಎರಡು ವಾಹನಗಳನ್ನು ನಮ್ಮ ಜಿಲ್ಲೆಗೆ ನೀಡಿದ್ದಾರೆ. ಡ್ರೋನ್ ಮೂಲಕ ಪ್ರಾಣಿಗಳ ಸಮೀಕ್ಷೆ ಮಾಡಲು ಹಾಗೂ ಅವುಗಳ ಚಲನವಲನಗಳ ಮೇಲೆ ನಿಗಾ ಇಡಲು ಕ್ಯಾಮೆರಾ ವ್ಯವಸ್ಥೆ ಮಾಡಲಾಗಿದೆ. ನಮ್ಮ ಭಾಗ ಸಂಗಮ, ಬನ್ನೇರುಘಟ್ಟಕ್ಕೆ ಹೊಂದಿಕೊಂಡಿರುವುದರಿಂದ ಪ್ರಾಣಿಗಳ ಓಡಾಟ ಹೆಚ್ಚಾಗಿದೆ. ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ. ಒಂದೇ ಬಾರಿಗೆ ಎಲ್ಲಾ ಕಡೆ ರೈಲ್ವೆ ಬ್ಯಾರಿಕೇಡ್ ಮಾಡಲು ಆಗುವುದಿಲ್ಲ. ಸಾತನೂರು ಹೋಬಳಿಯಲ್ಲಿ ಅಳವಡಿಸಿದ್ದೇವೆ, ಚನ್ನಪಟ್ಟಣ, ಕೋಡಿಹಳ್ಳಿ ಹೋಬಳಿ ಮಾಡಬೇಕಿದೆ.

ಈ ಬಾರಿ ಬಜೆಟ್ ನಲ್ಲಿ ಅದಕ್ಕೆ ಅನುದಾನ ನೀಡಲಾಗಿದೆ ಎಂದು ವಿವರಿಸಿದರು. ಇದೇ ಸಂದರ್ಭದಲ್ಲಿ ತಾಲೂಕು ಪಂಚಾಯತ್ ನೂತನ ಸಭಾಂಗಣವನ್ನು ಉದ್ಘಾಟಿಸಿದರು.

ಬಮೂಲ್ ಅಧ್ಯಕ್ಷ ಡಿ ಕೆ ಸುರೇಶ್, ಎಂಎಲ್ಸಿಗಳಾದ ರವಿ, ಸುಧಾಮದಾಸ್, ಜಿಲ್ಲಾಧಿಕಾರಿ ಯಶವಂತ್ ಗುರುಕರ್ ಇದ್ದರು.

ಮುಂಗಾರಿಗೆ ಬಿತ್ತನೆ ಬೀಜ, ಗೊಬ್ಬರ ಖಚಿತಪಡಿಸಿ

ತುಮಕೂರು: ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧ್ಯಕ್ಷತೆಯಲ್ಲಿ ತುಮಕೂರು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ಬುಧವಾರ ಜಿಲ್ಲಾಧಿಕಾರಿಯ ಕಚೇರಿ ಸಭಾಂಗಣದಲ್ಲಿ ಜರುಗಿತು.

ಸಭೆಯಲ್ಲಿ ಪ್ರಸ್ತುತ ಮುಂಗಾರು ಹಂಗಾಮಿನ ಋತುಮಾನ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿ, ಜಿಲ್ಲೆಯಾದ್ಯಂತ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಹಾಗೂ ತುರ್ತು ಕ್ರಮಗಳ ಕುರಿತು ಚರ್ಚಿಸಲಾಯಿತು.

ಜಿಲ್ಲಾಧಿಕಾರಿಗಳು ಮುಂಗಾರು ಹಂಗಾಮಿನ ಹಿನ್ನೆಲೆಯಲ್ಲಿ ರೈತರಿಗೆ ಅಗತ್ಯವಿರುವ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಸಮರ್ಪಕ ಲಭ್ಯತೆ ಖಚಿತಪಡಿಸಿಕೊಳ್ಳುವಂತೆ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಮಳೆಯಿಂದ ಉಂಟಾಗುವ ಹಾನಿಗಳ ಕುರಿತು ತಾಲೂಕುವಾರು ಮಾಹಿತಿ ಸಂಗ್ರಹಿಸಿ, ಮಾನವ ಹಾನಿ, ಜಾನುವಾರು ಹಾನಿ, ಮನೆ ಹಾನಿ ಸೇರಿದಂತೆ ಕೃಷಿ ಮತ್ತು ತೋಟಗಾರಿಕೆ ಬೆಳೆ ಹಾನಿಗಳ ವಿವರಗಳನ್ನು ತ್ವರಿತವಾಗಿ ದಾಖಲಿಸಿ ಪರಿಹಾರ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜಿನಲ್ಲಿ ವ್ಯತ್ಯಯವಾಗ ದಂತೆ ಅಗತ್ಯ ಕ್ರಮ ವಹಿಸುವಂತೆ ಸಂಬಂಧಿತ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸಾರ್ವಜನಿಕರಿಗೆ ಪೂರೈಕೆಯಾಗುವ ಕುಡಿಯುವ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಪರೀಕ್ಷಿಸುವು

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ತುಮಕೂರು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧ್ಯಕ್ಷತೆಯಲ್ಲಿ ನಡೆಯಿತು.

ದರ ಜತೆಗೆ, ಸರಕಾರಿ ವಸತಿ ನಿಲಯಗಳು ಹಾಗೂ ಹಾಸ್ಟೆಲ್‌ಗಳಲ್ಲಿ ಕುಡಿಯುವ ನೀರಿನ ಮಾದರಿಗಳನ್ನು ಪರಿಶೀಲಿಸಿ, ಕ್ಲೋರಿನೇಷನ್ ಪ್ರಕ್ರಿಯೆಯನ್ನು ಕಡ್ಡಾಯವಾಗಿ ಕೈಗೊಳ್ಳುವಂತೆ ತಿಳಿಸಲಾಯಿತು.

ಮಳೆಗಾಲದಲ್ಲಿ ಆರೋಗ್ಯ ಸಮಸ್ಯೆಗಳು ಉಂಟಾಗದಂತೆ ಚರಂಡಿ ಮತ್ತು ತ್ಯಾಜ್ಯ ವಿಲೇವಾರಿ ಪ್ರದೇಶಗಳ ಸ್ವಚ್ಛತೆ, ಕ್ಲೀನಿಂಗ್ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸೂಚಿಸಿದ ಜಿಲ್ಲಾಧಿಕಾರಿಗಳು, ಕಲುಷಿತ ನೀರು ಕುಡಿಯುವ ನೀರಿನ ಮೂಲಗಳಿಗೆ ಸೇರ್ಪಡೆಯಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಎಲ್ಲ ತಹಶೀಲ್ದಾರರು, ತಾಲೂಕು ಕಾರ್ಯ ನಿರ್ವಹಣಾಧಿಕಾರಿಗಳು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ಎಲ್ಲರೂ ಕೇಂದ್ರ ಸ್ಥಾನದಲ್ಲಿ ಇರಬೇಕು. ಮಳೆ ಮುನ್ಸೂಚನೆ ಇರುವುದರಿಂದ ಏನೇ ಅನಾಹುತಗಳಾದರು ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನ ವರದಿಯನ್ನು ಮುಂದಿನ ಪ್ರಾಧಿಕಾರಕ್ಕೆ ಕಳಿಸಿಕೊಡಲು ಸೂಚಿಸಿದರು.

ಈ ಕುರಿತಂತೆ ಜಿಲ್ಲಾ ಸಹಾಯವಾಣಿ ಸಂಖ್ಯೆ 7304975519, 0816-2213402ಕ್ಕೆ ತುರ್ತು ಸಂದರ್ಭದಲ್ಲಿ ಕರೆ ಮಾಡಲು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಎನ್.ತಿಪ್ಪೇಸ್ವಾಮಿ, ಜಂಟಿ ಕೃಷಿ ನಿರ್ದೇಶಕ ಲಕ್ಷ್ಮಣ್ ತೋಟಗಾರಿಕೆ ಉಪನಿರ್ದೇಶಕಿ ಶಾರದಮ್ಮ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಯೋಗಾನಂದ, ಡಿಎಚ್‌ಒ ಡಾ.ಚಂದ್ರಶೇಖರ್‌ಮತ್ತು ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ವಿರಾಮ
ಪ್ರತಿ ಭಾನುವಾರ

ಭಾರತೀಯ ಸ್ಟೇಟ್ ಬ್ಯಾಂಕ್
SBI
ಅಗ್ರಿ ಅಂಡ್ ಎಮ್‌ಎಸ್‌ಎಮ್‌ಇ ಕ್ರೆಡಿಟ್ ಸೆಂಟರ್ ಹಾಸನ, ಮೊದಲನೆ ಮಹಡಿ, ಎಸ್‌ಬಿಐ ಎನ್.ಆರ್. ಸರ್ಕಲ್ ಶಾಖೆ ಮೇಲೆ, ಎನ್.ಆರ್. ಸರ್ಕಲ್, ಹಾಸನ-573201
E-mail: racc63077.rndbban@sbi.co.in

ತಗಾದೆ ನೋಟಿಸ್

ಈ ಕೆಳಗಿನ ಸಾಲಗಾರರು **ಡೈರಿ ಸರ್ಕಲ್ ಶಾಖೆ, ಹಾಸನ (40872)** ಬ್ಯಾಂಕಿನಿಂದ ಪಡೆದ ಸಾಲದ ಸೌಲಭ್ಯದ ಅಸಲು ಮತ್ತು ಬಡ್ಡಿಯನ್ನು ಮರುಪಾವತಿಸುವಲ್ಲಿ ವಿಫಲರಾಗಿದ್ದಾರೆ ಮತ್ತು ಸಾಲಗಳನ್ನು ಅನುತ್ಪಾದಕ ಆಸ್ತಿಗಳು ಎಂದು ವರ್ಗೀಕರಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಸೆಕ್ಯುರಿಟೈಜೇಶನ್ ಅಂಡ್ ರಿಕನ್ಸಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002ರ ಸೆಕ್ಷನ್ 13(2) ರ ಅಡಿಯಲ್ಲಿ ಅವರಿಗೆ ನೋಟಿಸ್‌ಗಳನ್ನು ನೀಡಲಾಯಿತು ಹಾಗೂ ಅವರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

ಸದರಿ ಕಾಯ್ದೆಯ ಸೆಕ್ಷನ್ 13(2)ರ ಅಡಿಯಲ್ಲಿ ನೀಡಲಾದ ಹಿಂದಿನ ತಗಾದೆ ನೋಟಿಸ್‌ಗಳು ಮತ್ತು ಸದರಿ ಕಾಯಿದೆಯ ಅಡಿಯಲ್ಲಿನ ನಂತರದ ಪ್ರಕ್ರಿಯೆಗಳನ್ನು ರದ್ದುಗೊಳಿಸಲಾಗಿದೆ ಅಥವಾ ಹಿಂಪಡೆಯಲಾಗಿದೆ ಎಂಬುದನ್ನು ದಯವಿಟ್ಟು ಗಮನಿಸಿ.

- **ಡಿಮ್ಯಾಂಡ್ ನೋಟಿಸ್ ದಿನಾಂಕ:** 18-02-2026 • **ಎನ್‌ಪಿಎ ದಿನಾಂಕ:** 17-02-2026
- **ಒಟ್ಟು ಸಾಲದ ಮೊತ್ತ:** ರೂ. 34,64,353/- (ಮೂವತ್ತನಾಲ್ಕು ಲಕ್ಷದ ಆರವತ್ತನಾಲ್ಕು ಸಾವಿರದ ಮೂನ್ನೂರ ಐವತ್ತಮೂರು ರೂಪಾಯಿಗಳು ಮಾತ್ರ) ದಿನಾಂಕ 18-02-2026 ರವರಗೆ+ನಂತರದ ಬಡ್ಡಿ ಹಾಗೂ ಇತರೆ ಶುಲ್ಕಗಳು.
- **ಸಾಲಗಾರರ ಹೆಸರು ಮತ್ತು ವಿಳಾಸ:** ಮೇ. ಶ್ರೀ ಲಕ್ಷ್ಮೀವೆಂಕಟೇಶ್ವರ ಡಿಸ್ಪೋಸಬಲ್ಸ್, ಪ್ರೋ: ವೆಂಕಟೇಶ ಎ.ಬಿ., ನಂ. 417, KIADBಕೈಗಾರಿಕಾ ಪ್ರದೇಶ, ಹೊಳೆನರಸೀಪುರ ರಸ್ತೆ, ಕೊಕ್ಕನಘಟ್ಟ ಗ್ರಾಮ, ಹಾಸನ-573201. ವಾಸಸ್ಥಳ: ವೆಂಕಟೇಶ ಎ.ಬಿ. S/o ಬಸವರಾಜಪ್ಪ, ಮುಖ್ಯ ರಸ್ತೆ, ಕಾತಲಗೆರೆ ಗ್ರಾಮ ಮತ್ತು ಅಂಚೆ, ದಾವಣಗೆರೆ ಜಿಲ್ಲೆ-577219 ಹಾಗೂ ಸಿರಿ ನಿಲಯ, ಗಣಪತಿ ದೇವಸ್ಥಾನದ ಹತ್ತಿರ, ಸತ್ಯಮಂಗಲ ಲೇಔಟ್, ಇಂದ್ರನಗರ, ಹಾಸನ-573201.
- **ಅಡಮಾನವಿಟ್ಟ ಸ್ವತ್ತಿನ ವಿವರಗಳು:**
  1) CC **ಖಾತೆಗೆ ಅಡಮಾನ - ದಾಸ್ತಾನುಗಳು ಹಾಗೂ ಸ್ವೀಕಾರಾರ್ಹಗಳು**
  2) TL **ಖಾತೆಗೆ ಅಡಮಾನ - ಉಪಕರಣಗಳು ಮತ್ತು ಯಂತ್ರೋಪಕರಣಗಳು.**

ಈ ಮೇಲಿನ ಸಾಲಗಾರರು ಮತ್ತು / ಅಥವಾ ಅವರ ಜಾಮೀನುದಾರರ (ಅನ್ವಹಿಸಿದಾಗಲೆಲ್ಲಾ) ಈ ನೋಟೀಸ್‌ನ ಪ್ರಕಟಣೆಯ ದಿನಾಂಕದಿಂದ **60 ದಿನಗಳೊಳಗೆ** ಬಾಕಿ ಮೊತ್ತವನ್ನು ಪಾವತಿಸಲು ಈ ಮೂಲಕ ಕರೆ ನೀಡಲಾಗಿದೆ. ವಿಫಲವಾದರೆ ಅವಧಿ ಮುಗಿದ ನಂತರ ಸೆಕ್ಯುರಿಟೈಜೇಶನ್ ಅಂಡ್ ರಿಕನ್ಸಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ಸೆಕ್ಷನ್ 13ರ ಉಪ-ವಿಭಾಗ (4)ರ ಅಡಿಯಲ್ಲಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ದಿನಾಂಕ: 30.04.2026 — **ಸಹಿ/- ಅಧಿಕೃತ ಅಧಿಕಾರಿ, ಭಾರತೀಯ ಸ್ಟೇಟ್ ಬ್ಯಾಂಕ್**
ಸ್ಥಳ: ಹಾಸನ — **(SARFAESI ಕಾಯಿದೆ-2002 ಅಡಿಯಲ್ಲಿ)**

ಹಿರಿಯ ವಿದ್ಯಾರ್ಥಿಗಳಿಂದ ಶಾಲೆಗಳು ಅಭಿವೃದ್ಧಿಯಾಗಲಿ

ಹುಳಿಯಾರು: ತಿಮ್ಮನಹಳ್ಳಿ ಗ್ರಾಮದ ಶ್ರೀಅಯ್ಯಪ್ಪಸ್ವಾಮಿ ಸನ್ನಿಧಿಯಲ್ಲಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಪ್ರಿಯದರ್ಶಿನಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಶ್ರೀಶಾರದಾ ವಿದ್ಯಾಪೀಠ ಪ್ರೌಢಶಾಲೆ ಮತ್ತು ಕಾಲೇಜಿನ 1989 ರಿಂದ 2001ನೇ ಸಾಲಿನವರೆಗಿನ ಹಿರಿಯ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಒಕ್ಕೂಟದ ವತಿಯಿಂದ ಸಮಸ್ತ ಗುರು ವೃಂದಕ್ಕೆ ಗುರು ವಂದನಾ ಹಾಗೂ ಸ್ನೇಹಿತರ ಸವಿನೆನಪಿಗಾಗಿ ‘ಸ್ನೇಹ ಸಮ್ಮಿಲನ ಸಂಗಮ ಕಾರ್ಯಕ್ರಮ’ ಅದ್ದೂರಿಯಾಗಿ ಆಯೋಜಿಸಲಾಗಿತ್ತು.

ಮೂರೂ ಶಿಕ್ಷಣ ಸಂಸ್ಥೆಗಳ ತ್ರಿವೇಣಿ ಸಂಗಮದ ರೂಪದಲ್ಲಿ ನಡೆದ ಈ ಅಪೂರ್ವ ಕಾರ್ಯಕ್ರಮ ಗ್ರಾಮಸ್ಥರು, ಹಳೆ ವಿದ್ಯಾರ್ಥಿಗಳು ಹಾಗೂ ಗಣ್ಯರ ಸಮ್ಮುಖದಲ್ಲಿ ಅತ್ಯಂತ ಯಶಸ್ವಿಯಾಗಿ ನೆರವೇರಿತು. ಹಲವು ವರ್ಷಗಳ ಬಳಿಕ ಒಂದೇ ವೇದಿಕೆಯಲ್ಲಿ ಸೇರಿದ್ದ ಹಳೆ ವಿದ್ಯಾರ್ಥಿಗಳು ತಮ್ಮ ಬಾಲ್ಯದ ನೆನಪುಗಳನ್ನು ಹಂಚಿಕೊಂಡು ಭಾವುಕರಾದರು.

ಕಾರ್ಯಕ್ರಮದಲ್ಲಿ ನಿವೃತ್ತ ಕನ್ನಡ ಅಧ್ಯಾಪಕ ಬಿ.ಸಿ.ಗಂಗಾಧರಯ್ಯ ಅವರು ಮಾತನಾಡಿ, ಎಲ್ಲ ವಿದ್ಯಾರ್ಥಿಗಳಿಗೆ ಆಶೀರ್ವಚನ ನೀಡಿದರು. ಸಂತ

ವಿದ್ಯಾರ್ಥಿ-ವಿದ್ಯಾರ್ಥಿನಿಯರ ಒಕ್ಕೂಟದ ವತಿಯಿಂದ ಸಮಸ್ತ ಗುರು ವೃಂದಕ್ಕೆ ಗುರು ವಂದನಾ ಹಾಗೂ ಸ್ನೇಹಿತರ ಸವಿನೆನಪಿಗಾಗಿ ‘ಸ್ನೇಹ ಸಮ್ಮಿಲನ ಸಂಗಮ ಕಾರ್ಯಕ್ರಮ’ವನ್ನು ಆಯೋಜಿಸಲಾಗಿತ್ತು.

ಕಬೀರ ದಾಸರ ಗುರು ಮಹಿಮೆಯನ್ನು ಸಾರುವ ದೋಹೆಯ ತಾತ್ಪರ್ಯವನ್ನು ವಿವರಿಸಿ. ಜೀವನದಲ್ಲಿ ಗುರುಗಳ ಸ್ಥಾನ ಅತಿ ಉನ್ನತವಾದದ್ದು ಎಂದು ತಿಳಿಸಿದರು. ಇಂದಿನ ವಿದ್ಯಾರ್ಥಿಗಳು ತಮ್ಮ ನೆಲದ ಸಂಸ್ಕೃತಿ, ಮೌಲ್ಯಗಳು ಹಾಗೂ ಪರಂಪರೆಯನ್ನು ಉಳಿಸಿ ಬೆಳೆಸುವ ಪ್ರಯತ್ನ ಮಾಡುತ್ತಿರುವುದು ಸಂತಸದ ವಿಷಯವಾಗಿದ್ದು, ಇಂತಹ ಸದುದ್ದೇಶದ ಆಲೋಚನೆಗಳೇ ಕಾರ್ಯಕ್ರಮವನ್ನು ಅರ್ಥಪೂರ್ಣ ವಾಗಿಸುತ್ತವೆ ಎಂದರು.

ಇನ್ನೂ ಅನೇಕ ಗುರುಗಳು ಶಿಷ್ಯರ ಕೃತಜ್ಞತೆ, ಶಿಷ್ಯ ಪರಂಪರೆ ಹಾಗೂ ಗುರು-ಶಿಷ್ಯರ ಅವಿನಾಭಾವ ಸಂಬಂಧವನ್ನು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಳೆ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳ ನೆನಪುಗಳನ್ನು ಹಂಚಿಕೊಂಡು, ಗುರುಗಳ ಮಾರ್ಗದರ್ಶನವೇ ತಮ್ಮ ಬದುಕಿನ ಬೆಳಕು ಎಂದು ಹೇಳಿದರು.

ಕಾರ್ಯಕ್ರಮದ ಸಂಘಟಕ ರಾಜಣ್ಣ ಹಾಗೂ ಸಂಘಟನೆಯ ಸದಸ್ಯರು ಎಲ್ಲ ಗುರುಗಳನ್ನು ಭಕ್ತಿ, ಗೌರವ ಮತ್ತು ಶ್ರದ್ಧೆಯಿಂದ ಸನ್ಮಾನಿಸಿದರು. ಹೂಮಾಲೆ, ಶಾಲು, ಸ್ಮರಣಿಕೆ ನೀಡಿ ಗುರುಗಳನ್ನು

> ಒಳ್ಳೆಯ ಶಿಕ್ಷಕರು ಸಮಾಜದ ಏಳಿಗೆಗೆ ಮಾರ್ಗದರ್ಶಕರು. ಎಲ್ಲ ವಿದ್ಯಾರ್ಥಿಗಳನ್ನು ಸಮಾನ ದೃಷ್ಟಿಯಿಂದ ನೋಡಿದರೆ ವಿದ್ಯಾರ್ಥಿಗಳ ಭವಿಷ್ಯ ಉಜ್ವಲ. ಅಂತಹ ಗುರುಗಳು ನಮಗೆ ಸಿಕ್ಕಿದ್ದು ನಮ್ಮ ಪಾಲಿನ ಸುದೈವ.
> - ಗಿರೀಶ್ , ಹಳೇ ವಿದ್ಯಾರ್ಥಿ

ಗೌರವಿಸುವ ಮೂಲಕ ಕೃತಜ್ಞತೆ ಸಲ್ಲಿಸಿದರು.

ಟಿ.ಎನ್.ಮಾಧವ್ ರವರು ಮಾತನಾಡಿ, ವಿದ್ಯಾರ್ಥಿಗಳು ಸಮಾಜದಲ್ಲಿ ಉತ್ತಮ ಉದಾಹರಣೆಯಾಗಿದ್ದಾರೆ ಎಂದರು. ಊರಿನ ಶಾಲೆಗಳ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಸಹಾಯ ಮಾಡಿದರೆ ಮಾದರಿಯಾಗುತ್ತದೆ ಎಂದು ಹೇಳಿದರು.

ಆರ್.ರೇಣುಕಾ ಕುಮಾರ್‌ಮಾತನಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ದಿವಾಕರ್ ನೆರವೇರಿಸಿದರು. ಸುಜಾತಾ ಪ್ರಾರ್ಥನೆ ಸಲ್ಲಿಸಿದರು. ರಾಜೀವ್ ಸ್ವಾಗತ ಕೋರಿದರು. ರಾಜಣ್ಣ ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿದರು.

₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 30.04.2026 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ



ರಿಕೆಲ್ಟನ್ ದಾಖಲೆ ಶತಕ, ಮುಂಬೈಗೆ ಸೋಲು

ಮುಂಬೈನ ವಾಂಖೇಡೆ ಮೈದಾನದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಬೃಹತ್ ಮೊತ್ತ ಗಳಿಸಿದರೂ ಮುಂಬೈ ಇಂಡಿಯನ್ಸ (243/5) 6 ವಿಕೆಟ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ (249/4) ವಿರುದ್ಧ ಸೋಲು ಕಂಡಿದೆ. ಮುಂಬೈ ಪರ ರಿಯಾನ್ ರಿಕೆಲ್ಟನ್ 123 ರನ್ ಚಚ್ಚಿ ದಾಖಲೆ ನಿರ್ಮಿಸಿದರು.

ಬೇಸಿಗೆ ಮಳೆಗೆ ಬೆಂಗಳೂರು ತತ್ತರ | ದುರಂತ ಸ್ಥಳಕ್ಕೆ ಸಿಎಂ ಭೇಟಿ | ವಿದ್ಯುತ್ ಸ್ಪರ್ಶಕ್ಕೆ 2 ಬಲಿ

ಬೌರಿಂಗ್ ಆಸ್ಪತ್ರೆ ಆವರಣ ಗೋಡೆ ಕುಸಿದು 7 ಬಲಿ

ಬೆಂಗಳೂರು: ಬಿರು ಬೇಸಿಗೆ ನಡುವೆ ರಾಜಧಾನಿಯಲ್ಲಿ ದಿಢೀರ್ ಎಂದು ಸುರಿದ ಮಳೆಗೆ ಮಕ್ಕಳು ಸೇರಿದಂತೆ ಬರೋಬ್ಬರಿ ಏಳು ಬಡ ಜೀವಗಳು ಬಲಿಯಾಗಿವೆ. 8 ಜನರು ತೀವ್ರ ನಿಗಾಘಟಕದಲ್ಲಿದ್ದು ಸಾವುನೋವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಘಟನೆ ನಡೆಯುತ್ತಲೇ ಬೌರಿಂಗ್ ಆಸ್ಪತ್ರೆಗೆ ದೌಡಾಯಿಸಿರುವ ಸಿಎಂ ಸಿದ್ದರಾಮಯ್ಯ ಅವರು, ಮೃತ ಕುಟುಂಬಸ್ಥರಿಗೆ ತಲಾ 5 ಲಕ್ಷ ರು. ಪರಿಹಾರ ಘೋಷಿಸಿದ್ದಾರೆ.

ಸಂಜೆ ವೇಳೆ ದಿಢೀರ್ ಮಳೆಗೆ ಶಿವಾಜಿ ನಗರದ ಬಳಿಯ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು ರಸ್ತೆ ಬದಿ ವ್ಯಾಪಾರಿಗಳು ಮತ್ತು ಪಾದಚಾರಿಗಳು ಸೇರಿದಂತೆ 7 ಜನರು ಸಾವನ್ನಪ್ಪಿದ್ದಾರೆ. ತಬೀನ್ ತಾಜ್ (47 ವರ್ಷ), ಮುಬೀನ್ ತಾಜ್ (49 ವರ್ಷ), ಮಾಯ (51 ವರ್ಷ), ಸಾಜಿದ್ (20 ವರ್ಷ), ಅಜು (35 ವರ್ಷ), ಪ್ರೀತಿ (5 ವರ್ಷ), ಸಿಜಿ (47 ವರ್ಷ) ಮೃತಪಟ್ಟವರು.

ಅವಶೇಷಗಳಡಿ ಬದುಕುಳಿದವರಿಗಾಗಿ ಶೋಧ ನಡೆಯುತ್ತಿದ್ದು, ಗಾಯಾಳುಗಳಿಗೆ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ. ತುರ್ತು ಚಿಕಿತ್ಸಾ ವಿಭಾಗದ ಪಕ್ಕದಲ್ಲಿದ್ದ ಗೋಡೆ ಕುಸಿದ ಪರಿಣಾಮ ಪಕ್ಕದ ರಸ್ತೆಯಲ್ಲಿದ್ದ ಪಾದಚಾರಿ ಮಾರ್ಗದ ಮೇಲೆ ವ್ಯಾಪಾರ ಮಾಡುತ್ತಿದ್ದವರು ಹಾಗೂ ಪಾದಚಾರಿಗಳಲ್ಲಿ ಬಾಲಕಿ ಸಹಿತ 7 ಜನ ಮೃತಪಟ್ಟಿದ್ದಾರೆ. ಕಾಂಪೌಂಡ್ ಗೋಡೆಯಡಿ 10ಕ್ಕೂ ಅಧಿಕ ಮಂದಿ ಸಿಲುಕಿದ್ದರು.

ಇದೇ ವೇಳೆ ಮಳೆಯ ಸಂದರ್ಭ ವಿದ್ಯುತ್ ತಂತಿ ಸ್ಪರ್ಶಿಸಿ ನಗರದಲ್ಲಿ ಇಬ್ಬರು ಮೃತಪಟ್ಟ ಘಟನೆಯೂ ನಡೆದಿದೆ.

ಶಿವಾಜಿನಗರದಲ್ಲಿರುವ ಬೌರಿಂಗ್ ಆಸ್ಪತ್ರೆ ಗೋಡೆ ಕುಸಿದ ಸ್ಥಳಕ್ಕೆ ಭೇಟಿ ನೀಡಿದ ಸಿದ್ದರಾಮಯ್ಯ
ಫೋಟೋ: ಸುಧಾಕರ್ ದೇವರಾಜ್

ಪ್ರತಿ ಬಾರಿ ಮಳೆ ಬಂದಾಗಲೂ ದುರಂತಗಳು ಸಂಭವಿಸುತ್ತಿವೆ. ಸರಕಾರ ಪಾಠ ಕಲಿಯುತ್ತಿಲ್ಲ. ನಗರದಲ್ಲಿ ಇಂತಹ ಅನಾಹುತಗಳು ಸಂಭವಿಸಿದಂತೆ ಶಾಶ್ವತ ಪರಿಹಾರಗಳನ್ನು ರೂಪಿಸುವ ಅಗತ್ಯವಿದೆ. ಇಷ್ಟಕ್ಕೂ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದಿದ್ದು ಹೇಗೆ? ಅದನ್ನು ಯಾವಾಗ ನಿರ್ಮಿಸಿದ್ದರು? ಎಂಬ ಬಗ್ಗೆ ಸೂಕ್ತ ತನಿಖೆ ನಡೆಸಬೇಕು. ಇದು ಯಾರ ನಿರ್ಲಕ್ಷ್ಯ ಎಂಬುದನ್ನು ಪತ್ತೆ ಹಚ್ಚಿ ಕಠಿಣ ಕ್ರಮ ಜರುಗಿಸಬೇಕು

-ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಅಧಿಕಾರಿಗಳಿಗೆ ಸಿಎಂ ಕ್ಲಾಸ್: ತನಿಖೆಗೆ ಆದೇಶ

ಬೆಂಗಳೂರಿನ ಶಿವಾಜಿನಗರದಲ್ಲಿ ನಡೆದ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಗರಂ ಆಗಿದ್ದಾರೆ. ಶಿವಾಜಿನಗರದ ಬೌರಿಂಗ್ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ತನಿಖೆಗೆ ಆದೇಶ ನೀಡಿದರು. ಹಳೆಯ ಗೋಡೆಯನ್ನು ನೋಡೋಕಾಗಲ್ವಾ? ಎಚ್ಚರವಹಿಸಿದ್ದರೆ ಈ ಅನಾಹುತ ತಪ್ಪಿಸಬಹುದಿತ್ತು ಎಂದು ಅಧಿಕಾರಿಗಳ ನಿರ್ಲಕ್ಷ್ಯವನ್ನು ತರಾಟೆಗೆ ತೆಗೆದುಕೊಂಡರು.

ದುರಂತಕ್ಕೆ ಕಾರಣ ಏನು?

ಆಸ್ಪತ್ರೆಯ ಕಾಂಪೌಂಡ್ ಗೋಡೆಯನ್ನು ಹೊಸತಾಗಿ ನಿರ್ಮಾಣ ಮಾಡಲಾಗುತ್ತಿತ್ತು. ಹಳೆಯ ಗೋಡೆಗೆ ಹೊಂದಿಕೊಂಡಂತೆ ದೊಡ್ಡ ಟಾರ್ಪಲ್ ಹಾಕಿ ಕೆಲವರು ರಸ್ತೆ ಪಕ್ಕದಲ್ಲಿ ವ್ಯಾಪಾರ ಮಾಡುತ್ತಿದ್ದರು. ಸಂಜೆ ವೇಳೆ ಆರಂಭವಾದ ಮಳೆಗೆ ನೆನೆದ ಹಳೆಯ ಗೋಡೆ ಏಕಾಏಕಿ ಕುಸಿದಿದೆ ಎಂದು ಕೆಲ ಪ್ರತ್ಯಕ್ಷದರ್ಶಿಗಳು ಮಾಹಿತಿ ನೀಡಿದ್ದಾರೆ. ಒತ್ತಡದಿಂದ ಕಾಂಪೌಂಡ್ ಕುಸಿದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಡಿಸಿಎಂ ಶಿವಕುಮಾರ್ ಕೂಡ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ಪಂಚರಾಜ್ಯಗಳ ಮತದಾನ ಮುಕ್ತಾಯದ ಬೆನ್ನಲ್ಲೇ ಮತಗಟ್ಟೆ ಸಮೀಕ್ಷೆ ಪ್ರಕಟ

ಬಂಗಾಳ ಅತಂತ್ರ; ತಮಿಳುನಾಡಲ್ಲಿ ಡಿಎಂಕೆ, ಕೇರಳದಲ್ಲಿ ಯುಡಿಎಫ್

ಅಸ್ಸಾಂ, ಪುದುಚೇರಿ: ಮತ್ತೆ ಬಿಜೆಪಿ | ಬಂಗಾಳ ವಶಕ್ಕೆ ಬಿಜೆಪಿ-ಟಿಎಂಸಿ ಪೈಪೋಟಿ
ಕೊನೆ ಹಂತದಲ್ಲೂ ಬಂಗಾಳದಲ್ಲಿ ಭರ್ಜರಿ ಮತದಾನ | ಎನ್‌ಡಿಎಗೆ ಗಳಿಕೆ ನಿರೀಕ್ಷೆ

ದೆಹಲಿ: ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಹಾಗೂ ಪುದುಚೇರಿ ವಿಧಾನಸಭೆಗಳಿಗೆ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯ ಮತಗಟ್ಟೆ ಸಮೀಕ್ಷೆಗಳು ಬುಧವಾರ ಹೊರಬಿದ್ದಿವೆ. ಚುನಾವಣಾ ವಿಶ್ಲೇಷಣಾ ಸಂಸ್ಥೆಗಳು ನಡೆಸಿರುವ ಈ ಸಮೀಕ್ಷೆಗಳ ಪ್ರಕಾರ, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ-ಟಿಎಂಸಿ ನಡುವೆ ಸಮಬಲದ ಫಲಿತಾಂಶ ಬರಲಿದ್ದು ಅಲ್ಲಿ ಅತಂತ್ರ ವಿಧಾನಸಭೆ ಸೃಷ್ಟಿಯಾಗುವ ಸಾಧ್ಯತೆಗಳಿವೆ. ತಮಿಳುನಾಡು, ಅಸ್ಸಾಂ, ಪುದುಚೇರಿಯಲ್ಲಿ ಕ್ರಮವಾಗಿ ಡಿಎಂಕೆ ಹಾಗೂ ಎನ್‌ಡಿಎ ಸರಕಾರಗಳೇ ಮುಂದುವರಿಯಲಿವೆ. ಕೇರಳದಲ್ಲಿ ಆಡಳಿತಾರೂಢ ಎಲ್‌ಡಿಎಫ್ ಅಧಿಕಾರ ಕಳೆದುಕೊಳ್ಳಲಿದ್ದು, 10 ವರ್ಷಗಳ ಬಳಿಕ ಯುಡಿಎಫ್ ಸರಕಾರ ಅಧಿಕಾರಕ್ಕೇರುವ ನಿರೀಕ್ಷೆಯಿದೆ.



ಪಶ್ಚಿಮ ಬಂಗಾಳದಲ್ಲಿ ದೀದಿಗೆ ಟಕ್ಕರ್

ಒಟ್ಟು ಸ್ಥಾನಗಳು: 294, ಸರಳ ಬಹುಮತ: 148

ಸಮೀಕ್ಷಾ ಸಂಸ್ಥೆ	ಬಿಜೆಪಿ	ಟಿಎಂಸಿ	ಇತರೆ
ಪೀಪಲ್ಸ್ ಪಲ್ಸ್	95 - 110	178 - 187	2 - 3
ಪಿ-ಮಾರ್ಕ್	150 - 175	118 - 138	2 - 6
ಜೆ.ವಿ.ಸಿ	138 - 159	131 - 152	0 - 2
ಮ್ಯಾಟ್ರಿಝ್	146 - 161	125 - 140	6 - 10
ಚಾಣಕ್ಯ	150-160	130-140	6-9
ಸರಾಸರಿ	145	145	4

ತಮಿಳುನಾಡಲ್ಲಿ ಮತ್ತೆ ಸೂರ್ಯೋದಯ

ಒಟ್ಟು ಸ್ಥಾನ: 234, ಸರಳ ಬಹುಮತ: 118

ಸಮೀಕ್ಷಾ ಸಂಸ್ಥೆ	ಡಿಎಂಕೆ	ಎನ್‌ಡಿಎ	ಟಿವಿಕೆ	ಇತರೆ
ಆ್ಯಕ್ಸಿಸ್ ಇಂಡಿಯಾ	92 - 110	22 - 23	98 - 120	0 - 0
ಜೆವಿಸಿ	75 - 95	128 - 147	8 - 15	0 - 0
ಮ್ಯಾಟ್ರಿಝ್	122 - 132	87 -100	10 - 12	0 - 6
ಪಿ-ಮಾರ್ಕ್	125 - 145	65 - 85	16 - 26	1 - 6
ಪೀಪಲ್ಸ್ ಇನ್‌ಸೈಟ್	120 - 140	60 - 70	30 - 40	0 - 4
ಸರಾಸರಿ	120	77	36	1

ಕೇರಳದಲ್ಲಿ ಪಿಣರಾಯಿಗೆ ಗುಡ್ ಬೈ

ಒಟ್ಟು ಸ್ಥಾನ 140, ಸರಳ ಬಹುಮತ: 71

ಸಮೀಕ್ಷಾ ಸಂಸ್ಥೆ	ಯುಡಿಎಫ್	ಎಲ್‌ಡಿಎಫ್	ಇತರೆ
ಆ್ಯಕ್ಸಿಸ್ ಇಂಡಿಯಾ	78 - 90	49 - 62	0 - 3
ಮ್ಯಾಟ್ರಿಝ್	70 - 75	60 - 65	2 - 4
ಪಿ-ಮಾರ್ಕ್	72 - 79	62 - 69	3
ಪೀಪಲ್ಸ್ ಪಲ್ಸ್	75 - 85	55 - 65	0 - 3
ಸರಾಸರಿ	72	63	5

ಅಸ್ಸಾಂನಲ್ಲಿ ಮತ್ತೆ ಬಿಸ್ವಾಸ

ಒಟ್ಟು ಸ್ಥಾನ 126, ಸರಳ ಬಹುಮತ: 64

ಸಮೀಕ್ಷಾ ಸಂಸ್ಥೆ	ಎನ್‌ಡಿಎ	ಕಾಂಗ್ರೆಸ್	ಇತರೆ
ಆ್ಯಕ್ಸಿಸ್ ಇಂಡಿಯಾ	88 - 100	24 - 36	0 - 3
ಪೋಲ್ ಡೈರಿ	86 - 101	15 - 26	0
ಪಿ-ಮಾರ್ಕ್	82 - 94	30 - 40	1 - 5
ಮ್ಯಾಟ್ರಿಝ್	85 - 95	25 - 32	6 - 12
ಜೆವಿಸಿ	88 -101	23 - 33	2 - 5
ಸರಾಸರಿ	92	30	4

- ಸತತ ಮೂರು ಬಾರಿ ಅಧಿಕಾರ ಸವಿದಿದ್ದ ದೀದಿಗೆ ಈ ಬಾರಿ ಅಧಿಕಾರ ಕಳೆದುಕೊಳ್ಳುವ ಭೀತಿ. ಸಮೀಕ್ಷೆಗಳ ಸರಾಸರಿಯಲ್ಲಿ ಬಿಜೆಪಿಯಿಂದ ಸಖತ್ ಠಕ್ಕರ್.
- ತಮಿಳುನಾಡಿನಲ್ಲಿ ನಟ ವಿಜಯ್ ಪಕ್ಷವಾದ ಟಿವಿಕೆ ಲಗ್ಗೆಯಿಂದ ಎಐಎಡಿಎಂಕೆ-ಬಿಜೆಪಿ ಮೈತ್ರಿಗೆ ಹಿನ್ನಡೆ. ಆ್ಯಕ್ಸಿಸ್ ಮೈ ಇಂಡಿಯಾ ಪ್ರಕಾರ ಟಿವಿಕೆ ಪಕ್ಷ ಏಕಾಂಗಿಯಾಗಿ 98ರಿಂದ 120 ಸ್ಥಾನಗಳನ್ನು ಗೆಲ್ಲಲಿದೆ.
- ಕೇರಳದಲ್ಲಿ ಸತತ 10 ವರ್ಷಗಳಿಂದ ಅಧಿಕಾರದಲ್ಲಿದ್ದ ಪಿಣರಾಯಿ ವಿಜಯನ್ ಸರಕಾರಕ್ಕೆ ತೀವ್ರ ಹಿನ್ನಡೆ. ವಿಪಕ್ಷವಾದ ಕಾಂಗ್ರೆಸ್ ಮೈತ್ರಿಕೂಟದ ಯುಡಿಎಫ್ ಸರಕಾರ ಬರುವ ಸಾಧ್ಯತೆ.

ಪುದುಚೇರಿಯಲ್ಲಿ ಮತ್ತೆ ರಂಗ ಸಜ್ಜಿಕೆ

ಒಟ್ಟು ಸ್ಥಾನ 30, ಸರಳ ಬಹುಮತ: 16

ಸಮೀಕ್ಷಾ ಸಂಸ್ಥೆ	ಎನ್‌ಡಿಎ	ಎಸ್‌ಪಿಎ	ಇತರೆ
ಆ್ಯಕ್ಸಿಸ್ ಇಂಡಿಯಾ	16 - 20	6 - 8	2 - 7
ಪೀಪಲ್ಸ್ ಪಲ್ಸ್	16 - 19	10 - 12	1 - 2
ಎಕ್ಸಿಟ್ ಪೋಲ್	15 - 17	11 - 13	1 - 3
ಪ್ರಜಾ ಪೋಲ್	19 - 25	6 - 10	0
ಕಾಮಾಖ್ಯ	17 - 24	4 - 7	1 - 2
ಸರಾಸರಿ	19	8	3

ಮಲ್ಲಿಕಾರ್ಜುನ ಪರ ಹಲವರ ಬ್ಯಾಟಿಂಗ್

ಮತ್ತೆ ದಲಿತ ಸಿಎಂ ಕೂಗು

ಸಿದ್ದು ಕೆಳಗಿಳಿದರೆ ದಲಿತ ಸಿಎಂ ನಿಶ್ಚಿತ ಎಂದ ಯತೀಂದ್ರ, ಸಿದ್ದರಾಮಯ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಂಚರಾಜ್ಯ ಚುನಾವಣಾ ಮತದಾನ ಪ್ರಕ್ರಿಯೆ ಮುಗಿಯುತ್ತಿದ್ದಂತೆ, ಕರ್ನಾಟಕ ಕಾಂಗ್ರೆಸ್ ಸರಕಾರದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಕೂಗು ಮೌನವಾಗಿಯೇ ಶುರುವಾಗಿದೆ. ಇದರ ಬೆನ್ನಲ್ಲೇ, ಸಿದ್ದರಾಮಯ್ಯ ಆಪ್ತರು 'ದಲಿತ ಸಿಎಂ' ವಿಷಯವನ್ನು ಮುನ್ನೆಲೆಗೆ ತರುವ ಮೂಲಕ ಎಲ್ಲಿಂದ ಆರಂಭವಾಗಿತ್ತೋ, ಪುನಃ ಅಲ್ಲಿಗೆ ಬಂದು ನಿಂತಿದೆ. ಸಿದ್ದರಾಮಯ್ಯ ಕೆಳಕ್ಕಿಳಿದರೆ, ಮತ್ತೆ ದಲಿತ ಸಿಎಂ ಖಚಿತ ಎಂದು ಪುತ್ರ ಡಾ.ಯತೀಂದ್ರ ಹೇಳಿದ್ದಾರೆ. ಇನ್ನೊಂದು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ಸಚಿವ ಸತೀಶ್ ಜಾರಕಿಹೊಳಿ ಕಣ್ಣಿಟ್ಟಿದ್ದಾರೆ.

ಡಿಕೆ ಸಹೋದರರು ದೆಹಲಿ ಭೇಟಿ ಮುಗಿಸಿ, ವಾಪಸಾಗುತ್ತಿದ್ದಂತೆ ದೆಹಲಿಗೆ ತೆರಳಿರುವ ಸಿದ್ದರಾಮಯ್ಯ ಆಪ್ತ ಸಚಿವರು, ಶಾಸಕರು, ಸಂಪುಟ ಪುನಾರಚನೆಗೆ ಒತ್ತಡ ಹೇರುತ್ತಿದ್ದಾರೆ. ಈ ನಡುವೆ ಅಹಿಂದ ಸಮಾವೇಶದ ನೆಪದಲ್ಲಿ ಸಿದ್ದರಾಮಯ್ಯ ಅವರ ಬಲಪ್ರದರ್ಶನದ ಮೂಲಕ 'ಬದಲಾವಣೆ' ವಿಷಯದಲ್ಲಿ ಎಚ್ಚರವಹಿಸುವಂತೆ ಪರೋಕ್ಷ ಸಂದೇಶ ರವಾನಿಸುವ ಲೆಕ್ಕಾಚಾರದಲ್ಲಿದ್ದಾರೆ. ಈ ಎಲ್ಲ ಕಸರತ್ತುಗಳ ನಡುವೆ, ಗೃಹಸಚಿವ ಪರಮೇಶ್ವರ ಸೇರಿದಂತೆ ಹಲವು ನಾಯಕರು 'ದಲಿತ ಮುಖ್ಯಮಂತ್ರಿ' ವಿಷಯವನ್ನು ಪುನಃ ತೇಲಿಬಿಟ್ಟಿದ್ದಾರೆ.

ದೆಹಲಿಯಲ್ಲಿ ಬೀಡುಬಿಟ್ಟಿರುವ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಕರ್ನಾಟಕ ಭವನದಲ್ಲಿ ಬುಧವಾರ ಬಿ.ಕೆ.ಹರಿಪ್ರಸಾದ್, ಸಲೀಂ ಅಹ್ಮದ್, ಶಾಸಕ ಹಂಪನಗೌಡ ಬಾದರ್ಲಿ ಸೇರಿದಂತೆ ಹಲವು ನಾಯಕರೊಂದಿಗೆ ಉಪಾಹಾರ ಕೂಟ ನಡೆಸಿದ್ದಾರೆ. ಮೇ 15ರೊಳಗೆ ಡಿ.ಕೆ. ಶಿವಕುಮಾರ್‌ಗೆ ಸಿಹಿ ಸುದ್ದಿ ನೀಡಲಿದೆ ಎಂದು ಬೆಂಬಲಿಗರು ಹೇಳಿಕೆ ನೀಡುತ್ತಿದ್ದಾರೆ. → 4

ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿಯಾದರೆ ಬಹಳ ಸಂತೋಷ. ಖರ್ಗೆಗೆ ರಾಜ್ಯದ ಎಲ್ಲ ವಿಚಾರ ಗೊತ್ತಿದೆ. ಅವರು ಎಐಸಿಸಿ ಅಧ್ಯಕ್ಷರಾಗಿರುವುದು ನಮ್ಮ ಸೌಭಾಗ್ಯ.

-ಡಾ.ಜಿ.ಪರಮೇಶ್ವರ, ಗೃಹಸಚಿವ



ಸಿದ್ದರಾಮಯ್ಯ ಅವರ ಶಕ್ತಿ ಪ್ರದರ್ಶನ ಅಲ್ಲ, ಸಿದ್ದರಾಮಯ್ಯ ಅವರೇ ಒಂದು ಶಕ್ತಿ. ಅಹಿಂದ ಅನ್ನುವುದು ಒಂದು ಚಳವಳಿ. ಅದನ್ನು ಯಾರನ್ನೂ ಕಟ್ಟಿಕೊಂಡು ಮಾಡಲ್ಲ.

-ಎಚ್.ಸಿ.ಮಹದೇವಪ್ಪ, ಸಚಿವ

ಹೈಕಮಾಂಡ್ ನಮ್ಮ ತಂದೆ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಇಳಿಸಿದರೆ ದಲಿತ ಸಿಎಂ ವಿಚಾರ ಮತ್ತೆ ಮುನ್ನೆಲೆಗೆ ಬರುವುದು ಸಹಜ. ಹೈಕಮಾಂಡ್ ತೀರ್ಮಾನಕ್ಕೆ ಬದ್ಧ.

-ಡಾ.ಯತೀಂದ್ರ, ಪರಿಷತ್ ಸದಸ್ಯ

ಉ.ಪ್ರ.ದ 12 ಜಿಲ್ಲೆ ಬೆಸೆವ ಗಂಗಾ ಹೆದ್ದಾರಿಗೆ ಚಾಲನೆ

594 ಕಿಮೀ ವ್ಯಾಪ್ತಿ, 36230 ಕೋಟಿ ರು. ವೆಚ್ಚ ರಸ್ತೆಯ ಇಬ್ಬದಿ ಗಂಗಾ ಕೈಗಾರಿಕಾ ಕಾರಿಡಾರ್

ಲಖನೌ: ಉತ್ತರಪ್ರದೇಶದ ಆರನೇ ಗಂಗಾ ಎಕ್ಸ್‌ಪ್ರೆಸ್ ವೇಯನ್ನು ಪ್ರಧಾನಿ ನರೇಂದ್ರ ಮೋದಿ ಬುಧವಾರ ಉದ್ಘಾಟಿಸಿದರು. ಸುಮಾರು 36,230 ಕೋಟಿ ರುಪಾಯಿ ವೆಚ್ಚದಲ್ಲಿ ನಿರ್ಮಿಸಲಾದ 594 ಕಿಮೀ ದೂರದ ಗಂಗಾ ಎಕ್ಸ್‌ಪ್ರೆಸ್ ವೇ 12 ಜಿಲ್ಲೆಗಳನ್ನು ಬೆಸೆಯುತ್ತದೆ. ಮೀರತ್ ಮತ್ತು ಪ್ರಯಾಗ್‌ರಾಜ್ ನಡುವಿನ ಪ್ರಯಾಣದ ಅವಧಿಯನ್ನು 10-12 ಗಂಟೆಗಳಿಂದ 6 ಗಂಟೆಗಳವರೆಗೆ ಕಡಿಮೆ ಮಾಡುತ್ತದೆ.

ಮೀರತ್, ಬುಲಂದ್‌ಶಹರ್, ಹಾಪುರ್, ಅಮ್ರೋಹಾ, ಸಂಭಾಲ್, ಬದೌನ್, ಶಹಜಹಾನ್‌ಪುರ, ಹಾರ್ದೋಯ್, ಉನ್ನಾವ್, ರಾಯ್ ಬರೇಲಿ, ಪ್ರತಾಪ್‌ಗಢ ಮತ್ತು ಪ್ರಯಾಗ್‌ರಾಜ್ - ಆ ಮೂಲಕ ಉತ್ತರ ಪ್ರದೇಶದ ಪಶ್ಚಿಮ, ಮಧ್ಯ ಮತ್ತು ಪೂರ್ವ ಪ್ರದೇಶಗಳನ್ನು ಒಂದೇ ತಡೆರಹಿತ ಹೈ-ಸ್ಪೀಡ್ ಕಾರಿಡಾರ್ ಮೂಲಕ ಸಂಪರ್ಕಿಸಲಾಗುತ್ತದೆ. ಶಹಜಹಾನ್‌ಪುರದ ಜಲಾಲಾಬಾದ್‌ನಲ್ಲಿ ಬರುವ ಎಕ್ಸ್‌ಪ್ರೆಸ್‌ವೇಯಲ್ಲಿ 3.5 ಕಿಮೀ ಉದ್ದದ ತುರ್ತು ವಾಯುನೆಲೆಯನ್ನು ನಿರ್ಮಿಸಲಾಗಿದೆ. ಇದು ದೇಶದಲ್ಲಿ ಮೊದಲ ಬಾರಿಗೆ ನಿರ್ಮಿಸಲಾದ ವಾಯುನೆಲೆಯಾಗಿದ್ದು, ಇಲ್ಲಿ ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳು ಹಗಲು ಮತ್ತು ರಾತ್ರಿ ಎರಡೂ ಸಮಯದಲ್ಲಿ ಸುರಕ್ಷಿತವಾಗಿ ಇಳಿಯಬಹುದು ಮತ್ತು ಮೇಲಕ್ಕೆ ಹಾರಬಹುದು.



ಉತ್ತರಪ್ರದೇಶಕ್ಕೆ ಎಕ್ಸ್‌ಪ್ರೆಸ್ ವೇ ಸಿಕ್ಕಿರುವುದು ಗಂಗಾಮಾತೆಯ ಆಶೀರ್ವಾದ ಎಂದು ನಾನು ನಂಬುತ್ತೇನೆ. ಉತ್ತರಪ್ರದೇಶವನ್ನು ಹಿಂದುಳಿದ ಮತ್ತು ರೋಗಪೀಡಿತ ರಾಜ್ಯ ಎಂದು ಕರೆಯಲ್ಪಡುತ್ತಿತ್ತು. ಈಗ ಅದೇ ರಾಜ್ಯ ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗುವತ್ತ ಸಾಗುತ್ತಿದೆ.

-ನರೇಂದ್ರ ಮೋದಿ, ಪ್ರಧಾನಿ

ಸಾರಿಗೆ ನೌಕರರ ಹಿಂಬಾಕಿ ಮೊದಲ ಕಂತು ಬಿಡುಗಡೆ

450 ಕೋಟಿ ರು. ಪಾವತಿಗೆ ಇಲಾಖೆ ಒಪ್ಪಿಗೆ 26 ತಿಂಗಳ ವೇತನ ನೀಡಲು ಅನುಮೋದನೆ

ಬೆಂಗಳೂರು: ರಾಜ್ಯ ಸಾರಿಗೆ ಇಲಾಖೆ ಹಾಗೂ ನೌಕರರ ನಡುವಿನ ಹಗ್ಗಜಗ್ಗಾಟಕ್ಕೆ ಕಾರಣವಾಗಿದ್ದ ಹಿಂಬಾಕಿ ಬಿಡುಗಡೆಗೆ ಕೊನೆಗೂ ಅಧಿಕೃತ ಆದೇಶ ಹೊರಬಿದ್ದಿದೆ. ಸಾರಿಗೆ ನಿಗಮದ ನೌಕರರು 38 ತಿಂಗಳ ಹಿಂಬಾಕಿ ನೀಡುವಂತೆ ಆಗ್ರಹಿಸುತ್ತ ಬಂದಿದ್ದರೂ, ಸಾರಿಗೆ ಇಲಾಖೆ 26 ತಿಂಗಳ ಹಿಂಬಾಕಿ ನೀಡಲು ಒಪ್ಪಿಗೆ ನೀಡಿತ್ತು. ಇದರ ಭಾಗವಾಗಿ ಸದ್ಯ ಮೊದಲ ಹಂತದಲ್ಲಿ 450 ಕೋಟಿ ರುಪಾಯಿಗಳನ್ನು ಮೊದಲ ಕಂತಿನಲ್ಲಿ ಬಿಡುಗಡೆಗೊಳಿಸಿ ಆದೇಶ ಹೊರಡಿಸಿದೆ.

ಸರಕಾರದ ಆದೇಶದ ಪ್ರಕಾರ, 2021 ಜನವರಿ 1ರಿಂದ 2023 ಫೆಬ್ರವರಿ 28ರವರೆಗೆ ಒಟ್ಟು 26 ತಿಂಗಳ ವೇತನ ಪರಿಷ್ಕರಣೆ ಬಾಕಿ 1271.92 ಕೋಟಿ ರು. ಆಗಿದ್ದು, ಅದರಲ್ಲಿನ ಮೊದಲ ಹಂತವಾಗಿ 450 ಕೋಟಿ ರು. ಬಿಡುಗಡೆ ಮಾಡಲಾಗಿದೆ. ಈ ಅನುದಾನವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಿಗೆ ಹಂಚಿಕೆ ಮಾಡಲಾಗಿದೆ.

ಸಂಸ್ಥೆಗಳ ಆರ್ಥಿಕ ಸ್ಥಿತಿ ಕ್ಲಿಷ್ಟಕರವಾಗಿರುವ ಹಿನ್ನೆಲೆಯಲ್ಲಿ ಹಿಂಬಾಕಿ ಮೊತ್ತವನ್ನು ಸಂಸ್ಥೆಗಳ ಆಂತರಿಕ ಮೂಲಗಳಿಂದ ಪಾವತಿಸುವುದು ಕಷ್ಟವಾಗಿದ್ದರಿಂದ ರಾಜ್ಯ ಸರಕಾರವೇ ವಿಶೇಷ ನೆರವಿನಲ್ಲಿ ಅನುದಾನ ಒದಗಿಸಿದೆ.

ಬಿಡುಗಡೆಗೊಂಡ 450 ಕೋಟಿ ರು.ಗಳಲ್ಲಿ ಕೆಎಸ್‌ಆರ್‌ಟಿಸಿಗೆ 143.85 ಕೋಟಿ ರು., ಬಿಎಂಟಿಸಿಗೆ 137.24 ಕೋಟಿ ರು., ಎನ್‌ಡಬ್ಲ್ಯುಕೆಆರ್‌ಟಿಸಿಗೆ 87 ಕೋಟಿ ರು., ಹಾಗೂ ಕೆಕೆಆರ್‌ಟಿಸಿಗೆ 81.91 ಕೋಟಿ ರು. ಹಂಚಿಕೆ ಮಾಡಲಾಗಿದೆ. ಸರಕಾರವು ಈ ಅನುದಾನವನ್ನು ಒಂದೇ ಕಂತಲ್ಲಿ ತಕ್ಷಣ ಪಾವತಿಸಲು ಸೂಚಿಸಲಾಗಿದೆ.

ಅಕ್ರಮ ಭ್ರೂಣಲಿಂಗ ಪತ್ತೆ: ಮಂಡ್ಯದಲ್ಲಿ ಮೂವರ ಸೆರೆ

31 ಅಪ್ರಾಪ್ತವಯಸ್ಕ ಗರ್ಭಿಣಿಯರಿಗೆ ಪರೀಕ್ಷೆ ಮೂವರು ಖಾಸಗಿ ವೈದ್ಯರು ಪೊಲೀಸ್ ಬಲೆಗೆ

ಮಂಡ್ಯ: ಕೆ.ಆರ್.ಪೇಟೆಯ ಡಯಾಗ್ನಾಸ್ಟಿಕ್ ಸೆಂಟರ್‌ನಲ್ಲಿ ಅಕ್ರಮ ಭ್ರೂಣಲಿಂಗ ಪತ್ತೆ, ಹತ್ಯೆ ಆರೋಪದ ಮೇಲೆ ಮೂವರು ಖಾಸಗಿ ವೈದ್ಯರನ್ನು ಬಂಧಿಸಲಾಗಿದೆ. ಪಟ್ಟಣದ ಚೇತನಾ ನರ್ಸಿಂಗ್ ಹೋಮ್‌ನ ವೈದ್ಯೆ ಡಾ.ದಿವ್ಯಾ, ನಾವಿ ಡಯಾಗ್ನಾಸ್ಟಿಕ್ ಸೆಂಟರ್‌ನ ವೈದ್ಯ ಡಾ.ಹರ್ಷಿತ್ ಹಾಗೂ ಕುಶಾಲ್ ಡಯಾಗ್ನಾಸ್ಟಿಕ್ ಕೇಂದ್ರದ ಡಾ.ಪರೀಶ್ ಬಂಧಿತರು. ಮಂಡ್ಯದಲ್ಲಿ ಹಲವು ವರ್ಷಗಳಿಂದ ಅಕ್ರಮವಾಗಿ ಭ್ರೂಣಲಿಂಗ ಪತ್ತೆಮಾಡುವ ಕೃತ್ಯಗಳು ನಡೆಯುತ್ತಲೇ ಇವೆ. ಈ ಸಂಬಂಧ ಹಲವು ಬಾರಿ ಪ್ರಕರಣ ದಾಖಲಾದರೂ ಪರಿಸ್ಥಿತಿ ಬದಲಾಗಿಲ್ಲ.

31 ಅಪ್ರಾಪ್ತ ವಯಸ್ಕ ಗರ್ಭಿಣಿಯರಿಗೆ ಕಾನೂನುಬಾಹಿರವಾಗಿ ಸ್ಕ್ಯಾನಿಂಗ್ ಮಾಡಿರುವ ಆರೋಪದ ಮೇರೆಗೆ ಮೂವರು ವೈದ್ಯರನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಪಟ್ಟಣದ ಸರಕಾರಿ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಪ್ರಿಯಾಂಕಾ ನಾಪತ್ತೆಯಾಗಿದ್ದು, ಪತ್ತೆಗಾಗಿ ಶೋಧ ನಡೆಸಲಾಗುತ್ತಿದೆ.

ಪಟ್ಟಣ ಮತ್ತು ಗ್ರಾಮಾಂತರ ಠಾಣೆಗಳಲ್ಲಿ ಒಟ್ಟು 17 ಆರೋಪಿಗಳ ವಿರುದ್ಧ 12 ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ. ಸರಕಾರಿ ವೈದ್ಯೆ, ಮೂವರು ಖಾಸಗಿ ವೈದ್ಯರು, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಆಶಾ ಕಾರ್ಯಕರ್ತೆ ಹಾಗೂ ಖಾಸಗಿ ವ್ಯಕ್ತಿಗಳ ವಿರುದ್ಧ ದೂರು ದಾಖಲಾಗಿದೆ. ಲೋಕಾಯುಕ್ತ ಸಂಸ್ಥೆಯಲ್ಲೂ ಸ್ವಯಂಪ್ರೇರಿತ ಪ್ರಕರಣ ದಾಖಲಾಗಿದೆ.

ಪಟ್ಟಣದ ಎರಡು ಡಯಾಗ್ನಾಸ್ಟಿಕ್ ಸೆಂಟರ್‌ಗಳಲ್ಲಿ ಭ್ರೂಣಲಿಂಗ ಪತ್ತೆಗಾಗಿ ಸ್ಕ್ಯಾನಿಂಗ್ ಮಾಡಿರುವುದನ್ನು ಲೋಕಾಯುಕ್ತ ಪೊಲೀಸರು ಇತ್ತೀಚೆಗೆ ಪತ್ತೆ ಮಾಡಿದ್ದರು. ನಾವಿ ಡಯಾಗ್ನಾಸ್ಟಿಕ್ ಸೆಂಟರ್‌ನಲ್ಲಿ 2024ನೇ ಸಾಲಿನಲ್ಲಿ 19 ಮತ್ತು 2025ನೇ ಸಾಲಿನಲ್ಲಿ 5 ಸೇರಿದಂತೆ ಒಟ್ಟು 24 ಬಾಲಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡಲಾಗಿದೆ.

ಸೊಂಪಾದ ಪುಟಗಳು

ಇಂಗ್ಲಿಷ್ ಭಾಷೆ ಸೊರಗುತ್ತಿಲ್ಲ, ಅಸಲಿಗೆ ಅದು ಪಾರ್ಟ ಮಾಡುತ್ತಿದೆ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ದೇವರ ವರ, ಕಾಡುಮಾವಿನ ಮರ !
ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ಸತ್ಯ ಯಾವತ್ತೂ ಸರಳವಾಗಿರುತ್ತದೆ. ಆದರೆ ನೀವು ಅದನ್ನು ವಿವರಿಸಲು ಹೋದ ತಕ್ಷಣ ಅದು ಬಹಳ ಕ್ಲಿಷ್ಟವಾಗಿಬಿಡುತ್ತದೆ. ಸತ್ಯಕ್ಕೆ ಸಮರ್ಥನೆ ಮತ್ತು ಸ್ಪಷ್ಟನೆಯ ಅಗತ್ಯವಿರುವುದಿಲ್ಲ. ಅದು ಸದಾ ಏಕಾಂಗಿ.

ವಕ್ರತುಂಡೋಕ್ತಿ



ಫೇಸ್‌ಬುಕ್‌ನಲ್ಲಿ ನೂರು ಜನ ಗೆಳೆಯರಿರೋದಕ್ಕಿಂತ, ರಸ್ತೆಯಲ್ಲಿ ಹೋಗುವಾಗ ಒಬ್ಬ 'ಸಾಲ ವಾಪಸ್ ಕೊಡು' ಅಂತ ಕೇಳದೇ ಇರುವ ಗೆಳೆಯ ಇರೋದು ವಾಸಿ.

ವೈದ್ಯ ಸೀಟುಗಳ ಹೆಚ್ಚಳಕ್ಕೆ ಅಸ್ತು

ದೆಹಲಿ: ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಮಹತ್ವದ ಆದೇಶವೊಂದನ್ನು ಹೊರಡಿಸಿದೆ. 2023ರ ತನ್ನ ಆದೇಶಕ್ಕೆ ತಿದ್ದುಪಡಿ ಮಾಡಿರುವ ಅದು, ವೈದ್ಯಕೀಯ ಕಾಲೇಜುಗಳಲ್ಲಿ ಸೀಟುಗಳ ಹೆಚ್ಚಳಕ್ಕೆ ಅವಕಾಶ ನೀಡಿದೆ. ಇದು ಎಂಬಿಬಿಎಸ್ ಪದವಿ ಪಡೆಯಲು ಆಸಕ್ತರಾಗಿರುವ ವಿದ್ಯಾರ್ಥಿಗಳಿಗೆ ಮತ್ತು ಕಾಲೇಜುಗಳಿಗೆ ಸಂತಸ ತಂದಿದೆ. ಈ ಹಿಂದೆ ಒಂದು ಕಾಲೇಜಿನಲ್ಲಿ ಗರಿಷ್ಠ 150 ವೈದ್ಯಕೀಯ ಸೀಟುಗಳನ್ನು ಮಾತ್ರ ಮೀಸಲಿರಿಸಬಹುದಾಗಿತ್ತು. ಇನ್ನೂ ಹಲವು ನಿಯಮಗಳಿಗೆ ಎನ್‌ಎಂಸಿ ತಿದ್ದುಪಡಿ ತಂದಿದೆ.

ಲಾಭೂರಾಮ್ ಗುಪ್ತಚರ ಐಜಿಪಿ

ಬೆಂಗಳೂರು: ರಾಜ್ಯ ಸರಕಾರವು ಪೊಲೀಸ್ ಇಲಾಖೆಯಲ್ಲಿ ಪ್ರಮುಖ ಹುದ್ದೆಗಳ ಬದಲಾವಣೆ ಮಾಡಿದ್ದು, ಬೆಂಗಳೂರು ಕೇಂದ್ರ ವಲಯದ ಐಜಿಪಿಯಾಗಿದ್ದ ಲಾಭೂ ರಾಮ್ ಅವರನ್ನು ಗುಪ್ತಚರ ಇಲಾಖೆಯ ಐಜಿಪಿಯಾಗಿ ವರ್ಗಾಯಿಸಲಾಗಿದೆ. ಗುಪ್ತಚರ ವಿಭಾಗದ ಎಡಿಜಿಪಿ ಆಗಿದ್ದ ಎಸ್. ರವಿ ಅವರನ್ನು ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಾಗಿ ನೇಮಿಸಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಬೆಂಗಳೂರಿನಲ್ಲಿ ಭಾರೀ ಮಳೆ, 'ವಿಧಾನಸೌಧ'ಕ್ಕೆ ನುಗ್ಗಿದ ನೀರು.



VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಗರಸಭೆ, ದೊಡ್ಡಬಳ್ಳಾಪುರ –561203
ಇ–ಮೇಲ್: itstaff_ulb_doddaballapur@yahoo.com
ವೆಬ್‌ಸೈಟ್: www.doddaballapurcity.mrc.gov.in

ಸಂಖ್ಯೆ:ನಸದೊ/ತಾಂ.ವಿ/ಟಿ.ಎನ್.ನಂ.01/2026–27 ದಿನಾಂಕ: 28.04.2026

"ಟೆಂಡರ್ ಪ್ರಕಟಣೆ"
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು 2026–27ನೇ ಸಾಲಿನ ನಗರಸಭಾ ನಿಧಿ ಮತ್ತು ಅಮೃತ್–2.0 ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.
(1) DMA/2026-27/OW/WORK_INDENT57523, (2) DMA/2026-27/OW/ WORK_INDENT57524, (3) DMA/2026-27/WS/WORK_INDENT57726, (4) DMA/2026-27/SE7635, (5) DMA/2026-27/OW/WORK_INDENT57741
ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(kppp.karnataka.gov.in)** ಮುಖಾಂತರ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:14.05.2026ರ 17.00 ಗಂಟೆಯವರೆಗೆ,** ಟೆಂಡರ್ ತೆರೆಯುವ **ದಿನಾಂಕ:15.05.2026ರ 17.15 ಗಂಟೆಗೆ** ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ಪಡೆದು ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/–	ಸಹಿ/–	ಸಹಿ/–
ಅಧ್ಯಕ್ಷರು	ಉಪಾಧ್ಯಕ್ಷರು	ಪೌರಾಯುಕ್ತರು
ನಗರಸಭೆ, ದೊಡ್ಡಬಳ್ಳಾಪುರ	ನಗರಸಭೆ, ದೊಡ್ಡಬಳ್ಳಾಪುರ	ನಗರಸಭೆ, ದೊಡ್ಡಬಳ್ಳಾಪುರ

ವಾ.ಸಾ.ಸಂ.ಇ/ವಾಪ್ರ/416/ಶಿರಡಿ ಸಾಯಿ/2026–27

ನಗರಸಭಾ ಕಾರ್ಯಾಲಯ, ಚಳ್ಳಕೆರೆ.(ಚಿತ್ರದುರ್ಗ ಜಿಲ್ಲೆ)

ಫೋ ನಂ. 08195–250094 ka.challakere.cmc@gmail.com

ಸಂಖ್ಯೆ: ಚ.ನ/ತಾಂತ್ರಿಕ/15ನೇ.ಹ.ಕಾ.ಬ/ನ.ನಿ 2026–27/ಟೆಂಡರ್/ಸಿ.ಆರ್03/2026–27 ದಿನಾಂಕ:28/04/2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಚಳ್ಳಕೆರೆ ನಗರಸಭಾ ವ್ಯಾಪ್ತಿಯಲ್ಲಿ 15ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನಕ್ಕೆ ಜಮೆಯಾಗಿರುವ ಬಡ್ಡಿ ಮೊತ್ತದ ಅನುದಾನದಲ್ಲಿ ಹಾಗೂ 2026–27ನೇ ಸಾಲಿನ ನಗರಸಭಾ ನಿಧಿಯಡಿಯಲ್ಲಿ ಮಂಜೂರಾಗಿರುವ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ–2000, ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-1 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಸಿವಿಲ್ ಗುತ್ತಿಗೆ/ಅಧಿಕೃತ ಏಜೆನ್ಸಿದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಿಸಲಾಗಿರುತ್ತದೆ ಹಾಗೂ ದಿನಾಂಕ: 07/05/2026 ರ ಸಂಜೆ 5:00 ಗಂಟೆವರೆಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.
www.challakerecity.mrc.gov.in ಮತ್ತು http://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.
ಕಾಮಗಾರಿಯ ಹೆಸರು:– 15ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನಕ್ಕೆ ಜಮೆಯಾಗಿರುವ ಬಡ್ಡಿ ಮೊತ್ತದ ಅನುದಾನದಲ್ಲಿ ಹಾಗೂ 2026–27 ನೇ ಸಾಲಿನ ನಗರಸಭಾ ನಿಧಿಯಡಿಯಲ್ಲಿ (ರೂ35.31 ಲಕ್ಷಗಳು):– (1) ಚಳ್ಳಕೆರೆ ನಗರಸಭೆ ವ್ಯಾಪ್ತಿಯಲ್ಲಿರುವ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ABC CENTER ನಿರ್ಮಾಣ ಕಾಮಗಾರಿ ಅಂದಾಜು ಮೊತ್ತ 24.30 ಲಕ್ಷ INDENT NO: DMA/2026-27/BD/WORK_INDENT57721 ಅಂದಾಜು ಮೊತ್ತ (ರೂಲಕ್ಷಗಳಲ್ಲಿ):–24.30 ಟೆಂಡರ್‌ಗಿಟ್ಟ ಮೊತ್ತ ಜಿ.ಎಸ್.ಟಿ ಹೊರತುಪಡಿಸಿ (ರೂ ಲಕ್ಷಗಳಲ್ಲಿ):–20.59 ಇ.ಎಂ.ಡಿ. (ರೂಗಳಲ್ಲಿ):–50,000 ನಿಗಧಿಪಡಿಸಿದ ಕಾಲಾವಧಿ:–03 ತಿಂಗಳು ಗುತ್ತಿಗೆದಾರರ ದರ್ಜೆ:–4ನೇ ದರ್ಜೆ ಸಿವಿಲ್ ಗುತ್ತಿಗೆದಾರರು ಮತ್ತು ಮೇಲ್ಪಟ್ಟು
(2) ಚಳ್ಳಕೆರೆ ನಗರಸಭೆ ವ್ಯಾಪ್ತಿಯಲ್ಲಿರುವ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ DOG SHELTER ನಿರ್ಮಾಣ ಕಾಮಗಾರಿ ಅಂದಾಜು ಮೊತ್ತ 11.01 ಲಕ್ಷ INDENT NO: DMA/2026-27/BD/WORK_INDENT57720 ಅಂದಾಜು ಮೊತ್ತ (ರೂಲಕ್ಷಗಳಲ್ಲಿ):–11.01 ಟೆಂಡರ್‌ಗಿಟ್ಟ ಮೊತ್ತ ಜಿ.ಎಸ್.ಟಿ ಹೊರತುಪಡಿಸಿ (ರೂ ಲಕ್ಷಗಳಲ್ಲಿ):–9.27 ಇ.ಎಂ.ಡಿ. (ರೂಗಳಲ್ಲಿ):–23,200.00 ನಿಗಧಿಪಡಿಸಿದ ಕಾಲಾವಧಿ:–03 ತಿಂಗಳು 4ನೇ ದರ್ಜೆ ಸಿವಿಲ್ ಗುತ್ತಿಗೆದಾರರು ಮತ್ತು ಮೇಲ್ಪಟ್ಟು

RO.No.77:DIPR/CTA/KSMCA/2026-27
ಸಹಿ/– ಪೌರಾಯುಕ್ತರು, ನಗರಸಭೆ, ಚಳ್ಳಕೆರೆ

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂರವಾಣಿ/ಫ್ಯಾಕ್ಸ್ : 080–2793 4470 / 2793 5412 ಇ–ಮೇಲ್: hosakote.pa@gmail.com URL : www.hosakote.tpa.gov.in

ಸಂಖ್ಯೆ: ಹೊಯೋಪ್ರಾ/ಭೂ.ಉ.ನಿ/02/2026–27 ದಿನಾಂಕ: 28.04.2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಸಾರ್ವಜನಿಕ ಮತ್ತು ಅರೆ–ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸಲು ಕೋರಿರುವ ಬಗ್ಗೆ.

***

ಅರ್ಜಿದಾರರಾದ ಲೇಟ್ ಹೆಚ್.ಎಂ. ಮುನಿಯಪ್ಪ ಇವರ ಮಕ್ಕಳಾದ ಶ್ರೀ ಮುನಿಕೆಂಪಣ್ಣ ಮತ್ತು ಶ್ರೀ ಎಂ. ಹುಲ್ಲೂರಪ್ಪ ಇವರ ಪರವಾಗಿ ಜಿಪಿಎದಾರರಾದ ಮೆ॥ ವಿ.ಆರ್. ಅರ್ಬನ್ ಡೆವಲಪರ್ಸ್ ಇದರ ಪರವಾಗಿ ಮ್ಯಾನೇಜಿಂಗ್ ಪಾರ್ಟ್‌ನರ್ ಆದ ಶ್ರೀ ಕಿಶೋರ್ ಆರ್. ಇವರು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕಣ್ಣೂರಹಳ್ಳಿ ಗ್ರಾಮದ ಸ.ನಂ. 163/1 ರ ಪೈಕಿ 16 1/2 ಗುಂಟೆ ವಿಸ್ತೀರ್ಣದ ಜಮೀನನ್ನು **"ಸಾರ್ವಜನಿಕ ಮತ್ತು ಅರೆ–ಸಾರ್ವಜನಿಕ ಉದ್ದೇಶದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಭೂ ಉಪಯೋಗ ನಿಗದಿಪಡಿಸಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ **ಸಾರ್ವಜನಿಕ ಮತ್ತು ಅರೆ–ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ** ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು/ ಬರುತ್ತಿದ್ದು, "ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ನಿಗದಿಪಡಿಸುವ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾ.ಸಾ.ಸಂ.ಇ/ವಾಪ್ರ/425/ಅಕಾರ್/2026–27

ಧರ್ಮಸ್ಥಳದಲ್ಲಿ 54ನೇ ಸಾಮೂಹಿಕ ವಿವಾಹದಲ್ಲಿ ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡಿದ 106 ಜೋಡಿಗೆ ದಾಂಪತ್ಯ ದೀಕ್ಷೆ ಬೋಧಿಸಲಾಯಿತು. ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಹೇಮಾವತಿ ವೀ. ಹೆಗ್ಗಡೆ, ಶ್ರದ್ಧಾಅಮಿತ್, ಶರ್ಮಿಳಾ ಮತ್ತು ಗಣ್ಯ ಅತಿಥಿಗಳು ಇದ್ದರು.

CAPITALMIND MUTUAL FUND

CAPITALMIND ASSET MANAGEMENT PRIVATE LIMITED
CIN: U66301KA2024PTC194639 | SEBI Reg. No.: MF/084/25/10
Address: 1st Floor, 2323, Prakash Arcade,
17th Cross Rd, 1st Sector, HSR Layout, Bengaluru, Karnataka 560102
Telephone: 1800-570-5001, Email: support@capitalmindmf.com
Website: https://www.capitalmindmf.com

NOTICE

Disclosure of Unaudited Half Yearly Financial Results of Scheme(s) of Capitalmind Mutual Fund

Notice is hereby given to the Investors / Unit holders of all the scheme(s) of Capitalmind Mutual Fund ("**the Fund**") that in accordance with Regulation 59 of the SEBI (Mutual Funds) Regulations, 1996 a soft copy of Unaudited Half Yearly Financial Results of schemes of the Fund for the half year ended as on March 31, 2026 is hosted on our website (**www.capitalmindmf.com**).

Unit holders can access the Unaudited Half Yearly Financial Results of the Scheme using the link provided below:
https://cm.fund/unaudited-financials-H2-2026

For Capitalmind Asset Management Private Limited
Investment Manager (AMC)

Sd/-
Deepak Shenoy
Chief Executive Officer

Date: April 30, 2026

Mutual Fund investments are subject to market risks, read all the scheme related documents carefully.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–1&2/ಇ–ಟೆಂಡರ್ ಪ್ರಕಟಣೆ/2026–27/ 231 ದಿನಾಂಕ:29–04–2026

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2025–26ನೇ ಸಾಲಿನ 5054 ಅಪೆಂಡಿಕ್ಸ್–ಇ (ಯೋಜನೆ) ಅಡಿಯಲ್ಲಿ ಶಹಾಪುರ ತಾಲೂಕಿನ (1)32497/3ನೇ ಕರೆ ಹಾಗೂ ಸುರಪೂರ ತಾಲೂಕಿನ (1)34893, (2)34952, ಒಟ್ಟು 3 (ಮೂರು) ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. **2) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.400.00 ಲಕ್ಷಗಳು ಹಾಗೂ ಗರಿಷ್ಠ ರೂ:500.00 ಲಕ್ಷಗಳು **3) ಗುತ್ತಿಗೆದಾರರ ಅರ್ಹತೆ ವಿವರ:**ಸಿವಿಲ್ 2ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, **5) ಪ್ರೀ ಬಿಡ್ ಮೀಟಿಂಗ್ ದಿನಾಂಕ:**05.05.2026 (11.30 ಗಂಟೆ ನಂತರ)(ಕೆಡಬ್ಲ್ಯೂ–4ರ ಕಾಮಗಾರಿಗಳಿಗೆ ಮಾತ್ರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:**07.05.2026 (17.30 ಗಂಟೆವರೆಗೆ) **7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 11.05.2026 (16.00 ಗಂಟೆವರೆಗೆ) 8) **ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:**12.05.2026 (16.30 ಗಂಟೆ ನಂತರ) **9) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 14.05.2026 (11.30 ಗಂಟೆ ನಂತರ) 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ **11) ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in
ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/41/ಕೆ.ಎಸ್.ಎಂ.ಸಿ.&ಎ/2026–27

JANA SMALL FINANCE BANK LIMITED

(A Scheduled Commercial Bank)
CIN No: L65923KA2006PLC040028
Regd Office : The Fairway Business Park #10/1, 11/2, 12/2B, Off Domlur,
Koramangala Inner Ring Road, Next to EGL, Challaghatta, Bengaluru 560071

EXTRACTS OF STANDALONE AUDITED FINANCIAL RESULTS FOR THE QUARTER AND YEAR ENDED MARCH 31, 2026

(₹ in 000s)

Particulars	Quarter Ended			Year Ended	
	31-03-2026 Audited	31-12-2025 Unaudited	31-03-2025 Audited	31-03-2026 Audited	31-03-2025 Audited
Total Income from Operations	1,71,01,941	1,61,82,655	1,41,77,294	6,37,47,641	5,44,71,704
Net Profit / (Loss) for the period (before Tax, Exceptional and/or Extraordinary items)	13,98,183	96,942	11,98,385	32,64,282	47,36,780
Net Profit / (Loss) for the period before tax (after Exceptional and/or Extraordinary items)	13,98,183	96,942	11,98,385	32,64,282	47,36,780
Net Profit / (Loss) for the year (after tax) (after exceptional and/or extraordinary items)	**13,98,183**	**96,942**	**12,34,785**	**32,64,282**	**50,14,187**
Paid up Equity Share Capital	10,53,246	10,52,737	10,50,565	10,53,246	10,50,565
Reserves (excluding Employees Stock Option Reserve)	-	-	-	4,32,82,492	3,98,65,469
Networth	**4,21,55,009**	**4,03,61,932**	**3,87,43,078**	**4,21,55,009**	**3,87,43,078**
Paid up Debt Capital / Outstanding Debt	5,49,67,618	3,75,12,847	3,86,68,171	5,49,67,618	3,86,68,171
Outstanding Redeemable Preference Shares	Nil	Nil	Nil	Nil	Nil
Capital Adequacy Ratio (%)	19.38%	19.17%	20.68%	19.38%	20.68%
Debt Equity Ratio	1.24	0.87	0.95	1.24	0.95
Earnings Per Equity Share (face value of ₹ 10 per share)					
1. Basic (₹)	13.28	0.92	11.76	31.02	47.89
2. Diluted (₹)	13.23	0.92	11.71	30.92	47.67

Notes :
1. The above publication is an extract of the detailed financial results filed with the Stock Exchange under Regulation 30, 33, 51 and 52 of the SEBI (Listing Obligation and Disclosure Requirements) Regulations, 2015.
2. The above results of the Bank have been reviewed and recommended by the Audit Committee and approved by the Board of Directors at their meeting held on April 29, 2026.
3. Previous year/period figures have been regrouped / reclassified, wherever necessary to conform with the current year/period presentation.
4. The full format of financial results are available on Stock Exchange websites **(www.bseindia.com** and **www.nseindia.com)** and Bank's website **(www.jana.bank.in)**

Scan QR Code for Detailed Information

Bengaluru
April 29, 2026

For and on behalf of the Board of Directors
Ajay Kanwal
Managing Director & Chief Executive Officer

ಶ್ರೀ ಮಧುಸೂದನ ಸಾಯಿ ವೈದ್ಯಕೀಯ ಸಂಸ್ಥೆಗೆ ಎನ್‌ಎಬಿಎಚ್ ಮಾನ್ಯತೆ

ಮುದ್ದೇನಹಳ್ಳಿ: ಇಲ್ಲಿನ ಶ್ರೀ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ರಾಷ್ಟ್ರೀಯ ಆಸ್ಪತ್ರೆಗಳು ಮತ್ತು ಆರೋಗ್ಯ ಸೇವಾ ಮಾನ್ಯತಾ ಮಂಡಳಿ ಆರಂಭಿಕ ಹಂತದ ಮಾನ್ಯತೆಯನ್ನು ನೀಡಿದೆ. ಇದರೊಂದಿಗೆ ಗ್ರಾಮೀಣ ಆರೋಗ್ಯ ಸೇವೆಗೆ ಹೊಸ ಬಲ ಸಿಕ್ಕಿದೆ.

ಈ ಪ್ರತಿಷ್ಠಿತ ಮಾನ್ಯತೆಯಿಂದಾಗಿ ಸಂಸ್ಥೆಯು ರೋಗಿಯ ಸುರಕ್ಷತೆ, ಗುಣಮಟ್ಟದ ಚಿಕಿತ್ಸೆ ಹಾಗೂ ಆಸ್ಪತ್ರೆ ನಿರ್ವಹಣೆಯ ರಾಷ್ಟ್ರೀಯ ಮಾನದಂಡಗಳನ್ನು ಸಮರ್ಥವಾಗಿ ಪಾಲಿಸುತ್ತಿದೆ ಎಂಬುದು ದೃಢಪಟ್ಟಿದೆ. ಸಂಪೂರ್ಣ ಉಚಿತ ಸೇವೆಗಳನ್ನು ನೀಡುವ ದೇಶದ ವಿರಳ ಗ್ರಾಮೀಣ ವೈದ್ಯಕೀಯ ಕಾಲೇಜುಗಳಲ್ಲಿ ಒಂದಾದ ಈ ಸಂಸ್ಥೆಗೆ ಹೊಸ ಗರಿಮೆ ಸಿಕ್ಕಿದಂತಾಗಿದೆ.

ಒಂದು ವರ್ಷದ ನಿರಂತರ ಪರಿಶ್ರಮ: ಸದ್ಗುರು ಶ್ರೀ ಮಧುಸೂದನ ಸಾಯಿ ಅವರ ಮಾರ್ಗದರ್ಶನದಲ್ಲಿ 2025ರ ಜನವರಿಯಲ್ಲಿ ಆರಂಭವಾದ ಗುಣಮಟ್ಟ ಸುಧಾರಣಾ ಪ್ರಕ್ರಿಯೆ, ಒಂದು ವರ್ಷದ ನಿರಂತರ ಪರಿಶ್ರಮ, ಶಿಸ್ತು ಮತ್ತು ತಂಡದ ಪ್ರಯತ್ನದ ಫಲವಾಗಿ ಈ ಸಾಧನೆ ಸಾಧ್ಯವಾಗಿದೆ. ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿ ವರ್ಗದವರೆಲ್ಲ ಪ್ರಯತ್ನಗಳಿಂದ ಕ್ಲಿನಿಕಲ್ ಮತ್ತು ಆಡಳಿತಾತ್ಮಕ ವ್ಯವಸ್ಥೆಗಳು ರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ರೂಪುಗೊಂಡು ಜಾರಿಗೊಂಡಿವೆ.

ಈ ಸಾಧನೆಯೊಂದಿಗೆ ಖಖಖಐಖಖ ಸಂಪೂರ್ಣ ಉಚಿತ ಸೇವೆಗಳನ್ನು ನೀಡುವ ಖಾಸಗಿ ಗ್ರಾಮೀಣ ವೈದ್ಯಕೀಯ ಕಾಲೇಜು ಆಸ್ಪತ್ರೆಗಳ ಪೈಕಿ ಒಂದಾಗಿ ಗುರುತಿಸಿಕೊಂಡಿದೆ. ಗ್ರಾಮೀಣ ಪ್ರದೇಶದಲ್ಲಿಯೇ ಉಚಿತ ಸೇವೆಗಳೊಂದಿಗೆ ಗುಣಮಟ್ಟದ ಚಿಕಿತ್ಸೆ ನೀಡಬಹುದು ಎಂಬುದನ್ನು ಈ ಸಂಸ್ಥೆ ಸಾಬೀತುಪಡಿಸಿದೆ.

> **ದೇಶದಲ್ಲಿರುವ ಸುಮಾರು 80,000 ರಿಂದ 90,000 ಆಸ್ಪತ್ರೆಗಳ ಪೈಕಿ ಕೇವಲ ಶೇ.1.4ರಷ್ಟು ಆಸ್ಪತ್ರೆಗಳು ಮಾತ್ರ ಸಂಪೂರ್ಣ ಮಾನ್ಯತೆ ಪಡೆದಿವೆ. ಸುಮಾರು ಶೇ.3ರಷ್ಟು ಆಸ್ಪತ್ರೆಗಳು ಮಾತ್ರ ಆರಂಭಿಕ ಹಂತದ ಮಾನ್ಯತೆ ಹೊಂದಿವೆ. ಸಂಪೂರ್ಣ ಉಚಿತ ವೈದ್ಯಕೀಯ ಸೇವೆಗಳನ್ನು ನೀಡುವ ಆಸ್ಪತ್ರೆಗಳ ಸಂಖ್ಯೆ ತೀರಾ ಕಡಿಮೆ. ನಮ್ಮ ಸಂಸ್ಥೆಗೆ ಮಾನ್ಯತೆ ದೊರಕಿರುವುದು ಮೊದಲ ಹೆಜ್ಜೆಯಾಗಿದೆ. ಶೀಘ್ರದಲ್ಲೇ ಸಂಪೂರ್ಣ ಎನ್‌ಎಬಿಎಚ್ ಮಾನ್ಯತೆ ಪಡೆಯುವ ವಿಶ್ವಾಸವೂ ನಮಗಿದೆ.**
>
> **ಡಾ.ಪದ್ಮಶ್ರೀ, ವ್ಯವಸ್ಥಾಪಕರು**

ಮತ್ತೆ ದಲಿತ ಸಿಎಂ ಕೂಗು

← ಮೊದಲಪುಟದಿಂದ

ಈ ನಡುವೆ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಬಣದ ಶಾಸಕರ ನಿಯೋಗ ದೆಹಲಿಯತ್ತ ಮುಖ ಮಾಡಿದೆ. ಎರಡೂ ಬಣಗಳಿಂದಲೂ ಬೇರೆ ಬೇರೆ ಶಾಸಕರು ದೆಹಲಿಗೆ ತೆರಳುತ್ತಿದ್ದು, ತಮ್ಮದೇ ಆದ ರೀತಿಯಲ್ಲಿ ಲಾಬಿ ನಡೆಸಲು ಮುಂದಾಗಿದ್ದಾರೆ. ಸಿದ್ದರಾಮಯ್ಯ ಅವರ ಬಣದವರು ನಾಯಕತ್ವ ಬದಲಾವಣೆಯಾಗಬಾರದು ಎಂದು ಪ್ರತಿಪಾದಿಸಿದರೆ, ಇತ್ತ ಡಿ.ಕೆ.ಶಿವಕುಮಾರ್ ಬಣದ ಶಾಸಕರು, ಚುನಾವಣೆಯ ಕೆಲಸಕ್ಕಾಗಿ ಕೂಲಿ ನೀಡುವಂತೆ ಒತ್ತಡ ಹೇರುತ್ತಿದ್ದಾರೆ. ಹೈಕಮಾಂಡ್‌ಗೆ ಇದು ಇಕ್ಕಟ್ಟಿನ ಪರಿಸ್ಥಿಯನ್ನು ನಿರ್ಮಿಸಿದೆ.

ಗೊಂದಲ ಬಗೆಹರಿಸಬೇಕು: ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಕೆ.ಎಚ್.ಮುನಿಯಪ್ಪ, ರಾಜ್ಯದಲ್ಲಿ ಸಿಎಂ ಬದಲಾವಣೆ ವಿಚಾರದಲ್ಲಿ ಇನ್ನಷ್ಟು ತಡ ಮಾಡಬಾರದು. ಸಿಎಂ ಸ್ಥಾನದ ಗೊಂದಲವನ್ನು ತಕ್ಷಣ ಬಗೆಹರಿಸಿ ಎಂದು ವರಿಷ್ಠರಿಗೆ ಮನವಿ ಮಾಡಿದ್ದೇವೆ. ಹೈಕಮಾಂಡ್ ನಾಯಕರು ಏನಾದರೂ ಒಂದು ನಿರ್ಧಾರವನ್ನು ಸ್ಪಷ್ಟವಾಗಿ ತೆಗೆದುಕೊಳ್ಳಬೇಕು. ಬಹುತೇಕ ಈ ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಬಂದ ಬಳಿಕ, ಮೇ ಅಂತ್ಯದ ವೇಳೆಗೆ ಹೈಕಮಾಂಡ್ ಒಂದು ಸ್ಪಷ್ಟ ನಿರ್ಧಾರಕ್ಕೆ ಬರಬಹುದು. ಸಿದ್ದರಾಮಯ್ಯ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. 50 ಸಾವಿರ ಕೋಟಿ ರು. ವೆಚ್ಚದಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಐದು ಕೋಟಿಯಷ್ಟು ಜನರಿಗೆ ಸರಕಾರದ ಸೌಲಭ್ಯಗಳು ತಲುಪುತ್ತಿವೆ. ಇಂತಹ ಸಮಯದಲ್ಲಿ ಈ ಹಂತದಲ್ಲಿ ಅಧಿಕಾರ ಹಂಚಿಕೆ ಕುರಿತ ಗೊಂದಲ ಸರಿಯಲ್ಲ ಎಂದು ಮನವಿ ಮಾಡಿದ್ದೇನೆ. ಒಂದು ವೇಳೆ, ಸಿದ್ದರಾಮಯ್ಯ–ಡಿಕೆಶಿಯವರಿಗೆ 2.5 ವರ್ಷದ ಮಾತು ಕೊಟ್ಟಿದ್ದರೆ, ಹೈಕಮಾಂಡ್‌ಗೆ ಅದು ಗೊತ್ತಿರುತ್ತದೆ ಎಂದರು.

ಸಿದ್ದು ಆಪ್ತರಿಂದ ಅಹಿಂದ ಜಪ: ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಪ್ತರು ಅಹಿಂದ ಜಪ ಶುರು ಮಾಡಿದ್ದಾರೆ. ಮುಖ್ಯಮಂತ್ರಿ ಬದಲಾವಣೆ ವಿಷಯ ಮುನ್ನೆಲೆಗೆ ಬರುತ್ತಿದ್ದಂತೆಯೇ ದಲಿತ ಸಿಎಂ ಕೂಗಿನ ಜತೆಜತೆಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಅಹಿಂದ ನಾಯಕತ್ವವನ್ನು ತರಬೇಕು. ಕಾಂಗ್ರೆಸ್‌ನ ಮತಬ್ಯಾಂಕ್ ಎನಿಸಿರುವ ಅಹಿಂದ ಸಮುದಾಯದ ಮತಗಳು ಪಕ್ಷದಿಂದ ವಿಭಜನೆಯಾಗಬಾರದು ಎಂದರೆ, ಅಹಿಂದ ಸಮುದಾಯದ ನಾಯಕನಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಬೇಕು. ಇದರಿಂದ ಮುಂದಿನ ಚುನಾವಣೆಗೆ ಪಕ್ಷಕ್ಕೆ ಸಹಾಯವಾಗಲಿದೆ ಎನ್ನುವ ಲೆಕ್ಕಾಚಾರವನ್ನು ಪಕ್ಷದ ಹೈಕಮಾಂಡ್ ಮುಂದಿಡಲು ಸತೀಶ್ ಜಾರಕಿಹೊಳಿ, ಮಹದೇವಪ್ಪ ಸೇರಿದಂತೆ ಹಲವು ನಾಯಕರು ದೆಹಲಿಯಲ್ಲಿ ಪ್ರಯತ್ನ ಮುಂದುವರಿಸಿದ್ದಾರೆ. ಈ ನಡುವೆ ಮುಖ್ಯಮಂತ್ರಿ ಬಣದಿಂದ ಅಹಿಂದ ಸಮಾವೇಶದ ಮೂಲಕ ಮತ್ತೊಂದು ಶಕ್ತಿ ಪ್ರದರ್ಶನಕ್ಕೆ ತೆರೆಮರೆಯ ಕಸರತ್ತು ಆರಂಭವಾಗಿದೆ. ಮಹದೇವಪ್ಪ ಅವರು ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಅಹಿಂದ ಸಮಾವೇಶ ಆಯೋಜನೆಗೆ ಅನುಮತಿ ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೇ 20ರಿಂದ ಸಾರಿಗೆ ನೌಕರರ ಮುಷ್ಕರ

ಬೆಂಗಳೂರು: ರಾಜ್ಯ ರಸ್ತೆ ಸಾರಿಗೆ ನೌಕರರು ಮತ್ತೆ ಮುಷ್ಕರದ ಹಾದಿ ಹಿಡಿದಿದ್ದಾರೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಬುಧವಾರ ನಡೆದ ಮಾತುಕತೆ ಸಭೆ ಫಲಕಾರಿಯಾಗದೇ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ, ನೌಕರರು ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಸಭೆಯಲ್ಲಿ ನೌಕರರ ಬೇಡಿಕೆಗಳ ಕುರಿತು ಚರ್ಚೆ ನಡೆದರೂ ಸ್ಪಷ್ಟ ಭರವಸೆ ಸಿಗದ ಕಾರಣ, ಸಂಘಟನೆಗಳು ಮುಷ್ಕರ ನಿರ್ಧಾರಕ್ಕೆ ಬಂದಿವೆ. ಸರಕಾರ ಮತ್ತು ನೌಕರರ ನಡುವಿನ ಭಿನ್ನಾಭಿಪ್ರಾಯ ಇನ್ನೂ ಮುಂದುವರಿದಿದ್ದು, ಸಾರ್ವಜನಿಕ ಸಾರಿಗೆ ಸೇವೆಗೆ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ.

ಬುಧವಾರ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಾರಿಗೆ ನೌಕರರ ಬೇಡಿಕೆಯನ್ನು ಆಲಿಸಿ, ಅಹವಾಲನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಆದಷ್ಟು ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದರು. ಸಾರಿಗೆ ನಿಗಮಗಳ ಆರ್ಥಿಕ ವರ್ಗಗಳು ಮತ್ತು ಸರಕಾರಕ್ಕೆ ಸಾರಿಗೆ ನೌಕರರ ಬಗ್ಗೆ ನಿಜವಾದ ಕಾಳಜಿ ಇದೆ ಎಂದರು. ಸಾರಿಗೆ ನೌಕರರಿಗೆ ನಾಲ್ಕು ವರ್ಷ ಮೊದಲೇ 7ನೇ ವೇತನ ಆಯೋಗ ನೇಮಿಸಿ ಶೇ.27.5 ವೇತನ ಹೆಚ್ಚಳ ಘೋಷಿಸಿರುವ ರಾಜ್ಯ ಸರಕಾರವು ಸಾರಿಗೆ ನೌಕರರ ವಿಷಯದಲ್ಲಿ ತಾರತಮ್ಯ ದೋರಣೆ ಅನುಸರಿಸುತ್ತಿರುವುದು ಸಾರಿಗೆ ನೌಕರರ ಆಕ್ರೋಶಕ್ಕೆ ಕಾರಣವಾಗಿದೆ. ಮೊದಲ ಹಂತವಾಗಿ 450 ರು.ಬಿಡುಗಡೆ ಮಾಡಿದರು ಸಹ ಈ ಕ್ರಮ ನೌಕರರ ಅಸಮಾಧಾನವನ್ನು ತಣಿಸಲು ಸಾಕಾಗಿಲ್ಲ. ತಕ್ಷಣವೇ ಸಮಗ್ರ ಪರಿಹಾರ ಸಿಗದಿದ್ದರೆ, ಮೇ 20ರಿಂದ ರಾಜ್ಯದ ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತವಾಗುವ ಸಾಧ್ಯತೆ ಹೆಚ್ಚಾಗಿದೆ.

ನೌಕರರ ಪ್ರಮುಖ ಬೇಡಿಕೆಗಳು

- **ಶೇ.25 ವೇತನ ಪರಿಷ್ಕರಣೆ ಜಾರಿಗೆ ತರಬೇಕು**
- **ಬಾಕಿ ಇರುವ ವೇತನ ಹಾಗೂ ಭತ್ಯೆಗಳನ್ನು ತಕ್ಷಣ ಪಾವತಿಸಬೇಕು**
- **2020ರ ಬಾಕಿ ಹಣವನ್ನು ನೌಕರರು ಹಾಗೂ ನಿವೃತ್ತರಿಗೆ ಬಿಡುಗಡೆ ಮಾಡಬೇಕು**
- **26 ತಿಂಗಳ ಬಾಕಿ ಹಣ (1272 ಕೋಟಿ ರು.) ಒಂದೇ ಬಾರಿ ಪಾವತಿಸಬೇಕು**

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ. Telephone: 08392 -276250
e-mail: dhobellari@gmail.com

ಸಂಖ್ಯೆ:ಜಿಅಕುಕಇಬ/ಲೆಕ್ಕ ಪತ್ರ(2)/ಹೊ.ಗು/01/2026–27 ದಿನಾಂಕ 27.04.2026.

ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬಳ್ಳಾರಿ ವ್ಯಾಪ್ತಿಯಲ್ಲಿ ಬರುವ ವಿವಿಧ ಆರೋಗ್ಯ ಕೇಂದ್ರಗಳಿಗೆ ಖಾಲಿ ಇರುವ ಜಿ.ಪಂ.ಬಳ್ಳಾರಿ ಹುದ್ದೆಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ಹೊರಸಂಪನ್ಮೂಲದಿಂದ ಪಡೆಯಲು ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಇ–ಟೆಂಡರ್ ಆಹ್ವಾನಿಸಲಾಗಿದೆ, ಸದರಿ ಇ–ಟೆಂಡರ್‌ನ್ನು **https://kppp.karnataka.gov.in/#/portal/portal-home**ನಲ್ಲಿ ವೀಕ್ಷಣೆ ಹಾಗೂ ಡೌನ್‌ಲೋಡ್‌ಗೆ ಲಭ್ಯ ವಿರುತ್ತದೆ ಇ–ಟೆಂಡರ್ ಮೊತ್ತ ಹಾಗೂ ಕೊನೆಯ ದಿನಾಂಕ & ಟೆಂಡರ್ ಇಂಡೆಂಟ್ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

1.ಇ–ಟೆಂಡರ್ ಮೊತ್ತ **ರೂ.207.03** ಲಕ್ಷಗಳು ಇರುತ್ತದೆ. ಕೊನೆಯ ದಿನಾಂಕ 11.05.2026 @ 17:00 ಗಂಟೆಗೆ ಇ–ಟೆಂಡರ್ ಇಂಡೆಂಟ್ ಸಂಖ್ಯೆ: **DHFWS/2025-26/SE2204.**

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಬಳ್ಳಾರಿ ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/100

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
Karnataka One State, Many worlds
(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಕಾರ್ಯನಿರ್ವಾಹಕ ಕಛೇರಿ, 5ನೇ ಮಹಡಿ, ಇಂಧನ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560009 ದೂರವಾಣಿ: 080–42775575 ಫ್ಯಾಕ್ಸ್: (080) 42775589,
ವೆಬ್‌ಸೈಟ್:www.kstdc.co

ಸಂಖ್ಯೆ: KSTDC/PROC/03/2026-27/ ದಿನಾಂಕ:29.04.2026

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ನಿಗಮದ ಹೋಟೆಲ್ ಮಯೂರ ಪೈನ್‌ಟಾಪ್ ನಂದಿ ಗಿರಿಧಾಮ ಘಟಕಕ್ಕೆ ಅವಶ್ಯಕವಿರುವ Kitchen Equipment's ಗಳನ್ನು ಸರಬರಾಜು ಮಾಡುವ ಸಂಬಂಧ ಆಸಕ್ತ / ಅರ್ಹ ಸರಬರಾಜುದಾರರು / ಸರಬರಾಜುದಾರ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳುವ ಸಂಬಂಧ ಟೆಂಡರನ್ನು ಆಹ್ವಾನಿಸಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ.

ಟೆಂಡರ್ ಸಂಖ್ಯೆ	ವಿವರಣೆ	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ
KSTDC/2026-27/IND0039	ಹೋಟೆಲ್ ಮಯೂರ ಪೈನ್ ಟಾಪ್ ನಂದಿ ಗಿರಿಧಾಮ ಘಟಕಕ್ಕೆ ಅವಶ್ಯಕವಿರುವ Kitchen Equipment's ಗಳನ್ನು ಸರಬರಾಜು ಮಾಡುವ ಸಂಬಂಧ.	07.05.2026 at 11.00 A.M.

ಆಸಕ್ತ / ಅರ್ಹ ಸರಬರಾಜುದಾರರು / ಸರಬರಾಜುದಾರ ಸಂಸ್ಥೆಗಳು ಟೆಂಡರ್ ದಾಖಲೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಜಾಲತಾಣ: **www.kppp.karnataka.gov.in** ನ್ನು ಭೇಟಿ ನೀಡಲು ಕೋರಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9240214000/01, ಇ–ಮೇಲ್:**support@eprochelpdesk.com** ನ್ನು ಸಂಪರ್ಕಿಸುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆ), ಕ.ರಾ.ಪ್ರ.ಅ.ನಿ

ಎಕ್ಸ್‌ಪ್ರೆಸ್‌ವೇಗೆ ಮೋದಿ ಚಾಲನೆ

← ಮೊದಲಪುಟದಿಂದ

ಕಳೆದ ವರ್ಷ, ಈ ವಾಯುನೆಲೆಯಲ್ಲಿ ರಫೇಲ್, ಸುಖೋಯ್ 30–ಎಂಕೆಐ, ಮಿರಾಜ್ –2000, ಎಎನ್–32 ಮತ್ತು ಎಂಐ–17ವಿ 5 ಹೆಲಿಕಾಪ್ಟರ್‌ಗಳ ಲ್ಯಾಂಡಿಂಗ್ ಮತ್ತು ಟೇಕಾಫ್ ಅನ್ನು ಪರೀಕ್ಷಿಸಲಾಯಿತು.

ಗಂಗಾ ಕೈಗಾರಿಕಾ ಕಾರಿಡಾರ್ ಅನ್ನು ಎಕ್ಸ್ ಪ್ರೆಸ್ ವೇನ ಎರಡೂ ಬದಿಗಳಲ್ಲಿ ಅಭಿವೃದ್ಧಿಪಡಿ ಸಲಾಗು ತ್ತಿದೆ. ಈ ಯೋಜನೆಯಡಿಯಲ್ಲಿ ಮೀರತ್, ಬದೌನ್, ಕಾನ್ಪುರ, ವಾರಣಾಸಿ ಮತ್ತು ಪ್ರಯಾಗ್‌ರಾಜ್ ಸುತ್ತಲೂ ಫಾರ್ಮಾ ಪಾರ್ಕ್‌ಗಳು, ಜವಳಿ ಪಾರ್ಕ್‌ಗಳು ಮತ್ತು ಐಟಿ ಪಾರ್ಕ್‌ಗಳನ್ನು ಸ್ಥಾಪಿಸಲು ಸರ್ಕಾರ ಯೋಜಿ ಸಿದೆ. ಈ ಮೂಲಕ ಕೈಗಾರಿಕೆ, ಐಟಿ, ಫಾರ್ಮಾ ಮತ್ತು ಕೃಷಿಗೆ ಮತ್ತಷ್ಟು ಪ್ರೋತ್ಸಾಹ ನೀಡುವ ಉದ್ದೇಶ ಹೊಂದಿದೆ.

ಸಮಾಚಾರ ಸಣ್ಣದಲ್ಲ

ಶಂಕರಗೌಡ ಪಾಟೀಲ್ ಪ್ರಧಾನ ಕಾರ್ಯದರ್ಶಿ

ಬೆಂಗಳೂರು: ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಹಾವೇರಿಯ ಶಂಕರಗೌಡ ಚನ್ನಬಸವನಗೌಡ ಪಾಟೀಲ್ ಅವರನ್ನು ನೇಮಕ ಮಾಡಲಾಗಿದೆ. ಈ ಹಿಂದೆ ರಾಜ್ಯ ಪ್ರದಾನ ಕಾರ್ಯದರ್ಶಿಯಾಗಿದ್ದ ದಾವಣಗೆರೆಯ ಪರಮೇಶ ಪಟ್ಟಣಶೆಟ್ಟಿ ಅವರ ಮೇಲೆ ಗಂಭೀರ ಆರೋಪಗಳು ಬಂದಿತ್ತು. ಸಂಘದ ಅಧ್ಯಕ್ಷರ ಆದೇಶಗಳನ್ನು ಉಲ್ಲಂಘನೆ ಮಾಡುತ್ತಿರುವುದಾಗಿ ತಿಳಿದುಬಂದಿತ್ತು. ಆದ್ದರಿಂದ ಪರಮೇಶ ಪಟ್ಟಣಶೆಟ್ಟಿ ಅವರನ್ನು ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಕೆಳಗಿಳಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಸೋಮನಗೌಡ ಎಂ. ಪಾಟೀಲ್ ತಿಳಿಸಿದ್ದಾರೆ.

ಬಿಸಿಲಿನ ತಾಪಕ್ಕೆ ವಿದ್ಯಾರ್ಥಿ ಸಾವು

ಮುದ್ದೇಬಿಹಾಳ: ಬೇಸಿಗೆ ರಜೆ ಹಿನ್ನೆಲೆಯಲ್ಲಿ ಬಿಸಿಲಿನಲ್ಲಿ ಆಟವಾಡುತ್ತಿದ್ದ 8ನೇ ತರಗತಿ ಬಾಲಕನೊಬ್ಬ ತೀವ್ರ ಶಾಖಕ್ಕೆ ತುತ್ತಾಗಿ ಅಸ್ವಸ್ಥಗೊಂಡು ಮೃತಪಟ್ಟಿದ್ದಾನೆ. ಮುದ್ದೇಬಿಹಾಳ ತಾಲೂಕಿನ ಇಂಗಳಗಿ ಗ್ರಾಮದ ಶ್ರೀಶೈಲ ಬಸವಂತಪ್ಪ ಬಿರಾದಾರ (15) ಮೃತ ಬಾಲಕ. ಇಂಗಳಗಿ-ಟಕ್ಕಳಕಿ ಗ್ರಾಮದ 8ನೇ ತರಗತಿ ಓದುತ್ತಿದ್ದ ವಿದ್ಯಾರ್ಥಿ ಶ್ರೀಶೈಲ ಖೋಖೋ, ಕಬಡ್ಡಿ ಕ್ರೀಡೆಗಳಲ್ಲಿ ಚುರುಕಾಗಿದ್ದ. ಅಲ್ಲದೇ ಹೋಬಳಿ ಮತ್ತು ತಾಲೂಕುಮಟ್ಟದ ಕಬಡ್ಡಿಯಲ್ಲಿ ಉತ್ತಮ ಆಟಗಾರನಾಗಿದ್ದ. ಬೇಸಿಗೆ ರಜೆ ಹಿನ್ನೆಲೆಯಲ್ಲಿ ಬಿಸಿಲಿನಲ್ಲಿ ಆಟವಾಡಿದ್ದರಿಂದ ಅನಾರೋಗ್ಯಕ್ಕೀಡಾಗಿದ್ದ ಅತನನ್ನು ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ.

ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ-2

ಬೆಂಗಳೂರು: ರಾಜ್ಯದಲ್ಲಿ 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-2 ಇಂದಿನಿಂದ ಆರಂಭವಾಗುತ್ತಿದ್ದು ಈ ಬಾರಿ ಒಟ್ಟು 1,72,151 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಇದರಲ್ಲಿ 92,554 ಹುಡುಗರು ಮತ್ತು 79,597 ಹುಡುಗಿಯರು ಸೇರಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಶೇ.13 ವಿದ್ಯಾರ್ಥಿಗಳು ಹೆಚ್ಚುವರಿ ಉತ್ತೀರ್ಣ ದಿಂದ ಶೇ.86.48 ರಷ್ಟು ಫಲಿತಾಂಶ ದಾಖಲಾಗಿದ್ದು, ಶೇ.13.52 ಅನುತ್ತೀರ್ಣದಿಂದಾಗಿ 85,502 ಜನ ಫೇಲ್ ಆಗಿದ್ದರು. ಆದರೆ ದ್ವಿತೀಯ ಪರೀಕ್ಷೆ 2 ಪರೀಕ್ಷೆಯಲ್ಲಿ 2026ರಲ್ಲಿ ಪೂರ್ಣಗೊಳಿಸದ ವಿದ್ಯಾರ್ಥಿಗಳು 82,746, ಖಾಸಗಿ ಅಭ್ಯರ್ಥಿಗಳು 794, ಪುನರಾವರ್ತಿತ ವಿದ್ಯಾರ್ಥಿಗಳು 39,099, ಉತ್ತೀರ್ಣರಾದ ವಿದ್ಯಾರ್ಥಿಗಳು ಅಂಕ ಸುಧಾರಣೆಗೆ 49,512 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ ಎಂದು ಅಂಕಿ ಅಂಶಗಳಿಂದ ತಿಳಿದು ಬಂದಿದೆ. ಏ.30 ರಿಂದ ಆರಂಭವಾಗುವ ದ್ವಿತೀಯ ಪಿಯುಸಿ ಪರೀಕ್ಷೆ-2 ಮೇ.13 ರಂದು ಪೂರ್ಣಗೊಳ್ಳಲಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ತಿಳಿಸಿದೆ.

ಪುಸ್ತಕ ಪ್ರಾಧಿಕಾರದಿಂದ 4 ಹೊಸ ಪ್ರಶಸ್ತಿ ಸ್ಥಾಪನೆ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರದಿಂದ ನಾಲ್ಕು ಹೊಸ ಪ್ರಶಸ್ತಿಗಳನ್ನು ನೀಡುವ ಉದ್ದೇಶ 'ದಿಂದ ನಂಜನಗೂಡು ತಿರುಮಲಾಂಬ ಪ್ರಶಸ್ತಿ, ಡಾ. ಹಾ.ಮಾ. ನಾಯಕ ಪ್ರಶಸ್ತಿ, ಪಿ.ಆರ್. ತಿಪ್ಪೇಸ್ವಾಮಿ ಪ್ರಶಸ್ತಿ ಹಾಗೂ ಗಳಗನಾಥ ಪ್ರಶಸ್ತಿ ಎಂದು ಹೆಸರಿಸಲಾಗಿದೆ. ರಾಜ್ಯದ ನಾಲ್ಕು ಕಂದಾಯ ವಿಭಾಗಗಳಿಗೆ ತಲಾ ಒಂದರಂತೆ ಈ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ಮಾನಸ ತಿಳಿಸಿದರು. ಕನ್ನಡ ಪುಸ್ತಕ ಪ್ರಾಧಿಕಾರ ಅತ್ಯಂತ ಮಹತ್ವಾಕಾಂಕ್ಷೆಯಿಂದ ಆರಂಭಿಸಿರುವ ಮನೆಗೊಂದು ಗ್ರಂಥಾಲಯ ಯೋಜನೆಯಡಿ ಗ್ರಂಥಾಲಯ ಅನುಷ್ಠಾನದ ಕಾರ್ಯಕ್ರಮದ ಮೂಲಕ ಗುರುತಿಸಿಕೊಂಡವರನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ನಾಲ್ಕು ಕಂದಾಯ ವಿಭಾಗಳಲ್ಲಿ ಒಂದೊಂದು ವಿಭಾಗದಲ್ಲಿಯೂ ಒಬ್ಬರಂತೆ ಅತ್ಯುತ್ತಮ ಗ್ರಂಥಾಲಯ ಹೊಂದಿರುವವರನ್ನು ಗುರುತಿಸಿ ಈ ನಾಲ್ಕು ಜನ ವಿದ್ವಾಂಸರುಗಳ ಹೆಸರಿನಲ್ಲಿ ಸ್ಥಾಪಿತವಾದ ಪ್ರಶಸ್ತಿಗಳನ್ನು ನೀಡಲಾಗುವುದು. ಈ ಪ್ರಶಸ್ತಿಯು ತಲಾ 25,000 ರು. ಗಳ ನಗದು ಬಹುಮಾನ, ಸ್ಮರಣಿಕೆ ಹಾಗೂ ಅಭಿನಂದನಾ ಪತ್ರ ಒಳಗೊಂಡಿದೆ. ಪ್ರತೀ ವರ್ಷ ಪ್ರಾಧಿಕಾರದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಈ ಸಂಬಂಧ ಈಗಾಗಲೇ ಅಧಿಕೃತ ಸರಕಾರಿ ಆದೇಶ ಕೂಡ ಹೊರಡಿಸಲಾಗಿದೆ ಎಂದರು.

ಎನ್‌ಎಸ್‌ಯುಐ ನೇತೃತ್ವದಲ್ಲಿ ಪ್ರತಿಭಟನೆ, ಗಲಾಟೆ | ಕುಲಪತಿಗಳ ಕಚೇರಿಗೆ ನುಗ್ಗಿ ಪೀಠೋಪಕರಣ ಜಖಂ | ಕಠಿಣ ಕ್ರಮ ಕೈಗೊಳ್ಳುವುದಾಗಿ ಹೇಳಿದ ವಿಸಿ

ಕುವೆಂಪು ವಿವಿಯಲ್ಲಿ ಹೈಡ್ರಾಮಾ

ಶಿವಮೊಗ್ಗ: ಪದವಿ ಪರೀಕ್ಷೆಯ ಫಲಿತಾಂಶ ಪ್ರಕಟಣೆ ಹಾಗೂ ಪ್ರಮಾಣಪತ್ರ ವಿತರಣೆಯಲ್ಲಿ ವಿಳಂಬವಾಗುತ್ತಿದೆ. ಡಿಜಿಟಲ್ ಮೌಲ್ಯಮಾಪನ ಅವೈಜ್ಞಾನಿಕವಾಗಿದ್ದು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅನುತ್ತೀರ್ಣರಾಗುತ್ತಿದ್ದಾರೆ ಎಂದು ಆರೋಪಿಸಿ ಎನ್‌ಎಸ್‌ಯುಐ ಸಂಘಟನೆ ನೇತೃತ್ವದಲ್ಲಿ ಬುಧವಾರ ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಪ್ರತಿಭಟನೆ ಹಿಂಸೆಗೆ ತಿರುಗಿದೆ.

ಪ್ರತಿಭಟನೆಯ ವೇಳೆ ಉದ್ರಿಕ್ತರು ಕುಲಪತಿ ಕಚೇರಿಗೆ ನುಗ್ಗಿ ಅಲ್ಲಿನ ಕುರ್ಚಿ, ಪೀಠೋಪಕರಣಗಳ ಜಖಂಗೊಳಿಸಿದ್ದಾರೆ. ಆವರಣದಲ್ಲಿದ್ದ ಅಲಂಕಾರಿಕ ಗಿಡಗಳ ಕುಂಡಗಳನ್ನು ಒಡೆದು ಹಾಕಿದ್ದಾರೆ. ಕುಲಪತಿ ಪ್ರೊ.ಶರತ್ ಅನಂತಮೂರ್ತಿ ವಿರುದ್ಧ ಧಿಕ್ಕಾರ ಕೂಗಿದ ಪ್ರತಿಭಟನಾಕಾರರು, ಕೂಡಲೇ ಕುಲಪತಿ ಹಾಗೂ ರಿಜಿಸ್ಟ್ರಾರ್ ಅವರನ್ನು ಸರಕಾರ ವಾಪಸ್ ಕರೆಸಿಕೊಳ್ಳಬೇಕು ಎಂದು ಆಗ್ರಹಿಸಿದರು. ಈ ವೇಳೆ ಕುಲಪತಿ ಕಚೇರಿಯ ಬೋರ್ಡ್‌ಗೆ ಕಪ್ಪು ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದರು.

ಐದು ತಿಂಗಳ ಹಿಂದೆ ನಡೆದ ಪದವಿ ತರಗತಿಯ 1, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶ ಇನ್ನೂ ಪ್ರಕಟವಾಗಿಲ್ಲ. ಕಳೆದ ಮೂರು ವರ್ಷಗಳಿಂದ ವಿದ್ಯಾರ್ಥಿಗಳಿಗೆ ಸರಿಯಾಗಿ ಅಂಕಪಟ್ಟಿ ವಿತರಿಸಿಲ್ಲ. ಪಾಸಿಂಗ್ ಸರ್ಟಿಫಿಕೇಟ್ ಹಾಗೂ ಪದವಿ ಪ್ರಮಾಣ ಪತ್ರಗಳು ಸಿಗದೇ ಉದ್ಯೋಗ ಮತ್ತು ಮುಂದಿನ ವ್ಯಾಸಂಗಕ್ಕೆ ತೊಂದರೆಯಾಗಿದೆ ಎಂದು ಆರೋಪಿಸಿದ ಪ್ರತಿಭಟನಾಕಾರರು, ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆಯನ್ನು ಕೈಬಿಡುವಂತೆ ಆಗ್ರಹಿಸಿದರು.

ಸುದ್ದಿ ತಿಳಿದು ಶಿವಮೊಗ್ಗ ಎಎಸ್‌ಪಿ ಕಾರ್ಯಪ್ಪ ಮತ್ತು ಭದ್ರಾವತಿ ಡಿವೈಎಸ್‌ಪಿ ಪ್ರಕಾಶ್ ರಾಥೋಡ್ ಸ್ಥಳಕ್ಕೆ ಬಂದು ಪ್ರತಿಭಟನಾಕಾರರ ಮನವೊಲಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು. ವಿಶ್ವವಿದ್ಯಾಲಯದ ಆವರಣದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ. ಕುಲಪತಿ ಕಚೇರಿ ಮೇಲೆ ದಾಳಿಯ ವಿಷಯ ತಿಳಿಯುತ್ತಿದ್ದಂತೆಯೇ ವಿಶ್ವವಿದ್ಯಾಲಯದ ಆಡಳಿತ ವಿಭಾಗದ ಹಂಗಾಮಿ ರಿಜಿಸ್ಟ್ರಾರ್ ಆಗಿರುವ ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಸಿಇಒ ಎನ್.ಹೇಮಂತ್, ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಿಂಡಿಕೇಟ್ ಸಭಾಂಗಣದಲ್ಲಿ ಕುಲಪತಿ ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದರು.

ಮೂಲಗಳ ಪ್ರಕಾರ, ಪ್ರತಿಭಟನಾಕಾರರ ವಿರುದ್ಧ ಭದ್ರಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಟನೆಯ ವೇಳೆ ಉದ್ರಿಕ್ತರು ಕುಲಪತಿ ಕಚೇರಿಯ ಬೋರ್ಡ್‌ಗೆ ಕಪ್ಪು ಮಸಿ ಬಳೆದರು.

- 40-50 ವಿದ್ಯಾರ್ಥಿಗಳು ವಿಸಿ ಕಚೇರಿ ಕಟ್ಟಡದೊಳಗೆ ನುಗ್ಗಿ ದಾಂದಲೆ
- ಕುಲಪತಿ ಪ್ರೊ.ಶರತ್ ಅನಂತಮೂರ್ತಿ ವಿರುದ್ಧ ಧಿಕ್ಕಾರ ಘೋಷಣೆ
- ವಿಶ್ವವಿದ್ಯಾಲಯದ ಆವರಣದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್

ಪ್ರತಿಭಟನಾಕಾರರು ದಾಳಿ ನಡೆಸಿ ಕುವೆಂಪು ಹೆಸರಿನ ವಿಶ್ವವಿದ್ಯಾಲಯಕ್ಕೆ ಅಪಮಾನ ಮಾಡಿದ್ದಾರೆ. ಇದರ ಹಿಂದೆ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಪಾತ್ರವಿರುವ ಶಂಕೆ ಇದೆ. ಸಾರ್ವಜನಿಕ ಆಸ್ತಿ ಧ್ವಂಸ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.

-ಪ್ರೊ.ಶರತ್ ಅನಂತಮೂರ್ತಿ ಕುವೆಂಪು ವಿವಿ ಕುಲಪತಿ

ಬಿಎಸ್‌ವೈ ಅಭಿಮಾನೋತ್ಸವಕ್ಕೆ 10 ಲಕ್ಷ ಜನ ಸೇರುವ ನಿರೀಕ್ಷೆ

ಯಡಿಯೂರಪ್ಪನವರ ಹೆಸರು ಕೇಳಿದರೆ ನಮ್ಮ ಕಾರ್ಯಕರ್ತರಲ್ಲಿ ರೋಮಾಂಚನ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ

ವಿಜಯನಗರ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕಳೆದ 5 ದಶಕಗಳಿಂದ ಬಡವರು, ರೈತರು, ಶೋಷಿತರ ಪರವಾಗಿ ಹೋರಾಟ ಮಾಡಿದವರು. ಇದು ಇಂದಿನ ಯುವಪೀಳಿಗೆ ಮತ್ತು ಎಲ್ಲ ರಾಜಕಾರಣಿಗಳಿಗೆ ಮಾದರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ, ಶಾಸಕ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬಿಎಸ್‌ವೈ ಅಭಿಮಾನೋತ್ಸವದ ಮೂಲಕ ಮತ್ತೊಮ್ಮೆ ಆ ಹೋರಾಟದ ಕಿಚ್ಚು ರಾಜ್ಯದಲ್ಲಿ ಬರಬೇಕಿದೆ. ಪ್ರಾಮಾಣಿಕವಾಗಿ ಎಲ್ಲ ಸಮುದಾಯಗಳ ಪರವಾಗಿ ಧ್ವನಿ ಎತ್ತುವ ಕೆಲಸ ಆಗಬೇಕಿದೆ. ಅವರು ಒಂದು ಸಮುದಾಯದ ನಾಯಕರಲ್ಲ. ನಾಡಿನ ಎಲ್ಲ ಸಮುದಾಯದವರು ಅವರನ್ನು ತಮ್ಮ ನಾಯಕರೆಂದು ಗುರುತಿಸಿದ್ದಾರೆ ಎಂದು ಹೇಳಿದರು.

ಯಡಿಯೂರಪ್ಪನವರು ಪರಿಶ್ರಮದಿಂದ ರಾಜ್ಯದಲ್ಲಿ ಸಂಘಟನೆ ಮಾಡಿದವರು. ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಅವರು ಎಲ್ಲರಿಗೂ ಪ್ರೇರಣಾಶಕ್ತಿ. ಯಡಿಯೂರಪ್ಪನವರ ಹೆಸರು ಕೇಳಿದರೆ ನಮ್ಮ ಕಾರ್ಯಕರ್ತರಲ್ಲಿ ರೋಮಾಂಚನ ಆಗುತ್ತದೆ. ಅವರು ಬಿಜೆಪಿಯ ಅಗ್ರಗಣ್ಯ ನಾಯಕರು ಎಂದು ತಿಳಿಸಿದರು.

ಪಕ್ಷದಲ್ಲಿ ಯಡಿಯೂರಪ್ಪನವರಿಗೆ ಅನ್ಯಾಯ ಆಗಿಲ್ಲ. ನಮ್ಮದು ರಾಷ್ಟ್ರೀಯ ಪಕ್ಷ. ಪಕ್ಷ ಯಾವತ್ತು ಬೇಕಾದರೂ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ನನ್ನನ್ನು ರಾಜ್ಯಾಧ್ಯಕ್ಷನಾಗಿ ಮಾಡಿದ್ದು, ರಾಜ್ಯಾದ್ಯಂತ ಪ್ರವಾಸ ಮಾಡಿ ಸಂಘಟನೆ ಕೆಲಸ ಮಾಡುತ್ತಿದ್ದೇನೆ. ಪಕ್ಷದ ತೀರ್ಮಾನಕ್ಕೆ ನಾವು ಬದ್ಧರಾಗಿ ಇರಬೇಕಾಗುತ್ತದೆ ಎಂದು ತಿಳಿಸಿದರು.

ಬಿಎಸ್‌ವೈ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಅವರು ವಿಜಯನಗರ, ಕೊಪ್ಪಳ, ಬಳ್ಳಾರಿ ಜಿಲ್ಲೆಗಳ ಪದಾಧಿಕಾರಿಗಳ ಸಭೆ ನಡೆಸಿದರು.

ಯಡಿಯೂರಪ್ಪನವರ ಶಕ್ತಿಯನ್ನು ಬಳಸಿಕೊಂಡು ಬಿಜೆಪಿ ಸಂಘಟನೆಯನ್ನು ಬಲಪಡಿಸಲಾಗುವುದು. ಸುಮಾರು 8ರಿಂದ 10 ಲಕ್ಷ ಜನರು ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಸೇರುವ ನಿರೀಕ್ಷೆ ಇದೆ.

- ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಬಿಎಸ್‌ವೈ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ವಿಜಯನಗರ, ಕೊಪ್ಪಳ, ಬಳ್ಳಾರಿ ಜಿಲ್ಲೆಗಳ ಪದಾಧಿಕಾರಿಗಳ ಸಭೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು. ಸಂಸದ ಗೋವಿಂದ ಕಾರಜೋಳ, ಶಾಸಕ ಜನಾರ್ದನ ರೆಡ್ಡಿ, ಆನಂದ ಸಿಂಗ್ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಖರ್ಗೆ ಸಿಎಂ ಆದರೆ ಎಲ್ಲರಿಗೂ ಸಂತೋಷ

ಕಲಬುರಗಿ: ಎಐಸಿಸಿ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯದ ಮುಖ್ಯಮಂತ್ರಿಯಾದರೆ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಎಲ್ಲರೂ ಸ್ವಾಗತಿಸುತ್ತಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಬದಲಾವಣೆ ವಿಷಯಕ್ಕೆ ಸಂಬಂಧಿಸಿದಂತೆ ಪಕ್ಷದೊಳಗಿನ ಆಂತರಿಕ ರಾಜಕೀಯ ಮತ್ತು ಗೊಂದಲಗಳ ಮಧ್ಯೆ ರಾಜ್ಯದ ಜನರಿಗೆ ನೀಡಿದ ಉತ್ತಮ ಆಡಳಿತದ ಭರವಸೆಯನ್ನು ಈಡೇರಿಸುವುದು ಮುಖ್ಯ. ಖರ್ಗೆ ಮುಖ್ಯಮಂತ್ರಿಯಾದರೆ ನಾವು ತುಂಬಾ ಸಂತೋಷಪಡುತ್ತೇವೆ, ಏಕೆಂದರೆ ಅವರು ಸಾಕಷ್ಟು ಅನುಭವ ಹೊಂದಿರುವ ಹಿರಿಯ ರಾಜಕಾರಣಿ. ಅವರು ಮುಖ್ಯಮಂತ್ರಿಯಾದರೆ, ನಾವೆಲ್ಲರೂ ಅದನ್ನು ಸ್ವಾಗತಿಸುತ್ತೇವೆ ಎಂದು ಹೇಳಿದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಅಥವಾ ಸಚಿವ ಸಂಪುಟ ಪುನಾರಚನೆ ಕುರಿತು ಕಾಂಗ್ರೆಸ್ ಹೈಕಮಾಂಡ್ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ. ರಾಜ್ಯದ ಎಲ್ಲ ಬೆಳವಣಿಗೆಗಳ ಬಗ್ಗೆ ಹೈಕಮಾಂಡ್‌ಗೆ ಮಾಹಿತಿ ಇದೆ. ಶೀಘ್ರದಲ್ಲೇ ತೀರ್ಮಾನ ಕೈಗೊಳ್ಳಲಾಗುತ್ತದೆ ಮತ್ತು ಅದನ್ನು ಎಲ್ಲರೂ ಪಾಲಿಸಬೇಕಾಗುತ್ತದೆ.

- ಡಾ.ಜಿ.ಪರಮೇಶ್ವರ ಗೃಹ ಸಚಿವ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೆಂಬಲಿಗರು ಪದೇ ಪದೇ ದೆಹಲಿಗೆ ಭೇಟಿ ನೀಡುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿ, ಅಭಿವೃದ್ಧಿ ಕೆಲಸಗಳು ಹಾಗೂ ಇಲಾಖೆಗಳಿಗಾಗಿ ಅನುದಾನ ಕೇಳಲು ಕೇಂದ್ರ ಸಚಿವರು ಮತ್ತು ಅಧಿಕಾರಿಗಳನ್ನು ಭೇಟಿ ಮಾಡಲು ಸಚಿವರು ದೆಹಲಿಗೆ ಹೋಗುವುದು ಸಹಜ. ಪಕ್ಷದ ಹೈಕಮಾಂಡ್‌ನ್ನು ನಮ್ಮ ನಾಯಕರು ದೇವಾಲಯದಂತೆ ಕಾಣುವ ಕಾರಣ, ದೆಹಲಿ ಭೇಟಿ ವೇಳೆ ಹೈಕಮಾಂಡ್‌ನ್ನೂ ಭೇಟಿ ಮಾಡುತ್ತಾರೆ. ಅದರಲ್ಲೇನೂ ವಿಶೇಷವಿಲ್ಲ ಎಂದು ತಿಳಿಸಿದರು.

ರಾಜ್ಯದಲ್ಲಿ ದಲಿತ ಮುಖ್ಯಮಂತ್ರಿ ಕೂಗು ಬಗ್ಗೆ ಮಾತನಾಡಿ, ಅದು ದಲಿತರು ಸೇರಿದಂತೆ ಜನರ ಬಯಕೆಯಾಗಿದ್ದು, ಈ ಕುರಿತು ಯಾವುದೇ ಲಾಬಿ ನಡೆಯುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ದಲಿತ ಸಚಿವರು ಪದೇ ಪದೇ ಡಿನ್ನರ್ ಮೀಟಿಂಗ್ ನಡೆಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಹೌದು, ನಾವು ಭೇಟಿ ಆಗುತ್ತೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಭಾಗವಹಿಸಿದ್ದಾರೆ. ಅದರಲ್ಲಿ ತಪ್ಪೇನಿದೆ? ಭೋಜನಕೂಟದ ವೇಳೆ ರಾಜಕೀಯ ಸೇರಿ ಹಲವು ವಿಷಯಗಳನ್ನು ಚರ್ಚಿಸುವುದು ಸಹಜ. ಅದರಲ್ಲಿ ಯಾವುದೇ ತಪ್ಪಿಲ್ಲ. ಸಮುದಾಯದ ಯಾವುದೇ ನಾಯಕನನ್ನು ಮುಖ್ಯಮಂತ್ರಿ ಮಾಡಿ ಎಂದು ನಾವು ಹೈಕಮಾಂಡ್‌ಗೆ ಕೇಳಿಲ್ಲ. ಅಂತಿಮ ತೀರ್ಮಾನ ಕಾಂಗ್ರೆಸ್ ಹೈಕಮಾಂಡ್‌ನದ್ದೇ ಎಂದು ತಿಳಿಸಿದರು.

ಮತ್ತೊಮ್ಮೆ ದೆಹಲಿ ದಂಡಯಾತ್ರೆಗೆ ಸಿದ್ಧ

ಪಂಚರಾಜ್ಯ ಚುನಾವಣೆ ಫಲಿತಾಂಶ ಬಳಿಕ ರಾಜ್ಯದಲ್ಲಿ ಮಹತ್ವದ ಬೆಳವಣಿಗೆ ಸಾಧ್ಯತೆ

ಬೆಂಗಳೂರು: ಪಂಚರಾಜ್ಯ ಚುನಾವಣೆ ಫಲಿತಾಂಶ ಬಳಿಕ ರಾಜ್ಯ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆಯಾಗುವ ಸಾಧ್ಯತೆಯಿದೆ. ಸಚಿವ ಸಂಪುಟ ಪುನಾರಚನೆಗಾಗಿ ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿಯಾಗಿದ್ದ ಶಾಸಕರು ಮತ್ತೆ ದೆಹಲಿಗೆ ಹೋಗಲು ಸಿದ್ಧತೆ ನಡೆಸುತ್ತಿದ್ದಾರೆ. ಈ ಮೂಲಕ ಶತಾಯಗತಾಯ ಸಚಿವ ಸ್ಥಾನ ದಕ್ಕಿಸಿಕೊಳ್ಳಲು ಮುಂದಾಗಿದ್ದಾರೆ.



ದೆಹಲಿಯಲ್ಲೇ ಬೀಡುಬಿಟ್ಟ ಸಿಎಂ ಆಪ್ತ ಬಣ: ಸಚಿವ ಸಂಪುಟ ಪುನಾರಚನೆ, ಪಂಚ ರಾಜ್ಯಗಳ ಫಲಿತಾಂಶದ ಬಳಿಕ ನಾಯಕತ್ವ ಬದಲಾವಣೆ ಚರ್ಚೆ ಮಧ್ಯೆ ಒಂದಷ್ಟು ಸಿಎಂ ಆಪ್ತ ಬಣದ ನಾಯಕರು ಮತ್ತು ಸಚಿವರ ದಂಡು ದೆಹಲಿಗೆ ತೆರಳಿ ಹೈಕಮಾಂಡ್ ಭೇಟಿಯಾಗಿರುವುದು ಕುತೂಹಲ ಕೆರಳಿಸಿದೆ. ಇದು ರಾಜ್ಯ ರಾಜಕೀಯದಲ್ಲಿ ನಾಯಕತ್ವ ಬದಲಾವಣೆಯ ಚರ್ಚೆಗೆ ಮತ್ತಷ್ಟು ಇಂಬು ನೀಡಿದೆ. ಪಂಚ ರಾಜ್ಯಗಳ ಚುನಾವಣೆ, ರಾಜ್ಯದಲ್ಲಿ ಉಪಸಮರದ ಹಿನ್ನೆಲೆಯಲ್ಲಿ ಕೆಲ ದಿನಗಳ ಕಾಲ ಮೌನವಾಗಿದ್ದ ನಾಯಕತ್ವ ಬದಲಾವಣೆಯ ಚರ್ಚೆ ಈಗ ಮತ್ತೆ ಮುನ್ನೆಲೆಗೆ ಬಂದಿದೆ. ಪಂಚ ರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ಅಂದರೆ ಮೇ ಮೊದಲ ವಾರದ ಬಳಿಕ ರಾಜ್ಯದ ಪವರ್ ಫೈಟ್‌ಗೆ ಹೊಸ ಸಂಚಲನೆ ಸಿಗಲಿದೆ ಎಂಬ ಮುನ್ಸೂಚನೆ ಸಿಗುತ್ತಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯ ಸಚೇತಕ ಅಶೋಕ್ ಪಟ್ಟಣ್, ಸಚಿವ ಸಂಪುಟ ಪುನಾರಚನೆ ಆಗಬೇಕಿದೆ. ಪ್ರಮಾಣ ವಚನ ಸ್ವೀಕಾರ ಮಾಡುವವರೆಗೂ ಹೋರಾಟ ಮಾಡುತ್ತೇವೆ. ಈ ಹಿಂದೆ ದೆಹಲಿಗೆ ಹೋದಾಗ ಹೈಕಮಾಂಡ್ ನಾಯಕರನ್ನು ಭೇಟಿಯಾಗಿದ್ದೆವು. ಮೇ 4ಕ್ಕೆ ಚುನಾವಣೆ ಫಲಿತಾಂಶ ಬಂದ ನಂತರ ಪರಿಶೀಲಿಸುವುದಾಗಿ ಭರವಸೆ ಸಿಕ್ಕಿದೆ. ನಾವು ಮತ್ತೆ ದೆಹಲಿಗೆ ಹೋಗುತ್ತೇವೆ. ಮೇ 5 ಅಥವಾ 6ರಂದು 40 ಶಾಸಕರು ದೆಹಲಿಗೆ ಹೋಗುವ ಚಿಂತನೆ ಇದೆ. ಈ ಬಗ್ಗೆ ಸಭೆ ಮಾಡಿ ದಿನಾಂಕ ತೀರ್ಮಾನ ಮಾಡುತ್ತೇವೆ ಎಂದು ತಿಳಿಸಿದರು.

4 ರಿಂದ 5 ಹಿರಿಯ ಸಚಿವರು ಮಾತ್ರ ಸಚಿವ ಸಂಪುಟದಲ್ಲಿ ಮುಂದುವರಿಯಲಿದ್ದಾರೆ. ಉಳಿದ ಸಚಿವ ಸ್ಥಾನಗಳನ್ನು ಹೊಸಬರಿಗೆ ಕೊಡುವುದಾಗಿ ಹೈಕಮಾಂಡ್ ನಾಯಕರು ಭರವಸೆ ನೀಡಿದ್ದಾರೆ. ಅದರಂತೆ, 30 ಹೊಸಬರನ್ನು ಸಚಿವರನ್ನಾಗಿ ಮಾಡಬೇಕು. ಕನಿಷ್ಠ 25 ಶಾಸಕರಿಗೆ ಸಚಿವ ಸ್ಥಾನ ಕೊಡಲೇಬೇಕು. ಮೇ 30ರೊಳಗೆ ಈ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡಲಿದೆ ಎಂಬ ವಿಶ್ವಾಸವಿದೆ.

- ಅಶೋಕ್ ಪಟ್ಟಣ್ ಮುಖ್ಯ ಸಚೇತಕ

ವಿದ್ಯಾರ್ಥಿ ಆತ್ಮಹತ್ಯೆ: ನ್ಯಾಯ ಸಿಗುವವರೆಗೂ ಹೋರಾಟ

ಧಾರವಾಡ: ಇಲ್ಲಿನ ಕಿಟೆಲ್ ಕಾಲೇಜು ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ ಆತ್ಮಹತ್ಯೆ ಪ್ರಕರಣದಲ್ಲಿ ಕುಟುಂಬಕ್ಕೆ ನ್ಯಾಯ ಸಿಗುವವರೆಗೂ ಹೋರಾಟ ನಡೆಸುವುದಾಗಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಎಚ್ಚರಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಬೇಲೂರು ಗ್ರಾಮದಿಂದ ಧಾರವಾಡಕ್ಕೆ ಓದಲು ಬಂದಿದ್ದ ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ ಆತ್ಮಹತ್ಯೆ ಅತ್ಯಂತ ನೋವಿನ ಸಂಗತಿ. ಅಮಾಯಕ ವಿದ್ಯಾರ್ಥಿಯನ್ನು ಈ ಪ್ರಕರಣದಲ್ಲಿ ಸಿಲುಕಿಸುವ ಪ್ರಯತ್ನ ನಡೆದಿದೆ ಎಂದು ಆರೋಪಿಸಿದ್ದಾರೆ.

ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣದ ಬಗ್ಗೆ ಶೀಘ್ರವೇ ನ್ಯಾಯಯುತ ತನಿಖೆ ನಡೆಸುವಂತೆ ಹಾಗೂ ಪ್ರಕರಣದಲ್ಲಿ ಭಾಗಿಯಾದ ತಪ್ಪಿತಸ್ಥ ಪೊಲೀಸ್ ಇನ್ಸಪೆಕ್ಟರ್ ಮತ್ತು ಸಿಬ್ಬಂದಿಯನ್ನು ಕೂಡಲೇ ಅಮಾನತುಗೊಳಿಸಿ, ಕಠಿಣ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರವಾಣಿ ಕರೆ ಮಾಡಿ ಸೂಚನೆ ನೀಡಿದ್ದಾರೆ.

ಏನಿದು ಪ್ರಕರಣ?: ಏಪ್ರಿಲ್ 25ರಂದು ಮಾದಕ ವಸ್ತು ವಿರೋಧಿ ಅಭಿಯಾನದ ಸಮಯದಲ್ಲಿ ವಿದ್ಯಾಗಿರಿ ಪೊಲೀಸರು 18 ವಿದ್ಯಾರ್ಥಿಗಳನ್ನು ಬಂಧಿಸಿ, ಗಾಂಜಾ ಸೇವನೆ ಪರೀಕ್ಷೆ ನಡೆಸಿದ್ದರು. ಅದರಲ್ಲಿ 10 ವಿದ್ಯಾರ್ಥಿಗಳ ಫಲಿತಾಂಶ ನಕಾರಾತ್ಮಕವಾಗಿ ಬಂದಿತ್ತು. ಅವರನ್ನು ಪೊಲೀಸರು ಬಿಟ್ಟು ಮನೆಗೆ ಕಳುಹಿಸಿದ್ದರು. ಅವರಲ್ಲೊಬ್ಬನಾದ ಆದಿತ್ಯ ಮ್ಯಾಗೇರಿಗೆ ಪೊಲೀಸರು 2000 ರು. ಕೊಡುವಂತೆ ಕಿರುಕುಳ ನೀಡಿದ್ದರು. ಪೊಲೀಸರ ಕಿರುಕುಳಕ್ಕೆ ಬೇಸತ್ತ ವಿದ್ಯಾರ್ಥಿ ನೇಣಿಗೆ ಶರಣಾಗಿದ್ದನು. ಸಂತ್ರಸ್ತನ ಕುಟುಂಬ ಅವನ ಸಾವಿಗೆ ಪೊಲೀಸರೇ ಕಾರಣ ಎಂದು ದೂರು ನೀಡಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಪೊಲೀಸರನ್ನು ಅಮಾನತುಗೊಳಿಸಲಾಗಿದೆ.

ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ತೀವ್ರ ಹದಗೆಟ್ಟಿದ್ದು, ರಾಜ್ಯ ಸರಕಾರ ಇಡೀ ಪ್ರಕರಣದ ನೈತಿಕ ಹೊಣೆ ಹೊರಬೇಕು ಮತ್ತು ಮೃತ ವಿದ್ಯಾರ್ಥಿಯ ಕುಟುಂಬಕ್ಕೆ ಪರಿಹಾರ ನೀಡಬೇಕು.

- ಪ್ರಲ್ಹಾದ ಜೋಶಿ ಕೇಂದ್ರ ಸಚಿವ

ಸಿಎಂ ಬದಲಾವಣೆ ಬಗ್ಗೆ ಮಾತನಾಡಲ್ಲ

ರಾಯಚೂರು: ನವೆಂಬರ್ ತಿಂಗಳಿನಿಂದಲೂ ಸಿಎಂ ಬದಲಾವಣೆ ಹಾಗೂ ಸಂಪುಟ ವಿಸ್ತರಣೆ ಆಗಲಿದೆ ಎಂದು ಹೇಳಲಾಗುತ್ತಿದೆ. ಆದರೆ ಏನೂ ಆಗಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಪ್ರತಿ ಬಾರಿ ಸಿಎಂ ಬದಲಾವಣೆ ಹಾಗೂ ಸಂಪುಟ ವಿಸ್ತರಣೆ ಕುರಿತು ನಾನು ಏನು ಹೇಳಬೇಕು? ಈಗಾಗಲೇ ಎಲ್ಲ ಹೇಳಿ ಮುಗಿಸಿರುವೆ. ಇನ್ಮುಂದೆ ಈ ವಿಷಯವಾಗಿ ಏನೂ ಮಾತನಾಡುವುದಿಲ್ಲ. ಏನೇ ಇದ್ದರೂ ಕಾಂಗ್ರೆಸ್ ಹೈಕಮಾಂಡ್ ಹಾಗೂ ಸಿಎಂ ಅವರನ್ನು ಕೇಳಬೇಕು ಎಂದರು. ರಾಜ್ಯದಲ್ಲಿ ನಮ್ಮ ತಂದೆಯವರನ್ನು ಹೈಕಮಾಂಡ್ ಸಿಎಂ ಸ್ಥಾನದಿಂದ ಇಳಿಸಿದರೆ, ದಲಿತ ಸಿಎಂ ಆಗುವ ಪ್ರಶ್ನೆ ಬರುತ್ತದೆ. ಆಗ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿಎಂ ಮಾಡಿದರೆ ಸ್ವಾಗತ ಮಾಡುತ್ತೇವೆ. ಹಿರಿಯ ಶಾಸಕರು ಸಚಿವ ಸ್ಥಾನ ಕೇಳುವುದು ಸಹಜ. ಎರಡು ವರ್ಷ ಆದ ಮೇಲೆ ಸಂಪುಟ ಪುನರ್ ರಚನೆಯಲ್ಲಿ ನಮಗೂ ಸ್ಥಾನ ಸಿಗುತ್ತದೆಂದು ಕೇಳುತ್ತಾರೆ. ಆ ವಿಚಾರವಾಗಿ ದೆಹಲಿಗೆ ಹೋದರೆ ತಪ್ಪಿಲ್ಲ ಎಂದರು.

ಬೆಳಗಾವಿಗೆ ಇನ್ನೂ 3 ಸಚಿವ ಸ್ಥಾನ ನೀಡುವಂತೆ ಆಗ್ರಹ | ಮೊದಲ ಬಾರಿಗೆ ಶಾಸಕರಾದವರಲ್ಲಿ ಗರಿಗೆದರಿದ ಚಟುವಟಿಕೆ

ಸಚಿವ ಸ್ಥಾನದ ಮೇಲೆ 9 ಶಾಸಕರ ಕಣ್ಣು

ವಿನಾಯಕ ಮಠಪತಿ ಬೆಳಗಾವಿ

ರಾಜ್ಯ ಕಾಂಗ್ರೆಸ್‌ನಲ್ಲಿ ಸದ್ಯ ಮುಖ್ಯಮಂತ್ರಿ ಬದಲಾವಣೆ ಚರ್ಚೆ ಒಂದುಕಡೆಯಾದರೆ ಮತ್ತೊಂದೆಡೆ ಸಂಪುಟ ಪುನರ್‌ರಚನೆ ಮಾತುಗಳು ಕೇಳಿಬರುತ್ತಿವೆ. ಈ ಮಧ್ಯೆ ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿರುವ ಬೆಳಗಾವಿ ಜಿಲ್ಲೆಯ 9 ಶಾಸಕರು ಅಧಿಕಾರದ ಕನಸು ಕಾಣುತ್ತಿದ್ದಾರೆ. ಇದಕ್ಕೆ ಪೂರಕವೆಂಬಂತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆಡಿರುವ ಆ ಒಂದು ಮಾತು ಜಿಲ್ಲೆಯ ರಾಜಕೀಯ ವಲಯದಲ್ಲಿ ಚರ್ಚೆ ಹುಟ್ಟುಹಾಕಿದೆ.

ಬೆಳಗಾವಿ ಜಿಲ್ಲೆಗೆ ಹೆಚ್ಚುವರಿ ಸಚಿವ ಸ್ಥಾನ ನೀಡಬೇಕು ಎಂಬ ವಿಚಾರವಾಗಿ ಪ್ರತಿಕ್ರಿಯೆ ನೀಡಿರುವ ಸಚಿವೆ ಹೆಬ್ಬಾಳ್ಕರ್, ಬೆಳಗಾವಿ ಜಿಲ್ಲೆಗೆ ಇನ್ನೂ ಮೂರು ಸಚಿವ ಸ್ಥಾನ ಹಾಗೂ ನಿಗಮಮಂಡಳಿ ಸೇರಿದಂತೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನಕ್ಕೆ ಆಗ್ರಹ ಇದೆ ಎಂದಿದ್ದಾರೆ.

ಸದ್ಯ ಸಚಿವರ ಈ ಹೇಳಿಕೆ ಜಿಲ್ಲೆಯಲ್ಲಿ ಸಾಕಷ್ಟು ಚರ್ಚೆ ಹುಟ್ಟುಹಾಕಿದೆ. ಹಾಗಾದರೆ ಈ ಬಾರಿ ಸಂಪುಟ ಪುನರ್ ರಚನೆಯಾದರೆ ಜಿಲ್ಲೆಯಲ್ಲಿ ಯಾರಿಗೆ ಸ್ಥಾನ ಸಿಗುತ್ತದೆ ಎಂಬ ಕುತೂಹಲ ಹಲವರಲ್ಲಿ ಮೂಡಿದೆ.

ಮೂರು ಬಾರಿ ಶಾಸಕರಾದ ಬೈಲಹೊಂಗಲ ಕ್ಷೇತ್ರದ ಶಾಸಕ ಮಹಾಂತೇಶ್ ಕೌಜಲಗಿ, ರಾಮದುರ್ಗ ಶಾಸಕ ಅಶೋಕ್ ಪಟ್ಟಣ ಶತಾಯಗತಾಯ ಮಂತ್ರಿ ಸ್ಥಾನ ಪಡೆಯಬೇಕು ಎಂಬ ಜಿದ್ದಿಗೆ ಬಿದ್ದಾರೆ. ಇನ್ನು ಕಾಗವಾಡ ಶಾಸಕ ರಾಜು ಕಾಗೆ ಹಾಗೂ ಮಾಜಿ ಸಚಿವ ಪ್ರಕಾಶ್ ಹುಕ್ಕೇರಿ ಪುತ್ರ, ಗಣೇಶ್ ಹುಕ್ಕೇರಿ ಅವರೂ ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಗಳಾಗಿದ್ದು, ಹೈಕಮಾಂಡ್ ಯಾರಿಗೆ ಅವಕಾಶ ನೀಡುತ್ತದೆ ಎಂಬುದಕ್ಕೆ ಕಾಲವೇ ಉತ್ತರಿಸಲಿದೆ.

ಬಿಜೆಪಿ ಸರಕಾರದಲ್ಲಿ ಬೆಳಗಾವಿಗೆ ಲಭಿಸಿತ್ತು ಭರ್ಜರಿ ಅವಕಾಶ: ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರ ಆಡಳಿತಾವಧಿಯಲ್ಲಿ ಬೆಳಗಾವಿ ಜಿಲ್ಲೆಗೆ ಭರ್ಜರಿ ಅವಕಾಶ ನೀಡಲಾಗಿತ್ತು. ಐದು ಜನರಿಗೆ ಸಚಿವ ಸ್ಥಾನ ನೀಡಿದ್ದರೆ 15ಕ್ಕೂ ಅಧಿಕ ನಿಗಮ ಮಂಡಳಿ ಸೇರಿ ವಿವಿಧ ಸಾಂವಿಧಾನಿಕ ಹುದ್ದೆಗಳಲ್ಲಿ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ನೀಡಲಾಗಿತ್ತು. ಇದೇ ರೀತಿಯಲ್ಲಿ ರಾಜಕೀಯವಾಗಿ ದೊಡ್ಡ ಜಿಲ್ಲೆಯಾದ ಬೆಳಗಾವಿಗೆ ಕಾಂಗ್ರೆಸ್ ಸರಕಾರದ ಅವಧಿಯಲ್ಲಿಯೂ ಹೆಚ್ಚಿನ ಪ್ರಾಶಸ್ತ್ಯ ನೀಡುವಂತೆ ಜಿಲ್ಲೆಯ ನಾಯಕರು ಆಗ್ರಹಿಸುತ್ತಿದ್ದಾರೆ.

ಸವದಿಗೆ ಕೈನಿಂದ ನಿರಾಸೆ

2023 ರ ಸಾರ್ವತ್ರಿಕ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಹೈಕಮಾಂಡ್ ಟಿಕೆಟ್ ನಿರಾಕರಣೆ ಮಾಡಿದ್ದಕ್ಕೆ ಮುನಿಸಿಕೊಂಡು ಕಾಂಗ್ರೆಸ್ ಸೇರಿದ್ದ ಲಕ್ಷ್ಮಣ ಸವದಿ ದಾಖಲೆ ಮತಗಳ ಅಂತರದ ಗೆಲುವಿನ ಜತೆ ಉತ್ತರ ಕರ್ನಾಟಕ ಭಾಗದ ಕೆಲ ಕ್ಷೇತ್ರಗಳಲ್ಲಿ ಪ್ರಭಾವ ಬೀರಿದ್ದರು. ಸಿದ್ದರಾಮಯ್ಯ ಸರಕಾರದಲ್ಲಿ ಮಂತ್ರಿ ಸ್ಥಾನ ನಿಶ್ಚಿತ ಎಂದು ಹೇಳುತ್ತಿದ್ದಾಗಲೇ ಸವದಿಗೆ ನಿರಾಸೆಯಾಗಿತ್ತು. ಸದ್ಯ ಸಂಪುಟ ಪುನರ್ ರಚನೆ ಸಂದರ್ಭದಲ್ಲಿ ಸಚಿವ ಸ್ಥಾನ ನಿಶ್ಚಿತ ಎಂದು ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿದ್ದರೂ ಇದಕ್ಕೆ ಸಚಿವ ಸತೀಶ್ ಜಾರಕಿಹೊಳಿ ಹೇಗೆ ಸ್ಪಂದಿಸುತ್ತಾರೆ ಎಂಬುದು ಅಷ್ಟೇ ಮುಖ್ಯ.

ಹೊಸಬರಲ್ಲಿ ಮೂಡಿದ ಭರವಸೆ

ಮೊದಲ ಬಾರಿಗೆ ಆಯ್ಕೆಯಾದ ಶಾಸಕರಿಗೆ ಸಚಿವ ಸ್ಥಾನದ ಅವಕಾಶ ನೀಡುವಂತೆ ಸುಮಾರು 31ಕ್ಕೂ ಅಧಿಕ ಕಾಂಗ್ರೆಸ್ ಶಾಸಕರು ಹೈಕಮಾಂಡ್ ನಾಯಕರಿಗೆ ಪತ್ರ ಬರೆದ ಬೆನ್ನಲ್ಲೇ ಬೆಳಗಾವಿ ಜಿಲ್ಲೆಯಲ್ಲಿ ಮೊದಲ ಬಾರಿಗೆ ಆಯ್ಕೆಯಾದ ಶಾಸಕರ ಮೊಗದಲ್ಲಿ ಭರವಸೆಯ ನಗೆ ಮೂಡಿದೆ. ಸವದತ್ತಿ ಶಾಸಕ ವಿಶ್ವಾಸ್ ವೈದ್ಯ, ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ, ಬೆಳಗಾವಿ ಗ್ರಾಮೀಣ ಶಾಸಕ ಆಸೀಫ್ ಸೇಠ್, ಚೆನ್ನಮ್ಮನ ಕಿತ್ತೂರು ಕ್ಷೇತ್ರದ ಶಾಸಕ ಬಾಬಾಸಾಹೇಬ್ ಪಾಟೀಲ್ ಸಚಿವ ಸ್ಥಾನದ ನಿರೀಕ್ಷೆಯಲ್ಲಿದ್ದಾರೆ.

ಮೂರು ಜಿಲ್ಲೆಗೆ ಸಮಾನವಾಗಿ ಬೆಳಗಾವಿ ದೊಡ್ಡ ಜಿಲ್ಲೆಯಾಗಿದ್ದು, ಇನ್ನೂ ಕೆಲ ಶಾಸಕರಿಗೆ ಸಚಿವ ಸ್ಥಾನ ನೀಡುವಂತೆ ನಮ್ಮ ಆಗ್ರಹವಾಗಿದೆ. ಈ ಹಿಂದೆ ಬಿಜೆಪಿ ಸರಕಾರದ ಆಡಳಿತಾವಧಿ ಸಂದರ್ಭದಲ್ಲಿ ಜಿಲ್ಲೆಗೆ ಐದು ಸಚಿವ ಸ್ಥಾನ ನೀಡಲಾಗಿತ್ತು. ಬರುವ ದಿನಗಳಲ್ಲಿ ಪಕ್ಷ ಈ ಕುರಿತು ನಿರ್ಧಾರ ಕೈಗೊಂಡರೆ ಪಕ್ಷ ಸಂಘಟನೆಗೆ ಒಳ್ಳೆಯದಾಗುತ್ತದೆ.

- ಲಕ್ಷ್ಮೀ ಹೆಬ್ಬಾಳ್ಕರ್ ಸಚಿವೆ

ಗುಡ್ ನ್ಯೂಸ್ ಬಗ್ಗೆ ನನಗೆ ಗೊತ್ತಿಲ್ಲ: ಡಿ.ಕೆ. ಸುರೇಶ್

ಬೆಂಗಳೂರು: ಗುಡ್ ನ್ಯೂಸ್ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿಸಲವೂ ಗುಡ್ ನ್ಯೂಸ್ ಇದ್ದೇ ಇರುತ್ತದೆ. ಕೆಲವೊಂದು ಸಲ ಪಕ್ಷದ ಕೆಲಸ, ಇನ್ನೊಮ್ಮೆ ವೈಯಕ್ತಿಕ ಕೆಲಸಕ್ಕೆ ದೆಹಲಿಗೆ ಹೋಗುತ್ತಿರುತ್ತೇವೆ. ಆಗಾಗ್ಗೆ ಸರಕಾರದ ಕೆಲಸಗಳಿಗೂ ಹೋಗಿರುತ್ತೇವೆ. ಇದರಲ್ಲಿ ವಿಶೇಷತೆ ಏನೂ ಇಲ್ಲ ಎಂದು ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.



ನಾನು ಹಾಗೂ ಶಿವಕುಮಾರ್ ಅವರು ಆಗಾಗ್ಗೆ ದೆಹಲಿಗೆ ಹೋಗುತ್ತಲೇ ಇರುತ್ತೇವೆ.

ಶಿವಕುಮಾರ್ ಅವರ ಹುಟ್ಟುಹಬ್ಬಕ್ಕೆ ಏನಾದರೂ ಗುಡ್ ನ್ಯೂಸ್ ಇದೆಯೇ ಎನ್ನುವ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಪರಿಸರ ಮಾಲಿನ್ಯ ಉಂಟಾಗುತ್ತದೆ ಎಂದು ಡಿ.ಕೆ. ಶಿವಕುಮಾರ್ ಅವರು ಹುಟ್ಟುಹಬ್ಬಕ್ಕೆ ಯಾವುದೇ ಫ್ಲೆಕ್ಸ್, ಬ್ಯಾನರ್ ಹಾಕಬೇಡಿ ಎಂದಿದ್ದಾರೆ. ಎಲ್ಲರೂ ದಯವಿಟ್ಟು ಇದನ್ನು ಪಾಲನೆ ಮಾಡುವುದು ಒಳಿತು ಎಂದರು.

ಅಧಿಕಾರ ಹಂಚಿಕೆ ಬಗ್ಗೆ ಚರ್ಚೆಯಾಗಿದೆಯೇ ಇಲ್ಲವೇ ಎನ್ನುವ ಚರ್ಚೆ ಮಾಡುವ ಸಮಯ ಇದಲ್ಲ. ಇದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಹೈಕಮಾಂಡ್ ಏನು ಹೇಳುತ್ತದೆಯೋ ಅದನ್ನು ಪಾಲನೆ ಮಾಡುತ್ತೇವೆ ಎಂದು ಹೇಳಿದ್ದೇವೆ ಎಂದರು.

ಶಾಸಕರ ಒತ್ತಡ ಹೆಚ್ಚಾಗಿರುವ ಬಗ್ಗೆ ಕೇಳಿದಾಗ, ಮಂತ್ರಿಗಳಾಗಬೇಕು ಎಂಬ ಒತ್ತಡ ಇದೆ ಎಂದರು. ಈ ಬಾರಿಯ ದೆಹಲಿ ಭೇಟಿ ಬಗ್ಗೆ ಕೇಳಿದಾಗ, ನಾನು ಹಾಗೂ ಶಿವಕುಮಾರ್ ಅವರು ಆಗಾಗ್ಗೆ ದೆಹಲಿಗೆ ಹೋಗುತ್ತಲೇ ಇರುತ್ತೇವೆ. ಅಪರೂಪಕ್ಕೆ ಹೋಗುವುದಾದರೆ ನೀವು ಕೇಳಬೇಕಿತ್ತು. ತಿಂಗಳಿಗೆ ಎರಡು ಸಲವಾದರೂ ಹೋಗುತ್ತೇವೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಭ್ರೂಣ ಹತ್ಯೆ ದಂಧೆಗೆ ಕಡಿವಾಣವಿಲ್ಲವೇ?

'ಗಂಡೈಕ್ಳಿಗೆ ಹೆಣ್ ಸಿಗ್ತಿಲ್ಲ' ಎಂದು ಆಗಾಗ ಅಳಲು ತೋಡಿಕೊಳ್ಳುವ ಮಂಡ್ಯ ಜಿಲ್ಲೆಯಲ್ಲಿ ಭ್ರೂಣ ಹತ್ಯೆ ಮತ್ತೆ ಸದ್ದು ಮಾಡಿದೆ. ಈ ಹಿಂದೆಯೂ ಜಿಲ್ಲೆಯಲ್ಲಿ ಭ್ರೂಣ ಹತ್ಯೆ ಪ್ರಕರಣಗಳು ಪತ್ತೆಯಾಗಿದ್ದವು. ಈ ಸಂಬಂಧ ವೈದ್ಯರೂ ಸೇರಿದಂತೆ ಹಲವರನ್ನು ಬಂಧಿಸಲಾಗಿತ್ತು. ಬಳಿಕ ಕರ್ನಾಟಕ ಸರಕಾರ ಭ್ರೂಣ ಹತ್ಯೆ ತಡೆಗೆ ವಿಶೇಷ ಕಾರ್ಯಕ್ರಮಗಳನ್ನು ಘೋಷಿಸಿತ್ತು. ಭ್ರೂಣ ಹತ್ಯೆಯ ಮಾಹಿತಿ ನೀಡುವವರಿಗೆ ವಿಶೇಷ ಬಹುಮಾನ ಘೋಷಿಸಿತ್ತು. ಇಷ್ಟಾದರೂ ಜಿಲ್ಲೆಯಲ್ಲಿ ಭ್ರೂಣ ಪತ್ತೆ ಮತ್ತು ಹತ್ಯೆ ಪ್ರಕರಣಗಳು ಎಗ್ಗಿಲ್ಲದೆ ನಡೆಯುತ್ತಿರುವುದು ದುರದೃಷ್ಟಕರ. ಇದೀಗ ಮಂಡ್ಯದ ಕೆ.ಆರ್ ಪೇಟೆ ತಾಲ್ಲೂಕಿನಲ್ಲಿ ಅಪ್ರಾಪ್ತರ ವಯಸ್ಕರ ಭ್ರೂಣ ಪತ್ತೆ ಮತ್ತು ಹತ್ಯೆ ಸಂಬಂಧ ಮೂವರು ವೈದ್ಯರನ್ನು ಬಂಧಿಸಲಾಗಿದೆ. ಜೀವ ಉಳಿಸಬೇಕಾದ ವೈದ್ಯರೇ ಹಣದ ಆಸೆಗಾಗಿ ಜೀವ ತೆಗೆಯುವ ಕೆಲಸಕ್ಕೆ ಕೈ ಹಾಕಿರುವುದು ವೃತ್ತಿಧರ್ಮಕ್ಕೆ ಎಸಗಿದ ದ್ರೋಹವಾಗಿದೆ. ಭ್ರೂಣ ಹತ್ಯೆ ಕೇವಲ ಕಾನೂನಿನ ಸಮಸ್ಯೆಯಲ್ಲ, ಇದೊಂದು ಗಂಭೀರ ಸಾಮಾಜಿಕ ಪಿಡುಗು. ಹೆಣ್ಣು ಮಗುವನ್ನು ಹೊರೆ ಎಂದು ಭಾವಿಸುವ ಮನಸ್ಥಿತಿ ಇಂದಿಗೂ ಸಮಾಜದಲ್ಲಿ ಜೀವಂತವಾಗಿರುವುದು ವಿಷಾದನೀಯ. ಸರಕಾರಿ ಕಾರ್ಯಕ್ರಮಗಳು ಕೇವಲ ಘೋಷಣೆಗಳಿಗೆ ಸೀಮಿತವಾಗದೆ, ಕೆಳಹಂತದಲ್ಲಿ ಪರಿಣಾಮಕಾರಿಯಾಗಿ ಜಾರಿಯಾಗಬೇಕಿದೆ. ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲೆ ನಿರಂತರ ನಿಗಾ ಇಡುವುದು ಮತ್ತು ಕಾನೂನು ಉಲ್ಲಂಘಿಸುವವರ ವಿರುದ್ಧ ರಾಜಿ ಇಲ್ಲದ ಕ್ರಮ ಕೈಗೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಪ್ರಕಾರ, ಪ್ರತಿ ವರ್ಷ ಭಾರತದಲ್ಲಿ ನೂರಾರು ಭ್ರೂಣ ಹತ್ಯೆ ಪ್ರಕರಣಗಳು ದಾಖಲಾಗುತ್ತಿವೆ. ಆದರೆ, ಇವುಗಳಲ್ಲಿ ಶಿಕ್ಷೆಯ ಪ್ರಮಾಣ ಬಹಳ ಕಡಿಮೆ ಇರುವುದು ವ್ಯವಸ್ಥೆಯ ಮಿತಿಯಾಗಿದೆ. ಮಹಿಳಾ ಸಬಲೀಕರಣದ ಬಗ್ಗೆ ನಾವು ಭಾಷಣ ಮಾಡುವ ಹೊತ್ತಿನಲ್ಲೇ, ಮಗುವೊಂದು ಈ ಭೂಮಿಗೆ ಬರುವ ಮುನ್ನವೇ ಅದರ ಉಸಿರು ಹತ್ತಿಕ್ಕುವುದು ಮನುಷ್ಯ ಕುಲಕ್ಕೆ ಅಂಟಿದ ಕಪ್ಪುಚುಕ್ಕೆ. ಈ ಜಾಲದ ಹಿಂದಿರುವ ಪ್ರತಿಯೊಬ್ಬರಿಗೂ ಕಠಿಣ ಶಿಕ್ಷೆಯಾಗಬೇಕು. ಸಮಾಜವು ಹೆಣ್ಣುಮಕ್ಕಳನ್ನು ಗೌರವದಿಂದ ಕಾಣುವಂತಹ ಮಾನಸಿಕ ಬದಲಾವಣೆಗೆ ಮುಂದಾಗದಿದ್ದರೆ, ಇಂತಹ ಕ್ರೂರ ಘಟನೆಗಳಿಗೆ ಕೊನೆ ಎಂಬುದು ಇರುವುದಿಲ್ಲ.

ಸೊಂಪಾದಕೀಯ

ಲಿಮಿಟ್ ಮೀರಿ ಕುಡಿಸಿದ್ದಕ್ಕೆ ದಂಡ!

ಮಿತಿಮೀರಿ ಕುಡಿದವರು ಎಲ್ಲಾದರೂ ಬಿದ್ದು ಗಾಯ ಮಾಡಿಕೊಂಡರೆ ಅವರ ಚಿಕಿತ್ಸಾ ವೆಚ್ಚವನ್ನು ಯಾರು ಭರಿಸಬೇಕು? ಅಮೆರಿಕದ ಮಿಯಾಮಿ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಕೇಸೊಂದರಲ್ಲಿ ಮದ್ಯ ಸರಬರಾಜು ಮಾಡಿದವರೇ ಪರಿಹಾರ ಕೊಡಬೇಕು ಎಂಬ ತೀರ್ಪು ಹೊರಬಿದ್ದಿದೆ. ಆ ಕೇಸ್ ಹಿನ್ನೆಲೆ ಹೀಗಿದೆ. 2024ರಲ್ಲಿ ಕಾರ್ನಿವಲ್ ರೇಡಿಯನ್ಸ್ ಎಂಬ ಐಷಾರಾಮಿ ಹಡಗನ್ನು ಹತ್ತಿದ್ದ ಡಯಾನಾ ಸ್ಯಾಂಡರ್ಸ್ ಎಂಬ ಮಹಿಳೆ ಹಡಗಿನಲ್ಲಿ ಪ್ರಯಾಣಿಸುತ್ತಿದ್ದಾಗ ತನ್ನ 9 ಗಂಟೆ ಪ್ರಯಾಣದ ಅವಧಿಯಲ್ಲಿ ಟಕೀಲಾ ಎಂಬ ಮದ್ಯವನ್ನು 14 ಬಾರಿ ಕುಡಿದಿದ್ದಳು. ನಿಲ್ಲಲೂ ಆಗದಂಥ ಸ್ಥಿತಿಯಲ್ಲಿದ್ದ ಆಕೆಯ ಹಡಗಿನ ರೂಫ್ ಟಾಪ್‌ನಲ್ಲಿದ್ದ ಬಾರ್‌ನಿಂದ ನಿಧಾನವಾಗಿ ಮೆಟ್ಟಿಲಿಳಿದು ಬರುವಾಗ ಆಯತಪ್ಪಿ ಬಿದ್ದಿದ್ದಳು. ಆ ಹಡಗಿನ ಸೇವಾ ಕಂಪನಿಯ ವಿರುದ್ಧ ಕೇಸ್ ಹಾಕಿದ್ದ ಆ ಮಹಿಳೆ, ತನಗೆ ವಿಪರೀತ ಕುಡಿಯುವಂಥ ಮದ್ಯ ನೀಡಿದ್ದಲ್ಲದೆ, ತಾನು ಬಿದ್ದಾಗ ಯಾರೂ ನನ್ನನ್ನು ಉಪಚರಿಸದ ಕಾರಣ ತನಗೆ ಆಘಾತವಾಗಿದ್ದು ಪರಿಹಾರ ಕೊಡಬೇಕೆಂದು ನ್ಯಾಯಾಲಯದ ಮೊರೆ ಹೋಗಿದ್ದಳು. ಇತ್ತೀಚೆಗೆ ಅದರ ತೀರ್ಪು ಬಂದಿದ್ದು ನ್ಯಾಯಾಧೀಶರು, ಒಬ್ಬ ಮನುಷ್ಯ ಎಷ್ಟು ತಡೆದುಕೊಳ್ಳುತ್ತಾನೋ ಅಷ್ಟೇ ಮದ್ಯ ಕೊಡಬೇಕಿತ್ತು. ಅವರು ಕುಡಿದಷ್ಟೂ ಕುಡಿಸಿದ್ದೇ ಮೊದಲ ತಪ್ಪು. ಹಾಗಾಗಿ, ಆ ಹಡಗಿನಲ್ಲಿ ಮದ್ಯ ವ್ಯವಸ್ಥೆ ಮಾಡಿದ ಆ ಹಡಗಿನ ಮಾಲೀಕರಿಗೆ 2.81 ಕೋಟಿ ರೂ. ದಂಡ ವಿಧಿಸಿದ ನ್ಯಾಯಾಲಯ ಆ ಹಣವನ್ನು ಸ್ಯಾಂಡರ್ಸ್‌ಗೆ ಪರಿಹಾರವಾಗಿ ಕೊಡಬೇಕೆಂದು ಆದೇಶಿಸಿದೆ. ನಿಜಕ್ಕೂ ಇಂಥ ತೀರ್ಪು ಬಂದರೆ ಭಾರತದ ಕುಡಿತದಲ್ಲಿ ಭಾರೀ ಬದಲಾವಣೆಯಾಗಬಹುದು. ಹೆಚ್ಚು ಕುಡಿಯುತ್ತೇನೆಂದರೂ ಬಾರ್‌ನವರು ಹೆಚ್ಚಿನ ಮದ್ಯ ಕೊಡೋದಿಲ್ಲ. ಅದರಿಂದ ಕುಡಿದು ತೂರಾಡಿ, ಚರಂಡಿ, ಗಟಾರದಲ್ಲಿ ಬೀಳುವವರ ಸಂಖ್ಯೆಯೂ ಕಡಿಮೆಯಾಗುತ್ತೆ! ಏನಂತೀರಿ?

ಸಂಪಾದಕರ ಸದ್ಯಶೋಧನೆ

ಇದು 'ಹಾರುವ ದತ್ತಾಂಶ ಕೇಂದ್ರ'

ಏರ್‌ಬಸ್ A380 ವಿಮಾನವನ್ನು ಕೇವಲ ಒಂದು ಪ್ರಯಾಣಿಕ ವಿಮಾನ ಎಂದು ಕರೆಯುವ ಬದಲು, ಅದನ್ನು 'ಹಾರುವ ದತ್ತಾಂಶ ಕೇಂದ್ರ' (Flying Data Center) ಎಂದು ಕರೆಯುವುದು ಹೆಚ್ಚು ಸೂಕ್ತ. ಇದು ಮಾನವ ಇತಿಹಾಸದ ಅತ್ಯಂತ ಸಂಕೀರ್ಣ ಮತ್ತು ಮಹತ್ವಾಕಾಂಕ್ಷೆಯ ಎಂಜಿನಿಯರಿಂಗ್ ಸಾಧನೆಗಳಲ್ಲಿ ಒಂದು. ಆದರೆ, ಈ ಸಂಕೀರ್ಣತೆಯೇ ಒಮ್ಮೆ ಈ ಬೃಹತ್ ಯೋಜನೆಯನ್ನು ಹಳಿ ತಪ್ಪಿಸುವ ಹಂತಕ್ಕೆ ತಲುಪಿಸಿತ್ತು. ಒಂದು ವಿಮಾನದ ಒಳಗೆ ಸುಮಾರು 500 ಕಿಮೀ (310 ಮೈಲಿ) ಉದ್ದದ ವೈರಿಂಗ್ ಇದೆ ಎಂದು ಕಲ್ಪಿಸಿಕೊಳ್ಳುವುದು ಕಷ್ಟ. ಇದು ಬೆಂಗಳೂರಿನಿಂದ ಚೆನ್ನೈಗಿಂತಲೂ ಹೆಚ್ಚಿನ ದೂರ! ವಿಮಾನದ ಕಾಕ್‌ಪಿಟ್‌ನಿಂದ ಹಿಡಿದು ರೆಕ್ಕೆಗಳ ತುದಿಯವರೆಗೆ, ಎಂಜಿನ್ ನಿಯಂತ್ರಣದಿಂದ ಹಿಡಿದು ಪ್ರತಿಯೊಬ್ಬ ಪ್ರಯಾಣಿಕನ ಎಂಟರ್‌ಟೈನ್‌ಮೆಂಟ್ ಸ್ಕ್ರೀನ್‌ನವರೆಗೆ ಮಾಹಿತಿ ಮತ್ತು ವಿದ್ಯುತ್ ಹರಿಯಲು ಈ ಜಾಲ ಅತ್ಯಗತ್ಯ. ಇಷ್ಟು ದೊಡ್ಡ ಪ್ರಮಾಣದ ತಾಮ್ರದ ತಂತಿಗಳು ವಿಮಾನದ ತೂಕವನ್ನು ವಿಪರೀತ ಹೆಚ್ಚಿಸುತ್ತವೆ. ಇದನ್ನು ಕಡಿಮೆ ಮಾಡಲು ಏರ್‌ಬಸ್ ಅಲ್ಯೂಮಿನಿಯಂ ಕೇಬಲ್‌ಗಳನ್ನು ಬಳಸಿತು, ಇದು ತೂಕವನ್ನು ಕಡಿಮೆ ಮಾಡಿದರೂ ಸಂಕೀರ್ಣತೆಯನ್ನು ಹೆಚ್ಚಿಸಿತು. A380 ಇತಿಹಾಸದಲ್ಲಿ ಅತ್ಯಂತ ಕಹಿ ಘಟನೆ ಎಂದರೆ ಅದರ ಉತ್ಪಾದನಾ ವಿಳಂಬ. ವಿಮಾನದ ಬಿಡಿಭಾಗಗಳನ್ನು ಯುರೋಪಿನ ವಿವಿಧ ದೇಶಗಳಲ್ಲಿ (ಜರ್ಮನಿ, ಫ್ರಾನ್ಸ್, ಸ್ಪೇನ್, ಯುಕೆ) ತಯಾರಿಸಲಾಗುತ್ತದೆ. ಜರ್ಮನಿಯ ಹ್ಯಾಂಬರ್ಗ್‌ನ ಎಂಜಿನಿಯರ್‌ಗಳು ವೈರಿಂಗ್ ವಿನ್ಯಾಸಕ್ಕಾಗಿ CATIA V4 ಎಂಬ ಹಳೆಯ ಆವೃತ್ತಿಯ ಸಾಫ್ಟ್‌ವೇರ್ ಬಳಸಿದರು. ಆದರೆ ಫ್ರಾನ್ಸ್‌ನ ಟೌಲೌಸ್‌ನಲ್ಲಿದ್ದ ವಿನ್ಯಾಸಕರು CATIA V5 ಎಂಬ ಆಧುನಿಕ ಆವೃತ್ತಿಯನ್ನು ಬಳಸುತ್ತಿದ್ದರು. ಈ ಎರಡು ಸಾಫ್ಟ್‌ವೇರ್‌ಗಳ ನಡುವೆ ಸಮನ್ವಯದ ಕೊರತೆಯಿಂದಾಗಿ, ತಯಾರಾದ ವೈರಿಂಗ್ ಬಂಡಲ್‌ಗಳು ವಿಮಾನದ ಫ್ಯೂಸ್‌ಲೇಜ್‌ಗೆ ಸರಿಯಾಗಿ ಹೊಂದಿಕೆಯಾಗಲಿಲ್ಲ. ಕೆಲವು ವೈರ್‌ಗಳು ತೀರಾ ಉದ್ದವಾದರೆ, ಇನ್ನು ಕೆಲವು ಜಂಕ್ಷನ್‌ಗಳಿಗೆ ತಲುಪಲು ಸಾಧ್ಯವಾಗದಷ್ಟು ಚಿಕ್ಕದಾದವು. ಈ ಸಣ್ಣ ತಾಂತ್ರಿಕ ವ್ಯತ್ಯಾಸದಿಂದಾಗಿ ಇಡೀ ಉತ್ಪಾದನಾ ಪ್ರಕ್ರಿಯೆ ಎರಡು ವರ್ಷಗಳ ಕಾಲ ವಿಳಂಬವಾಯಿತು. ಇದು ಏರ್‌ಬಸ್‌ಗೆ ಸುಮಾರು 2 ಬಿಲಿಯನ್ ಯುರೋಗಳಿಗಿಂತಲೂ ಹೆಚ್ಚು ನಷ್ಟವನ್ನುಂಟುಮಾಡಿತು. A380 ವಿಮಾನದ ವ್ಯವಸ್ಥೆಯನ್ನು Integrated Modular Avionics (IMA) ಎಂದು ಕರೆಯಲಾಗುತ್ತದೆ. ಇದರಲ್ಲಿ ಹಳೆಯ ವಿಮಾನಗಳಂತೆ ಒಂದೊಂದು ಕೆಲಸಕ್ಕೆ ಒಂದೊಂದು ಕಂಪ್ಯೂಟರ್ ಇರುವ ಬದಲು, ಕೇಂದ್ರೀಕೃತ ನೆಟ್‌ವರ್ಕ್ ಇರುತ್ತದೆ. ಪ್ರತಿ ಕ್ಷಣವೂ ವಿಮಾನದ ಸಾವಿರಾರು ಸೆನ್ಸಾರ್‌ಗಳು ಮಾಹಿತಿಯನ್ನು ಸಂಗ್ರಹಿಸುತ್ತವೆ. ಎಂಜಿನ್ ಕಾರ್ಯಕ್ಷಮತೆ, ಹವಾಮಾನ, ಇಂಧನ ಮಟ್ಟ ಮತ್ತು ವಿಮಾನದ ಸ್ಥಿತಿಯನ್ನು ಈ ಕೇಂದ್ರ ವ್ಯವಸ್ಥೆ ವಿಶ್ಲೇಷಿಸುತ್ತದೆ. AFDX ನೆಟ್‌ವರ್ಕ್ ವಿಮಾನದ ಒಳಗೆ ಇರುವ ಒಂದು ಹೈ-ಸ್ಪೀಡ್ ಇಂಟರ್‌ನೆಟ್ ಇದ್ದಂತೆ. ಇದು ದತ್ತಾಂಶವನ್ನು ಅತಿ ವೇಗವಾಗಿ ಮತ್ತು ನಿಖರವಾಗಿ ವರ್ಗಾಯಿಸುತ್ತದೆ. A380 ವಿನ್ಯಾಸದ ಕುರಿತು ಇಂದಿಗೂ ಚರ್ಚೆಗಳು ನಡೆಯುತ್ತಲೇ ಇವೆ. ಇಷ್ಟು ಬೃಹತ್ ವಿಮಾನವನ್ನು ಅತಿ ಕಡಿಮೆ ಶಬ್ದದೊಂದಿಗೆ ಮತ್ತು ಸುಗಮವಾಗಿ ಹಾರುವಂತೆ ಮಾಡುವುದು ಸಾಮಾನ್ಯ ಸಾಧನೆಯಲ್ಲ. ಇದರ ಗಾತ್ರದಿಂದಾಗಿ ಒಳಗೆ ಲಭ್ಯವಿರುವ ಜಾಗ ಮತ್ತು ನಿಶ್ಶಬ್ದವಾದ ಕ್ಯಾಬಿನ್ ಪ್ರಯಾಣಿಕರಿಗೆ ಐಷಾರಾಮಿ ಅನುಭವ ನೀಡುತ್ತದೆ. 500 ಕಿಮೀ ವೈರಿಂಗ್‌ನಲ್ಲಿ ಎಲ್ಲಾದರೂ ಒಂದು ಕಡೆ ಸಣ್ಣ ದೋಷವಾದರೂ ಅದನ್ನು ಪತ್ತೆಹಚ್ಚುವುದು ದೊಡ್ಡ ಸವಾಲು. ಈ ಸಂಕೀರ್ಣತೆಯೇ ಅದರ ಬೆಲೆಯನ್ನು ಗಗನಕ್ಕೇರಿಸಿತು, ಇದು ವಿಮಾನಯಾನ ಸಂಸ್ಥೆಗಳಿಗೆ ಆರ್ಥಿಕವಾಗಿ ಹೊರೆಯಾಯಿತು. ಏರ್‌ಬಸ್ A380 ಎಂಜಿನಿಯರಿಂಗ್ ಜಗತ್ತಿನ ಒಂದು ಪರಾಕಾಷ್ಠೆ. ಅದು ನಮಗೆ ಕಲಿಸಿದ ದೊಡ್ಡ ಪಾಠವೆಂದರೆ, ವಿನ್ಯಾಸವು ಎಷ್ಟೇ ಸಂಕೀರ್ಣವಾಗಿದ್ದರೂ ಸಹ, ಡಿಜಿಟಲ್ ಉಪಕರಣಗಳ ನಡುವಿನ ಸಮನ್ವಯ (Software Compatibility) ಮತ್ತು ಸಂವಹನ ಸರಿಯಿಲ್ಲದಿದ್ದರೆ ಬಿಲಿಯನ್ ಡಾಲರ್ ಯೋಜನೆಗಳೂ ಅಪಾಯಕ್ಕೆ ಸಿಲುಕಬಹುದು. ಇಂದು A380 ಉತ್ಪಾದನೆ ನಿಂತಿದ್ದರೂ, ಅದರ ವೈರಿಂಗ್ ಮತ್ತು ಏವಿಯಾನಿಕ್ಸ್ ತಂತ್ರಜ್ಞಾನವು ಆಧುನಿಕ ವಿಮಾನಗಳಾದ A350 ವಿನ್ಯಾಸಕ್ಕೆ ಬುನಾದಿಯಾಗಿದೆ. ಇದು ಕೇವಲ ಲೋಹದ ಹಕ್ಕಿಯಲ್ಲ, ಲಕ್ಷಾಂತರ ಸಂಕೇತಗಳು ಮತ್ತು ಸಾವಿರಾರು ಕಿಮೀ ತಂತಿಗಳ ಮೂಲಕ ಜೀವ ತಳೆದ ಒಂದು 'ಡಿಜಿಟಲ್ ಅದ್ಭುತ'.

ಇಂಗ್ಲಿಷ್ ಭಾಷೆ ಸೊರಗುತ್ತಿಲ್ಲ, ಅಸಲಿಗೆ ಅದು ಪಾರ್ಟಿ ಮಾಡುತ್ತಿದೆ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

'ಇಂಗ್ಲಿಷ್ ಭಾಷೆಗೆ ಏನು ಕಾದಿದೆ ? ಅದರ ಭವಿಷ್ಯವೇನು?' ಈ ವಿಷಯ ಕುರಿತು ಇತ್ತೀಚೆಗೆ ಬೆಂಗಳೂರಿನಲ್ಲಿ ಒಂದು ಅಪರೂಪದ ವಿಚಾರ ಸಂಕಿರಣ ನಡೆಯಿತು. ದಿನವಿಡೀ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದೆ. ಇಂಗ್ಲಿಷ್ ಭಾಷೆಯು ಇಂದು ಕೇವಲ ಒಂದು ಸಂವಹನ ಮಾಧ್ಯಮವಾಗಿ ಉಳಿದಿಲ್ಲ. 'ಇಂಗ್ಲಿಷ್ ಒಂದು ಭಾಷೆಯೋ, ಒಂದು ಕೌಶಲವೋ?' ಎಂಬ ಪ್ರಶ್ನೆಯಿಂದ ಹಿಡಿದು, ಅದು ಪ್ರಾದೇಶಿಕ ಭಾಷೆಗಳ ಮೇಲೆ ಬೀರುತ್ತಿರುವ ಪ್ರಭಾವದವರೆಗೆ ಅನೇಕ ಸ್ವಾರಸ್ಯಕರ ಸಂಗತಿಗಳು ಚರ್ಚೆಯ ಕೇಂದ್ರಬಿಂದುವಾಗಿದ್ದವು. ಇಂಗ್ಲಿಷ್ ಭಾಷೆಯ ಈ 'ಪ್ರಜಾಪ್ರಭುತ್ವೀಕರಣ' ಅಥವಾ ಅದರ ರೂಪಾಂತರವು, ಅದು ಒಂದು ಕಾಲದ ಶಿಸ್ತಿನ ಬ್ರಿಟಿಷ್ ಶಾಲಾ ಮಾಸ್ತರನಿಂದ ಈಗ 'ಮಾಸ್' ಹೀರೋ ಆಗಿ ಬದಲಾದ ಕಥೆಯಂತೆ ಕೇಳಿಸುತ್ತದೆ. ಒಂದು ಕಾಲದಲ್ಲಿ ಇಂಗ್ಲಿಷ್ ಎಂದರೆ ಅದು ಬ್ರಿಟಿಷರ ಮನೆಯಲ್ಲಿ ಬೆಳೆದ ಶಿಸ್ತಿನ ಮಗುವಿನಂತಿತ್ತು. ಸರಿಯಾದ ಉಚ್ಚಾರಣೆ ಇರಬೇಕು, ವ್ಯಾಕರಣದ ಗೆರೆ ದಾಟಬಾರದು ಎಂಬ ಭಯವಿತ್ತು. ಆ ಕಾಲದಲ್ಲಿ ಇಂಗ್ಲಿಷ್ ಅಂದ್ರೆ ಇಸ್ತ್ರಿ ಮಾಡಿದ ಬಿಳಿ ಶರ್ಟ್, ಟೈ ಧರಿಸಿ, ಕೈಯಲ್ಲಿ ಬೆತ್ತ ಹಿಡಿದು ನಿಂತ 'ಬ್ರಿಟಿಷ್ ಶಾಲಾ ಮಾಸ್ಟರ್' ನಂತಿತ್ತು. 'P' ಅಕ್ಷರವನ್ನು ಹೇಗೆ ಉಚ್ಚರಿಸಬೇಕು, 'The' ಎಲ್ಲಿ ಬಳಸಬೇಕು ಎಂದು ಸ್ವಲ್ಪ ತಪ್ಪಾದರೂ ಸಾಕು, ಈ ಮಾಸ್ತರ ಬೆತ್ತ ಹಿಡಿದು ಅಟ್ಟಾಡಿಸಿಕೊಂಡು ಬರುತ್ತಿದ್ದ. ವ್ಯಾಕರಣದ ಗೆರೆ ದಾಟುವುದೆಂದರೆ ಲಕ್ಷ್ಮಣ ರೇಖೆ ದಾಟಿದಂತೆ ಎಂಬ ಭಯವಿತ್ತು. ಆ ಕಾಲದಲ್ಲಿ ಇಂಗ್ಲಿಷ್ ಎಂದರೆ ಅದು ಲಂಡನ್‌ನ ಸೈನಿಕನಂತಿತ್ತು.

ಆದರೆ ಇಂದು ಇಂಗ್ಲಿಷ್ ಆ ಶಿಸ್ತಿನ ಕೋಟೆಯನ್ನು ದಾಟಿ ಬೀದಿಗೆ ಬಂದಿದೆ. ಆದರೆ ಕಾಲ ಬದಲಾದಂತೆ, ಈಗ ಆತ ಟೈ ಕಳಚಿಟ್ಟು, ಶರ್ಟ್ ಸ್ಲೀವ್ಸ್ ಮಡಚಿ, ರೇಬನ್ ಗ್ಲಾಸ್ ಹಾಕಿ 'ಮಾಸ್ ಹೀರೋ' ಆಗಿ ಎಂಟ್ರಿ ಕೊಟ್ಟಿದ್ದಾನೆ! ಈಗ ಈತನಿಗೆ ವ್ಯಾಕರಣದ ಶಿಸ್ತಿಗಿಂತ 'ವಿಸಿಲ್' ಮತ್ತು 'ಚಪ್ಪಾಳೆ' ಮುಖ್ಯ. ಬ್ರಿಟಿಷರ ಮನೆಯ ಮಗುವಾಗಿದ್ದವನು ಈಗ ಬೀದಿಗೆ ಬಂದು ಎಲ್ಲರ ಜತೆ 'ಫ್ರೆಂಡ್' ಆಗಿಬಿಟ್ಟಿದ್ದಾನೆ. ಈಗ ಅದು 'ಜಾಗತಿಕ ಸಾಮಾನ್ಯ ಭಾಷೆ' ಅಥವಾ Lingua Franca. ಈಗ ಈ ಮಾಸ್ ಹೀರೋ ಎಲ್ಲಿಗೆ ಹೋಗುತ್ತಾನೋ ಆ ಊರಿನ ಬಣ್ಣ ಹಚ್ಚಿಕೊಳ್ಳುತ್ತಾನೆ. ಅಮೆರಿಕಕ್ಕೆ ಹೋದರೆ ಒಂದು ಥರ, ಭಾರತಕ್ಕೆ ಬಂದರೆ 'ಐ ಆಮ್ ಸಿಂಪ್ಲಿ ಟೆಲ್ಲಿಂಗ್ ಯು ನೋ' ಎನ್ನುವ ಮಸಾಲೆ ಅವತಾರ! ಈ ಹೀರೋಗೆ ಈಗ ಶಿಸ್ತಿನ ಕ್ಲಾಸ್‌ರೂಮ್‌ಗಿಂತ ಜನಸಾಮಾನ್ಯರ ನಡುವೆ ಇರುವುದೇ ಇಷ್ಟ. ಯಾರಾದರೂ 'ನಿಮ್ಮ ಗ್ರಾಮರ್ ಸರಿ ಇಲ್ಲ' ಅಂದ್ರೆ, ಈ ಮಾಸ್ ಹೀರೋ ಕೂಲ್ ಆಗಿ 'ಅರ್ಥ ಆಯ್ತಲ್ಲ? ಅಷ್ಟೇ ಸಾಕು, ಬ್ರೋ' ಎಂದು ಡೈಲಾಗ್ ಹೊಡೆಯುತ್ತಾನೆ. ಒಟ್ಟಿನಲ್ಲಿ, ಇಂಗ್ಲಿಷ್ ಈಗ ಎಲ್ಲರ ಕೈಗೆ ಸಿಗುವ, ಎಲ್ಲರಿಗೂ ಬೇಕಾದ 'ಪಕ್ಕಾ ಲೋಕಲ್' ಹೀರೋ! ಅಂದರೆ, ಒಬ್ಬ ಚೀನಿಯ ಮತ್ತು ಒಬ್ಬ ಕನ್ನಡಿಗ ವ್ಯಾಪಾರ ಮಾಡುವಾಗ ಬಳಸುವ ಇಂಗ್ಲಿಷ್‌ನಲ್ಲಿ 'ಷೇಕ್ಸ್‌ಪಿಯರ್' ಇರುವುದಿಲ್ಲ, ಬದಲಾಗಿ ಅಲ್ಲಿ 'ವ್ಯಾಪಾರ' ಮಾತ್ರ ಇರುತ್ತದೆ. ಇಲ್ಲಿ ಉಚ್ಚಾರಣೆಗಿಂತ ಎದುರಿಗಿದ್ದವನಿಗೆ ವಿಷಯ ತಲುಪಿತೇ ಎಂಬುದು ಮುಖ್ಯ. ಆಕ್ಸ್‌ಫರ್ಡ್ ಡಿಕ್ಷನರಿ ಕೂಡ ಈಗ 'ನೀವು ಮಾತಾಡೋದು ನಮಗೂ ಅರ್ಥವಾಗ್ತಿಲ್ಲಪ್ಪಾ' ಎಂದು ಬಾಯಿ ಮುಚ್ಚಿಕೊಳ್ಳುವಂತಾಗಿದೆ.

ಇಂಗ್ಲಿಷ್ ಭಾಷೆ ಈಗ ಬ್ರಿಟಿಷರ ಆಸ್ಥಾನದಿಂದ ಹೊರ ಬಂದು ನಮ್ಮ ಮನೆಯ ಅಡುಗೆ ಮನೆಯೊಳಗೆ ನುಗ್ಗಿದೆ. ಅದು ಈಗ ಎಲ್ಲರ ಮನೆ ಮಗಳಾಗಿ, ಆಯಾ ದೇಶದ ಸಂಸ್ಕೃತಿಗೆ ತಕ್ಕಂತೆ ರೂಪ ಬದಲಿಸಿಕೊಳ್ಳುತ್ತಿದೆ. ಇದನ್ನು ನೋಡಿದರೆ ಇಂಗ್ಲಿಷ್‌ಗೆ ಮರುನಾಮಕರಣ ಮಾಡುವ ಕಾಲ ಬಂದಿದೆ ಎನಿಸುತ್ತದೆ. ಸಿಂಗಾಪುರಕ್ಕೆ ಹೋದರೆ ಈ ಇಂಗ್ಲಿಷ್ ಮಗಳು 'ಸಿಂಗ್ಲಿಷ್' ಎಂಬ ಹೊಸ ಅವತಾರ ತಾಳುತ್ತಾಳೆ. ಅಲ್ಲಿ ನೀವು ಯಾವುದೇ ವಾಕ್ಯದ ಕೊನೆಯಲ್ಲಿ 'Lah' (ಲಾ) ಎಂದು ಸೇರಿಸದಿದ್ದರೆ ನಿಮ್ಮ ಮಾತು ಅಪೂರ್ಣ. 'Okay lah!', 'Coming lah!' ಎನ್ನದಿದ್ದರೆ ಅವರಿಗೆ ಸಂವಹನವೇ ನಡೆಸಿದಂತಾಗುವುದಿಲ್ಲ. ಅದು ಒಂಥರಾ ಕಾಫಿಗೆ ಸಕ್ಕರೆ ಹಾಕಿದಂತೆ. 'ಲಾ' ಇಲ್ಲದಿದ್ದರೆ ಆ ಇಂಗ್ಲಿಷ್‌ಗೆ ರುಚಿಯೇ ಇಲ್ಲ.

ಇನ್ನು ನಮ್ಮ ಭಾರತಕ್ಕೆ ಬಂದರೆ, ನಾವು ಈ ಇಂಗ್ಲಿಷ್‌ಗೆ ಪಕ್ಕಾ ದೇಸಿ ಮಸಾಲೆ ಹಾಕಿ 'ಕಂಗ್ಲಿಷ್' ಅಥವಾ 'ಹಿಂಗ್ಲಿಷ್' ಎಂಬ ಘಮಘಮಿಸುವ ಒಗ್ಗರಣೆ ಹಾಕುತ್ತೇವೆ. ನಮ್ಮವರು 'I am simply telling like that only' ಎಂದು ಹೇಳುವಾಗ ಸಿಗುವ ಆ ಒಂದು ಆತ್ಮತೃಪ್ತಿ ಇದೆಯಲ್ಲ, ಅದು ಸಾಕ್ಷಾತ್ ಷೇಕ್ಸ್‌ಪಿಯರ್ ಬಂದರೂ ಕೊಡಲು ಸಾಧ್ಯವಿಲ್ಲ. ನಾವು ಇಂಗ್ಲಿಷ್ ಅನ್ನು ಕೇವಲ ಭಾಷೆಯಾಗಿ ನೋಡುವುದಿಲ್ಲ, ಅದರಲ್ಲಿ ನಮ್ಮ ಭಾವನೆಗಳನ್ನು ತುರುಕುತ್ತೇವೆ. ಬ್ರಿಟಿಷರು 'ಪೀಸಾ' (Pizza) ಅಂದಾಗ ಅದು ಬಾಯಲ್ಲಿ ಕರಗಬಹುದು, ಆದರೆ ನಾವು ಅದನ್ನು 'ಪಿಜ್ಜಾ' ಅಂದಾಗ ಮಾತ್ರ ನಮಗೆ ಹೊಟ್ಟೆ ತುಂಬಿದ ಅನುಭವವಾಗುವುದು ಸುಳ್ಳಲ್ಲ! ನಾವು ಇಂಗ್ಲಿಷ್ ಅಕ್ಷರಗಳ ಜತೆ ನಮ್ಮ ತಾಯ್ನುಡಿಯ ವ್ಯಾಕರಣವನ್ನು ಬೆರೆಸಿ ಒಂದು ವಿಚಿತ್ರ ಸಲಾಡ್ ಮಾಡಿದ್ದೇವೆ. 'Why you are doing like this?' ಎಂದು ನಾವು ಕೇಳುವಾಗ ಬ್ರಿಟಿಷ್ ಗ್ರಾಮರ್ ಮಾಸ್ತರ ಬೆಚ್ಚಿಬೀಳಬಹುದು, ಆದರೆ ನಮಗೆ ಎದುರಿಗಿದ್ದವನಿಗೆ ವಿಷಯ ತಲುಪಿದರೆ ಅಷ್ಟೇ ಸಾಕು. ಇಂಗ್ಲಿಷ್ ಈಗ ನಮ್ಮೂರಿನ ಹೋಟೆಲ್‌ನಲ್ಲಿ ಸಿಗುವ 'ಫಿಲ್ಟರ್ ಕಾಫಿ'ಯಂತೆ ಎಲ್ಲರಿಗೂ ಒಗ್ಗಿಕೊಂಡಿದೆ. ಭಾಷೆಯ ಈ ರೂಪಾಂತರವನ್ನು ನೋಡಿದರೆ, ಭವಿಷ್ಯದಲ್ಲಿ ಇಂಗ್ಲೆಂಡ್‌ನವರೇ ನಮ್ಮ ಹತ್ತಿರ ಬಂದು 'ನಮಗೆ ನಿಮ್ಮ ಇಂಗ್ಲಿಷ್ ಕಲಿಸಿಕೊಡಿ' ಎಂದು ಕೇಳಿದರೂ ಆಶ್ಚರ್ಯವಿಲ್ಲ! ಇಂಗ್ಲಿಷ್ ಎಂಬ ಈ 'ಮನೆ ಮಗಳು' ಈಗ ಜಗತ್ತಿನಾದ್ಯಂತ ಸಂಚರಿಸುತ್ತಾ ಎಲ್ಲರನ್ನೂ ನಗಿಸುತ್ತಾ, ಬೆಸೆಯುತ್ತಾ ಸಾಗುತ್ತಿದ್ದಾಳೆ .

ಇಂಗ್ಲೆಂಡ್‌ನ ರಾಣಿ ಕೂಡ ಇಂದಿನ ಇಂಗ್ಲಿಷ್ ಸ್ಲ್ಯಾಂಗ್‌ಗಳನ್ನು (Slang) ಕೇಳಿದ್ದರೆ 'ಇದು ನಾವು ಕೊಟ್ಟ ಭಾಷೆಯಾ?' ಎಂದು ಮೂರ್ಛೆ ಹೋಗಬಹುದು. ಆದರೆ ಜಗತ್ತಿನ ಪಾಲಿಗೆ ಇದು ಸಂವಹನದ ಸುಲಭ ದಾರಿ.

ಐವತ್ತು ವರ್ಷಗಳ ಹಿಂದೆ ಇಂಗ್ಲಿಷ್ ಎಂಬುದು ನಮ್ಮೂರಿಗೆ ಬಂದ ಹೊಸ 'ಕಲೆಕ್ಟರ್' ಇದ್ದಂತೆ ಇತ್ತು. ಜನ ದೂರದಿಂದಲೇ ಅದಕ್ಕೆ ನಮಸ್ಕಾರ ಹಾಕಿ, 'ನಮಗ್ಯಾಕಪ್ಪ ಈ ಸಾಹೇಬರ ಭಾಷೆ' ಎಂದು ಓಡಿ ಹೋಗುತ್ತಿದ್ದರು. ಅಪ್ಪಿತಪ್ಪಿ

ಯಾರಾದರೂ ಇಂಗ್ಲಿಷ್‌ನಲ್ಲಿ ಒಂದೆರಡು ಪದ ಮಾತಾಡಿದರೆ, ಇಡೀ ಊರು ಅವರನ್ನೇ ಆಶ್ಚರ್ಯದಿಂದ ನೋಡುತ್ತಿತ್ತು. ಅಂದು ಒಂದು 'Fullstop' ಮಿಸ್ ಆದರೂ ಸಾಕು, ಏನೋ ದೊಡ್ಡ ಅಪರಾಧ ಮಾಡಿದಂತೆ ಬೆವರುತ್ತಿದ್ದರು. ಇಂಗ್ಲಿಷ್ ಅಂದರೆ ಅದು ಕೇವಲ ಬುದ್ಧಿವಂತರ, ಸೂಟು-ಬೂಟು ಹಾಕುವವರ ಸ್ವತ್ತಾಗಿತ್ತು. ಆದರೆ ಈಗ ಕಾಲ ಬದಲಾಗಿದೆ! ಇವತ್ತು ಇಂಗ್ಲಿಷ್ ಅಂದರೆ ಆ ಶಿಸ್ತಿನ ಕಲೆಕ್ಟರ್ ಅಲ್ಲ, ಬದಲಾಗಿ ನಮ್ಮ ಗಲ್ಲಿ ಕ್ರಿಕೆಟ್ ಆಡುವ 'ಫ್ರೆಂಡ್' ಇದ್ದಂತೆ. ಈಗ ತಪ್ಪೋ, ಸರಿಯೋ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. 'English is just a language, not a knowledge' ಎಂಬ ಡೈಲಾಗ್ ಹೊಡೆದು, ಜನ ತಮಗೆ ತೋಚಿದಂತೆ ಇಂಗ್ಲಿಷನ್ನು ಬಗ್ಗಿಸಿ, ಜಗ್ಗಿಸಿ ಆಟವಾಡುತ್ತಿದ್ದಾರೆ.

ಈಗಿನ ಕಾಲದ ಇಂಗ್ಲಿಷ್ ಬಳಕೆ ಹೇಗಿದೆ ಎಂದರೆ, 'I am going to market to taking sugar' ಅಂದರೂ ಕೇಳುವವನು 'ಓಕೆ' ಎನ್ನುತ್ತಾನೆ. ಇಲ್ಲಿ 'ing' ಎಲ್ಲಿ ಬರಬೇಕು, 'to' ಎಲ್ಲಿ ಹಾಕಬೇಕು ಎಂಬ ತಲೆನೋವೇ ಇಲ್ಲ. ನಮಗೆ ಬೇಕಾಗಿರುವುದು ಅರ್ಥವಾಗುವ ಸಂವಹನವಷ್ಟೇ! ಇನ್ನು ಸೋಶಿಯಲ್ ಮೀಡಿಯಾದಲ್ಲಂತೂ ಇಂಗ್ಲಿಷ್ ಕಥೆ ಕೇಳಲೇಬೇಡಿ. 'Good Morning' ಎಂಬುದು 'GM' ಆಗಿದೆ, 'Thank You' ಎಂಬುದು 'TY' ಆಗಿದೆ. ಅಕ್ಷರಗಳನ್ನು ಉಳಿಸುವ ಭರದಲ್ಲಿ ನಾವು ಇಂಗ್ಲಿಷನ್ನು ಎಷ್ಟು ಕುಟ್ಟಿ ಪುಡಿ ಮಾಡಿದ್ದೇವೆ ಎಂದರೆ, ಸ್ವತಃ ಬ್ರಿಟಿಷರೇ ಬಂದು ನೋಡಿದರೆ 'ಇದು ನಾವೇ ಕಂಡುಹಿಡಿದ ಭಾಷೆಯೇ?' ಎಂದು ಕಕ್ಕಾಬಿಕ್ಕಿಯಾಗುವುದು ಗ್ಯಾರಂಟಿ. ಐವತ್ತು ವರ್ಷಗಳ ಹಿಂದೆ ಭಯ ಹುಟ್ಟಿಸುತ್ತಿದ್ದ ಇಂಗ್ಲಿಷ್ ಇಂದು 'ಪಕ್ಕಾ ಲೋಕಲ್' ಆಗಿಬಿಟ್ಟಿದೆ. ಅದು ಈಗ ತನ್ನ ಗತ್ತು-ಗೈರತ್ತು ಬಿಟ್ಟು, ನಮ್ಮೂರಿನ ಮಣ್ಣಿನ ವಾಸನೆಗೆ ಒಗ್ಗಿಕೊಂಡಿದೆ. ತಪ್ಪಾಗಿ ಮಾತಾಡಿದರೂ ಆತ್ಮವಿಶ್ವಾಸದಿಂದ ಮಾತಾಡುವ ಈ ಕಾಲದ ಜನರನ್ನು ನೋಡಿದರೆ, ಇಂಗ್ಲಿಷ್ ಭಾಷೆಯೇ ಸೋತು ಶರಣಾದಂತೆ ಕಾಣುತ್ತಿದೆ! ಇಂಗ್ಲಿಷ್ ಈಗ ಬರೆಯುವ ಭಾಷೆಯಲ್ಲ, ನಮ್ಮ ಮನಸ್ಸಿಗೆ ಬಂದಂತೆ 'ಆಡುವ' ಭಾಷೆಯಾಗಿದೆ.

ಇತ್ತೀಚೆಗೆ ಇಂಗ್ಲಿಷ್ ಭಾಷೆಯ ಅಂಗಳದಲ್ಲಿ ಏನೋ ಒಂದು ವಿಚಿತ್ರವಾದ ಸಂಭ್ರಮ ನಡೆಯುತ್ತಿದೆ. ಹಳೆಯ ಕಾಲದ ನಿಘಂಟುಗಳು ತಮ್ಮ ಗಂಭೀರ ಮುಖ ಹೊತ್ತು ಕಪಾಟಿನಲ್ಲಿ ಮೌನವಾಗಿ ಕುಳಿತಿವೆ. ಕಾರಣ ಇಷ್ಟೇ, ಈಗಿನ ಕಾಲಕ್ಕೆ ದೊಡ್ಡ ದೊಡ್ಡ ಪದಗಳ ತೂಕಕ್ಕಿಂತ ಒಂದು ಪುಟ್ಟ ಎಮೋಜಿಯ ಮಿಂಚು ಹೆಚ್ಚು ಆಪ್ತವಾಗುತ್ತಿದೆ. ಯಾರೋ ದೀರ್ಘವಾಗಿ ಬರೆದ ಪ್ರೇಮಪತ್ರಕ್ಕೋ ಅಥವಾ ಸುದೀರ್ಘ ಅಳಲಿಗೋ ಪ್ರತಿಯಾಗಿ ಒಂದು 'Thumbs up' ಕಳುಹಿಸಿದರೆ ಸಾಕು, ಅಲ್ಲಿಗೆ ಮಾತುಕತೆ ಮುಕ್ತಾಯ. ಸಾವಿರ ಅರ್ಥಗಳ ಪದರವನ್ನು ಒಂದು ಹಳದಿ ಬಣ್ಣದ ಬೆರಳು ಅಷ್ಟು ಲೀಲಾಜಾಲವಾಗಿ ದಾಟಿಸಿಬಿಡುತ್ತದೆ. ಈ ಮೊದಲು ಒಂದು ವಾಕ್ಯದ ಕೊನೆಯಲ್ಲಿ 'Full stop' ಇಡದಿದ್ದರೆ ಏನೋ ಕಳೆದುಕೊಂಡ ಆತಂಕವಿರುತ್ತಿತ್ತು. ಈಗ ಎಲ್ಲವೂ 'LOL' (ಲೊಲ್) ಎಂಬ ಮೂರಕ್ಷರದ ನಗುಮೊಗದಲ್ಲಿ ಐಕ್ಯವಾಗಿಬಿಡುತ್ತದೆ. ಭಾಷೆ ಈಗ ಗಾಜಿನ ಅರಮನೆಯಿಂದ ಕೆಳಗಿಳಿದು, ನಮ್ಮೂರಿನ ಫುಟ್‌ಪಾತ್ ಬದಿಯ ಟೀ ಅಂಗಡಿಯಲ್ಲಿ ನಿಂತು ಹರಟೆ ಹೊಡೆಯುವ ಹುಡುಗನಂತಾಗಿದೆ. ಅಲ್ಲಿ ಸಂವಹನಕ್ಕೆ ಪದಗಳ ಹಂಗಿಲ್ಲ, ಕೇವಲ ಒಂದು ಸಂಕೇತದ ಸ್ಪರ್ಶವಿದ್ದರೆ ಸಾಕು.

ಹಳೆಯ ಸಾಹಿತಿಗಳು ಹಣೆ ಸುಕ್ಕುಗಟ್ಟಿಸಿ, 'ಅಯ್ಯೋ, ಭಾಷೆ ಸಾಯುತ್ತಿದೆ, ಅದರ ಆಯುಷ್ಯ ಮುಗಿಯುತ್ತಿದೆ' ಎಂದು ಮರುಗುತ್ತಿರುತ್ತಾರೆ. ಆದರೆ ಪೇಟೆಯ ಗಲ್ಲಿಗಲ್ಲಿಗಳಲ್ಲಿ ಓಡಾಡುವ ಯುವ ಪೀಳಿಗೆಯನ್ನು ಕೇಳಿ ನೋಡಿ, ಅವರು ಕಣ್ಣು ಮಿಟುಕಿಸಿ ಹೇಳುತ್ತಾರೆ - 'ಭಾಷೆ ಸಾಯುತ್ತಿಲ್ಲ ಸರ್, ಅದು ಪಾರ್ಟಿ ಮಾಡುತ್ತಿದೆ'. ಹೌದು, ಇದು ಭಾಷೆಯ ಸಂಭ್ರಮದ ಕಾಲ. ಕಟ್ಟುನಿಟ್ಟಿನ ನಿಯಮಗಳ ಇಸ್ತ್ರಿ ಪೆಟ್ಟಿಗೆಯಿಂದ ಆಚೆ ಬಂದು, ಇಂಗ್ಲಿಷ್ ಈಗ ತನಗೆ ಇಷ್ಟ ಬಂದಂತೆ ಕುಣಿಯುತ್ತಿದೆ. ಒಂದು ಕಾಲದಲ್ಲಿ ಭಾಷೆ ಅಂದರೆ ಅದು ಕೇವಲ ಜ್ಞಾನದ ಪ್ರದರ್ಶನವಾಗಿತ್ತು. ಈಗ ಅದು ಕೇವಲ ಒಂದು ಭಾವನೆಯ ಎಳೆ. ಅರ್ಥವಾಗದ ಸಂಕೀರ್ಣ ಪದಗಳಿಗಿಂತ, ಅರ್ಥವಾಗುವ ಒಂದು ಪುಟ್ಟ ಚಿತ್ರ ಈಗ ಹೆಚ್ಚು ಸಂವಹನಕಾರಿ. ನಗರದ ಟ್ರಾಫಿಕ್‌ನಲ್ಲಿ ಸಿಕ್ಕಿಬಿದ್ದ ಮನುಷ್ಯನಿಗೆ ಉದ್ದನೆಯ ಕವಿತೆಗಿಂತ ಒಂದು 'ಹೃದಯದ' ಗುರುತು (Emoji) ಹೆಚ್ಚು ಸಾಂತ್ವನ ನೀಡಬಲ್ಲದು. ಭಾಷೆ ಈಗ ತನ್ನ ಭಾರವನ್ನು ಇಳಿಸಿಕೊಂಡು ಹಗುರಾಗುತ್ತಿದೆ. ಗಾಳಿಯಲ್ಲಿ ತೇಲುವ ಬಣ್ಣದ ಹಕ್ಕಿಯಂತೆ ಅದು ಎಲ್ಲರ ಮನೆಯ ಕಿಟಕಿಗಳ ಮೇಲೆ ಕುಳಿತು ಚಿಲಿಪಿಲಿ ಎನ್ನುತ್ತಿದೆ. ಇದಕ್ಕಿಂತ ದೊಡ್ಡ ಪ್ರಜಾಪ್ರಭುತ್ವ ಇನ್ನೇನು ಬೇಕು?

'ಭಾಷೆಯ ಮೇಲಿನ ಪಾಂಡಿತ್ಯಕ್ಕಿಂತ, ವಿಚಾರಗಳ ಸ್ಪಷ್ಟತೆ ಮುಖ್ಯ' ಎಂಬ ಚರ್ಚೆ ನಡೆಯುತ್ತಿದೆ. ಭಾಷೆ ಈಗ ಬರೆಯುವ ಕಲೆಯಾಗುವುದಕ್ಕಿಂತ ಹೆಚ್ಚಾಗಿ 'ಪ್ರಾಂಪ್ಟ್' (Prompt) ನೀಡುವ ಕೌಶಲವಾಗಿ ಬದಲಾಗುತ್ತಿದೆ. ಹಿಂದೆಲ್ಲ ಪತ್ರ ಬರೆಯುವಾಗ 'ಗೌರವಾನ್ವಿತರೇ...' ಎಂದು ಶುರುಮಾಡಿ, ವಿಷಯವನ್ನು ನಾಜೂಕಾಗಿ ಪದಗಳಲ್ಲಿ ಪೋಣಿಸಲು ಹರಸಾಹಸ ಪಡಬೇಕಿತ್ತು. ಆದರೆ ಈಗ, ಕೃತಕ ಬುದ್ಧಿಮತ್ತೆಯ (AI) ಮುಂದೆ ಕುಳಿತು, 'ನೋಡಪ್ಪಾ, ನನಗೊಂದು ರಜೆ ಬೇಕು, ನಮ್ಮ ಬಾಸ್ ಮೆಚ್ಚುವಂತೆ ಇಂಗ್ಲಿಷ್‌ನಲ್ಲಿ ಒಂದು ಪತ್ರ ಕೊಡು' ಎಂದು ಒಂದು ಸಾಲಿನ ಆದೇಶ ನೀಡಿದರೆ ಸಾಕು. ಮರುಕ್ಷಣವೇ ಅದು ಷೇಕ್ಸ್‌ಪಿಯರ್ ಕೂಡ ಬೆರಗಾಗುವ ಇಂಗ್ಲಿಷ್‌ನಲ್ಲಿ ಕಾಗದ ಸಿದ್ಧಪಡಿಸಿ ನಮ್ಮ ಕೈಗಿಡುತ್ತದೆ! ನಮಗೆ ಇಂಗ್ಲಿಷ್ ಬರದಿದ್ದರೂ ಪರವಾಗಿಲ್ಲ, ಅದನ್ನು ಹೇಗೆ 'ಕೆಲಸಕ್ಕೆ ಹಚ್ಚಬೇಕು' ಎನ್ನುವ ಕಲೆ ಗೊತ್ತಿದ್ದರೆ ಸಾಕು. ಅಂದರೆ, ಭಾಷೆ ಈಗ ಬರೆಯುವ ಕಲೆಯಾಗುವುದಕ್ಕಿಂತ ಹೆಚ್ಚಾಗಿ, GI ಎಂಬ ಜಿನಿಯನ್ನು ಪಳಗಿಸುವ 'ಮಂತ್ರ'ವಾಗಿ ಬದಲಾಗಿದೆ.

'ಭಾಷೆ ಮುಖ್ಯವಲ್ಲ, ವಿಚಾರ ಮುಖ್ಯ' ಎಂಬ ಚರ್ಚೆ ಎಷ್ಟು ಜೋರಾಗಿದೆಯೆಂದರೆ, ಸರಿಯಾದ ಸ್ಪೆಲ್ಲಿಂಗ್ ಬರೆಯದವನೂ ಈಗ ಅತ್ಯುತ್ತಮ ಲೇಖಕನಂತೆ ಪೋಸು ಕೊಡಬಹುದು. ಯಾಕೆಂದರೆ ಆತನ ಹಿಂದೆ 'ಪ್ರಾಂಪ್ಟ್' ಎಂಬ ಶಕ್ತಿಯಿದೆ. ಹಿಂದೆ ಜನ ಇಂಗ್ಲಿಷ್ ಕಲಿಯಲು ಡಿಕ್ಷನರಿ ಹಿಡಿದು ಕುಳಿತುಕೊಳ್ಳುತ್ತಿದ್ದರು. ಈಗ 'ಈ ಐಡಿಯಾವನ್ನು ಸರಿಯಾಗಿ ಎಐಗೆ ಹೇಳುವುದು ಹೇಗೆ?' ಎಂದು ಯೋಚಿಸುತ್ತಾ ಕುಳಿತುಕೊಳ್ಳುತ್ತಾರೆ. ಇದು ಒಂಥರಾ ಹೇಗಿದೆಯೆಂದರೆ, ಅಡುಗೆ ಮಾಡಲು ಬರದಿದ್ದರೂ ಆರ್ಡರ್ ಮಾಡುವುದು ಹೇಗೆ ಎಂದು ತಿಳಿದಿದ್ದರೆ ಹೊಟ್ಟೆ ತುಂಬಿಸಿಕೊಳ್ಳಬಹುದು ಎಂಬಂತೆ! ಭಾಷೆಯ ಮೇಲಿನ ಪಾಂಡಿತ್ಯ ಈಗ ಕೇವಲ ಅಲಂಕಾರಿಕ ವಸ್ತುವಾಗುತ್ತಿದೆ, ಆದರೆ ವಿಚಾರಗಳನ್ನು ಬಿತ್ತರಿಸುವ ಈ 'ಪ್ರಾಂಪ್ಟ್ ಕೌಶಲ' ಮಾತ್ರ ಭವಿಷ್ಯದ ಬ್ರಹ್ಮಾಸ್ತ್ರವಾಗುತ್ತಿದೆ. ಭಾಷೆಯ ಶಿಸ್ತು ಈಗ ಎಐ ಪಾಲು, ಕಲ್ಪನೆ ಮಾತ್ರ ನಮ್ಮ ಪಾಲು!

ಈಗಿನ ಕಾಲದಲ್ಲಿ 'ಶುದ್ಧ ಇಂಗ್ಲಿಷ್' ಅಥವಾ 'ಶುದ್ಧ ಕನ್ನಡ' ಮಾತನಾಡುವವರನ್ನು ಹುಡುಕುವುದು ಹಳೆ ಕಾಲದ ನಾಣ್ಯ ಹುಡುಕಿದಷ್ಟೇ. ಎಲ್ಲಿ ನೋಡಿದರೂ ಎರಡೂ ಭಾಷೆಗಳ 'ಜುಗಲ್‌ಬಂದಿ'. ಇದನ್ನು ಭಾಷಾ ತಜ್ಞರು ಗೌರವದಿಂದ 'Code-Switching' ಎನ್ನುತ್ತಾರೆ. ಇದು ಭಾಷೆಯ ವಿನಾಶವೇ ಅಥವಾ ವಿಕಾಸವೇ ಎಂಬ ಚರ್ಚೆ ಒಂದು ಕಡೆಯಿರಲಿ, ಆದರೆ ವಾಸ್ತವ ಮಾತ್ರ ತುಂಬಾ ತಮಾಷೆಯಾಗಿದೆ. ಇವತ್ತು ಯಾರಾದರೂ ಒಬ್ಬರು 'ನಾನು ಇಂದು ದೂರವಾಣಿ ಯಂತ್ರದ ಮೂಲಕ ನಿನ್ನನ್ನು ಸಂಪರ್ಕಿಸಲು ಪ್ರಯತ್ನಿಸಿದೆ, ಆದರೆ ನೀನು ಅಲಭ್ಯನಿದ್ದೆ' ಅಂದರೆ ನಮಗೆ ಅದು ಅರ್ಥವಾಗುವುದೇ ಇಲ್ಲ! ಅದರ ಬದಲು, 'ನಾನು ನಿನಗೆ ಕಾಲ್ ಮಾಡಿದ್ದೆ, ನೀನು ಸಿಗಲಿಲ್ಲ' ಅಂದ ತಕ್ಷಣ ಅರ್ಥವಾಗುತ್ತದೆ. ಇಂಗ್ಲಿಷ್ ಈಗ ನಮ್ಮ ಮೇಲೆ ಸವಾರಿ ಮಾಡುತ್ತಿಲ್ಲ, ಬದಲಾಗಿ ನಾವು ಇಂಗ್ಲಿಷನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಪಳಗಿಸಿದ್ದೇವೆ. ಭಾಷೆ ಎಂಬುದು ಹರಿಯುವ ನದಿಯಿದ್ದಂತೆ. ಅದಕ್ಕೆ ಹೊಸ ಹೊಸ ಪದಗಳ ತೊರೆ ಸೇರುತ್ತಿರಬೇಕು. ಇಂಗ್ಲಿಷ್ ಇಲ್ಲದೆ ಕನ್ನಡದ ವಾಕ್ಯ ಪೂರ್ಣಗೊಳಿಸುವುದು ಇವತ್ತು ಕಷ್ಟವಾಗಿರಬಹುದು, ಆದರೆ ಈ 'ಬೆರೆಸುವ ಕಲೆ'ಯೇ ಇಂದಿನ ಕಾಲದ ಅತಿ ದೊಡ್ಡ ಸ್ವಾರಸ್ಯ! ನಾವು ಭಾಷೆಯನ್ನು ಸಾಯಿಸುತ್ತಿಲ್ಲ, ಬದಲಾಗಿ ಅದಕ್ಕೆ ಆಧುನಿಕತೆಯ 'ಪೌಡರ್' ಹಚ್ಚಿ ರೆಡಿ ಮಾಡುತ್ತಿದ್ದೇವೆ.

ಇಂಗ್ಲಿಷ್ ಇಂದು ಕೇವಲ ಪ್ರಬಂಧ, ಕವಿತೆ, ವಿಮರ್ಶೆ ಬರೆಯುವ ಭಾಷೆಯಾಗಿ ಉಳಿದಿಲ್ಲ. ಅದು ಎಟಿಎಂ ಕಾರ್ಡ್‌ನಂತೆ ಕೆಲಸ ಮಾಡುವ ಒಂದು 'ಎಕನಾಮಿಕ್ ಟೂಲ್'. ಇವತ್ತು ಯಾರಾದರೂ ಬಂದು 'ನನಗೆ ಇಂಗ್ಲಿಷ್ ಬರಲ್ಲ, ಆದರೆ ಅದ್ಭುತವಾಗಿ ಸಾಹಿತ್ಯ ಬರೆಯಬಲ್ಲೆ' ಅಂದರೆ, ಜಗತ್ತು ಅವರನ್ನು ಒಬ್ಬ ಕಲಾವಿದನಾಗಿ ನೋಡಬಹುದು. ಆದರೆ ಅದೇ ವ್ಯಕ್ತಿ 'ನನಗೆ ಇಂಗ್ಲಿಷ್ ಬರುತ್ತೆ' ಅಂದ ತಕ್ಷಣ, ಕಂಪನಿಗಳು ಅವರಿಗೆ 'ಆಫರ್ ಲೆಟರ್' ಹಿಡಿದು ಸಾಲಿನಲ್ಲಿ ನಿಲ್ಲುತ್ತವೆ! ಇದೇ ಇಂಗ್ಲಿಷ್ ಅಧಿಪತ್ಯದ ಅಸಲಿ ಮ್ಯಾಜಿಕ್. ಇಂಗ್ಲಿಷ್ ಎಂಬುದು ಈಗಿನ ಕಾಲದ 'ಮಹಾದ್ವಾರ' ಇದ್ದಂತೆ. ಈ ಭಾಷೆಯ ಗುಟ್ಟು ಗೊತ್ತಿರುವವರಿಗೆ ಎಸಿ ರೂಮಿನ ಉದ್ಯೋಗ, ಗೊತ್ತಿಲ್ಲದವರಿಗೆ ಅನಿವಾರ್ಯವಾಗಿ ಬಿಸಿಲಿನಲ್ಲಿ ಕೆಲಸಹೀಗೊಂದು ಅಲಿಖಿತ ನಿಯಮ ಜಾರಿಯಲ್ಲಿದೆ. ಇದರಿಂದಾಗಿ ಸಮಾಜದಲ್ಲಿ ಇಂಗ್ಲಿಷ್ ಬಲ್ಲವರು ಮತ್ತು ಬಾರದವರ ನಡುವೆ ಒಂದು ದೊಡ್ಡ ಕಂದಕ ನಿರ್ಮಾಣವಾಗಿದೆ. ಇದನ್ನು ತಜ್ಞರು 'Linguistic Imperialism' ಎಂದು ಕರೆಯುತ್ತಾರೆ. ಸುಲಭವಾಗಿ ಹೇಳಬೇಕೆಂದರೆ, ಇದು ಇಂಗ್ಲಿಷ್ ಭಾಷೆಯ 'ದಾದಾಗಿರಿ'!

ಇನ್ನು ಶಿಕ್ಷಣದ ವಿಷಯಕ್ಕೆ ಬಂದರೆ, ಇದು ಎಂದಿಗೂ ಮುಗಿಯದ 'ರಿಯಾಲಿಟಿ ಶೋ'ನಂತಿದೆ. ಮನೆ ಮುಂದೆ ನಿಂತು ಭಾಷಣ ಮಾಡುವಾಗ 'ಮಾತೃಭಾಷೆಯಲ್ಲೇ ಶಿಕ್ಷಣ ಇರಬೇಕು' ಎನ್ನುವ ನಾಯಕರು, ಸಂಜೆ ತಮ್ಮ ಮಕ್ಕಳನ್ನು ಇಂಗ್ಲಿಷ್ ಮೀಡಿಯಂ ಸ್ಕೂಲ್‌ಗೆ ಬಿಡಲು ಮರೆಯುವುದಿಲ್ಲ. 'ಹೊಟ್ಟೆಗೆ ಇಂಗ್ಲಿಷ್ ಬೇಕು, ದೇವರಿಗೆ ಕನ್ನಡ ಬೇಕು' ಎಂಬ ವಿಚಿತ್ರ ದ್ವಂದ್ವದ ನಡುವೆ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಇಂಗ್ಲಿಷ್ ಬರದೇ ಇರುವ ವ್ಯಕ್ತಿ ಎಷ್ಟೇ ಬುದ್ಧಿವಂತನಾಗಿದ್ದರೂ, ಸಮಾಜ ಆತನನ್ನು ಸ್ವಲ್ಪ ಸಂಶಯದಿಂದಲೇ ನೋಡುತ್ತದೆ. ಆದರೆ ಅರೆಬರೆ ಇಂಗ್ಲಿಷ್‌ನಲ್ಲಿ 'ಕಾನ್ಫಿಡೆಂಟ್' ಆಗಿ ತಪ್ಪು ತಪ್ಪಾಗಿ ಮಾತಾಡುವವನು ದೊಡ್ಡ ಸ್ಕಾಲರ್‌ನಂತೆ ಪೋಸು ಕೊಡುತ್ತಾನೆ!

ಹಿಂದೆಲ್ಲ ಇಂಗ್ಲಿಷ್ ಎಂದರೆ ಅದು ಕೇವಲ ಒಂದು ಭಾಷೆಯಾಗಿತ್ತು, ಅಂದರೆ ನಾವು ಓದುವ ಒಂದು ಸಬ್ಜೆಕ್ಟ್ ಅಥವಾ ಮಾತನಾಡುವ ಒಂದು ಮಾಧ್ಯಮ. ಆದರೆ ಈಗಿನ ಕಾಲದಲ್ಲಿ ಇಂಗ್ಲಿಷ್ ತನ್ನ ರೂಪವನ್ನೇ ಬದಲಿಸಿಕೊಂಡು ಒಂದು 'ಜಾಗತಿಕ ಆಪರೇಟಿಂಗ್ ಸಿಸ್ಟಮ್' (Global Operating System) ಆಗಿ ಬಿಟ್ಟಿದೆ. ಅಂದರೆ, ನಿಮ್ಮ ಹತ್ತಿರ ಎಷ್ಟೇ ದೊಡ್ಡ 'ಸಾಫ್ಟ್ ವೇರ್ ' (ಅರ್ಥಾತ್ ಬುದ್ಧಿವಂತಿಕೆ) ಇದ್ದರೂ, ಅದನ್ನು ರನ್ ಮಾಡಲು ಇಂಗ್ಲಿಷ್ ಎಂಬ 'ಓಎಸ್' (ಆಪರೇಟಿಂಗ್ ಸಿಸ್ಟಮ್) ಇಲ್ಲದಿದ್ದರೆ ಕೆಲಸವೇ ನಡೆಯುವುದಿಲ್ಲ. ಇದು ಒಂಥರಾ ಕಂಪ್ಯೂಟರ್‌ನಲ್ಲಿ ವಿಂಡೋಸ್ ಅಥವಾ ಆಂಡ್ರಾಯ್ಡ್ ಇದ್ದಂತೆ. ನೀವು ಜಗತ್ತಿನ ಯಾವುದೇ ಮೂಲೆಗೆ ಹೋದರೂ, ಅಲ್ಲಿನ ಸ್ಥಳೀಯ ಭಾಷೆ ಬೇರೆಯೇ ಇರಬಹುದು, ಆದರೆ ಒಳಗಿನ ಸಿಸ್ಟಮ್ ಮಾತ್ರ ಇಂಗ್ಲಿಷ್‌ನಲ್ಲೇ ಇರುತ್ತದೆ. ಒಬ್ಬ ಜಪಾನಿ ಮತ್ತು ಒಬ್ಬ ಬ್ರೆಜಿಲಿಯನ್ ಸಂಧಿಸಿದರೆ, ಅವರು ಪರಸ್ಪರ ಮಾತನಾಡಲು ಬಳಸುವ 'ಸಾಫ್ಟ್‌ವೇರ್' ಇಂಗ್ಲಿಷ್ . ತಮಾಷೆಯೆಂದರೆ, ಇಬ್ಬರಿಗೂ ಆ ಭಾಷೆ ಸರಿಯಾಗಿ ಬರದಿದ್ದರೂ, ಆ 'ಓಎಸ್' ಮಾತ್ರ ಹೇಗೋ ಮ್ಯಾನೇಜ್ ಮಾಡಿಬಿಡುತ್ತದೆ!

ಈಗಿನ ಕಾಲದಲ್ಲಿ ಇಂಗ್ಲಿಷ್ ಬರದೇ ಇರುವುದು ಎಂದರೆ ನಿಮ್ಮ 'ಸಾಫ್ಟ್‌ವೇರ್' ಅಪ್‌ಡೇಟ್ ಆಗಿಲ್ಲ ಎಂದರ್ಥ. ಹಿರಿಯ ತಲೆಮಾರಿನವರು ಇಂಗ್ಲಿಷ್ ಅನ್ನು 'ಪರ್ಫೆಕ್ಟ್' ಆಗಿ ಬಳಸಲು ಪ್ರಯತ್ನಿಸುತ್ತಿದ್ದರು. ಅಂದರೆ ಅದು ಹಳೆಯ ಕಾಲದ ಮೈಕ್ರೋಸಾಫ್ಟ್ ಡಾಸ್ (MS-DOS) ಇದ್ದಂತೆ ಒಂದು ಕಮಾಂಡ್ ತಪ್ಪಾದರೂ ಎರರ್ ತೋರಿಸುತ್ತಿತ್ತು. ಆದರೆ ಈಗಿನ ಇಂಗ್ಲಿಷ್ ಪಕ್ಕಾ ಮಾಡರ್ನ್ ವಿಂಡೋಸ್ ಇದ್ದಂತೆ. ನೀವು ಏನೋ ಹೇಳಲು ಹೋಗಿ ಇನ್ನೇನೋ ಅಂದರೂ, ಅದು 'Did you mean this?' ಎಂದು ಕೇಳಿ ತಾನೇ ಸರಿಪಡಿಸಿಕೊಂಡು ಕೆಲಸ ಮುಗಿಸಿಬಿಡುತ್ತದೆ. ಇಂಗ್ಲಿಷ್ ಎಂಬ ಈ ಆಪರೇಟಿಂಗ್ ಸಿಸ್ಟಮ್‌ನ ಅತಿ ದೊಡ್ಡ ತಮಾಷೆಯೆಂದರೆ, ಇದನ್ನು ಇನ್‌ಸ್ಟಾಲ್ ಮಾಡಿಕೊಳ್ಳಲು ಈಗ ಯಾರಿಗೂ ಕಷ್ಟವಾಗುತ್ತಿಲ್ಲ. ಸಣ್ಣ ಮಕ್ಕಳು ಕೂಡ ಡೌನ್‌ಲೋಡ್ ಮಾಡಿಕೊಂಡವರಂತೆ ಸ್ಕ್ರೀನ್ ಮುಂದೆ ಕುಳಿತು 'Hello guys, welcome to my vlog' ಎಂದು ಇಂಗ್ಲಿಷ್ ಓಎಸ್‌ನಲ್ಲಿ ಮಿಂಚುತ್ತಿದ್ದಾರೆ. ಭಾಷೆ ಈಗ ಸಾಹಿತ್ಯದ ತೂಕವನ್ನು ಕಳೆದುಕೊಂಡು ಸಂವಹನದ 'ಡ್ರೈವರ್' ಆಗಿ ಬದಲಾಗಿದೆ. ಸಮಾಜದಲ್ಲಿ ನಿಮ್ಮ ಸ್ಟೇಟಸ್ ಅಥವಾ ನಿಮ್ಮ ಕೆಲಸದ ವೇಗ ಎಲ್ಲವೂ ಈ ಇಂಗ್ಲಿಷ್ ಓಎಸ್ ಮೇಲೆ ನಿಂತಿದೆ. ಒಟ್ಟಿನಲ್ಲಿ, ಇಂಗ್ಲಿಷ್ ಈಗ ಬಾಯಿ ಮಾತಿನ ಭಾಷೆಯಲ್ಲ, ಅದು ಇಡೀ ಜಗತ್ತನ್ನು ರನ್ ಮಾಡುತ್ತಿರುವ ಒಂದು ಡಿಜಿಟಲ್ ಆತ್ಮ!

ಇತಿಹಾಸದ ಚರ್ಚೆಗಳು ನಡೆಯಲಿ, ಆದರೆ ಅಸತ್ಯದ ನಿರ್ಮಾಣ ಬೇಡ !

ಪ್ರತಿಧ್ವನಿ
ವಿನಯ ಶಿರಹಟ್ಟಿಮಠ
vveditoped@gmail.com

'ವಿಶ್ವವಾಣಿ' ಪತ್ರಿಕೆಯಲ್ಲಿ ರವಿ ಹಂಜ್ ಅವರು ಬರೆದಿರುವ 'ಇದು ಬಸವಣ್ಣನ ಹೆಸರು ಬಳಸಿ ಅವನಿಗೆ ಮಾಡುತ್ತಿರುವ ಅಪಚಾರ' ! ಎಂಬ ಲೇಖನವು ಬಸವ ತತ್ವದ ಅನುಯಾಯಿಗಳಲ್ಲಿ ಹಾಗೂ ನೈಜ ಇತಿಹಾಸದ ಅರಿವಿರುವವರಲ್ಲಿ ತೀವ್ರ ಅಸಮಾಧಾನ ಮೂಡಿಸಿದೆ. ಮೇಲ್ನೋಟಕ್ಕೆ ಇದು ಇಂದಿನ ಕೆಲವು ಸಂಘಟನೆಗಳ ಕಾರ್ಯವೈಖರಿಯ ಮೇಲಿನ ಟೀಕೆಯಂತೆ ಕಂಡರೂ, ಆಳವಾಗಿ ಗಮನಿಸಿದಾಗ ಇದು ಹನ್ನೆರಡನೇ ಶತಮಾನದ ಶರಣ ಪರಂಪರೆ, ಲಿಂಗಾಯತ ಧರ್ಮ ಮತ್ತು ಬಸವಣ್ಣನವರ ಸಾಮಾಜಿಕ ಸುಧಾರಣೆಗಳ ಬಗ್ಗೆ ವ್ಯವಸ್ಥಿತವಾಗಿ ಕೀಳರಿಮೆ ಮೂಡಿಸುವ ಪ್ರಯತ್ನವಾಗಿ ಗೋಚರಿಸುತ್ತದೆ. ಇತಿಹಾಸವನ್ನು ಭಾವುಕತೆಯಿಂದಲೋ, ಪೂರ್ವಗ್ರಹ ಪೀಡಿತರಾಗಿಯೋ ಅಥವಾ ಮೇಲುಸ್ತರದ ವಿಮರ್ಶೆಯಿಂದಲೋ ಅಳೆಯಲು ಸಾಧ್ಯವಿಲ್ಲ. ರವಿ ಹಂಜ್ ಅವರ ಲೇಖನವು 12ನೇ ಶತಮಾನದ ಬೃಹತ್ ಸಾಮಾಜಿಕ ಕ್ರಾಂತಿಯನ್ನು ಅತ್ಯಂತ ಸಂಕುಚಿತ ಮತ್ತು ವ್ಯಕ್ತಿನಿಷ್ಠ ದೃಷ್ಟಿಕೋನದಿಂದ ನೋಡುವ ಒಂದು ಪ್ರಯತ್ನವಾಗಿದೆ.

ಬಸವಣ್ಣನವರ ಕಾಯಕ ಮತ್ತು ದಾಸೋಹ ತತ್ವಗಳು ಕೇವಲ ತಾತ್ಕಾಲಿಕ ಪ್ರತಿಕ್ರಿಯೆಯಾಗಿರಲಿಲ್ಲ. ಅದೊಂದು ಸುಭದ್ರವಾದ, ಶೋಷಣೆಮುಕ್ತ ಸಮಾಜವನ್ನು ಕಟ್ಟುವ ಬೃಹತ್ ಸಾಂಸ್ಥಿಕ ಪ್ರಯತ್ನವಾಗಿತ್ತು. ಇಂತಹ ಗಟ್ಟಿ ಐತಿಹಾಸಿಕ ಪುರಾವೆಗಳನ್ನು ಬದಿಗೊತ್ತಿ, ಇಂದಿನ ಶರಣ ಪರಂಪರೆಯ ಚಿಂತಕರನ್ನು 'ತ್ಯಾಜ್ಯ ಸಾಹಿತಿಗಳು' ಅಥವಾ 'ಪರಿತ್ಯಕ್ತ ಸಂಶೋಧಕರು' ಎಂದು ಹೀಯಾಳಿಸುವುದು ವಾಸ್ತವವನ್ನು ಮುಚ್ಚಿಡುವ ವಿಫಲ ಯತ್ನವಷ್ಟೇ.

ವಿಶ್ವವಾಣಿ
ಇದು ಬಸವಣ್ಣನ ಹೆಸರನ್ನು ಬಳಸಿ ಅವನಿಗೆ ಮಾಡುತ್ತಿರುವ ಅಪಚಾರ!

ಲೇಖಕರು ತಮ್ಮ ಬರಹದಲ್ಲಿ ಆಧುನಿಕ ಲಿಂಗಾಯತ ಚಳುವಳಿಗಳು, ಬಸವ ಧರ್ಮ, ಬಸವ ಸಂಸ್ಕೃತಿ ಮುಂತಾದ ವೇದಿಕೆಗಳನ್ನು ಕೇವಲ ಅಧಿಕಾರ, ಕುರ್ಚಿ ಮತ್ತು ಲಾಭದ ಸ್ವಾರ್ಥಕ್ಕಾಗಿ ಸೃಷ್ಟಿಯಾದ 'ಈಡಿಪಸ್ ನಾಟಕ' ಎಂದು ಜರಿದಿದ್ದಾರೆ. ಇದು ಸತ್ಯಕ್ಕೆ ಸಂಪೂರ್ಣ ದೂರವಾದ ವಿಚಾರ. ಎಂಟನೂರು ವರ್ಷಗಳಿಗೂ ಹೆಚ್ಚು ಕಾಲ ಮರೆಮಾಚಲ್ಪಟ್ಟಿದ್ದ, ಮತ್ತು ಪಟ್ಟಭದ್ರ ಹಿತಾಸಕ್ತಿಗಳಿಂದ ವ್ಯವಸ್ಥಿತವಾಗಿ ತುಳಿಯಲ್ಪಟ್ಟಿದ್ದ ಶರಣ ಸಾಹಿತ್ಯವನ್ನು ಮರಳಿ ಸಮಾಜದ ಮುಖ್ಯವಾಹಿನಿಗೆ ತರುವ ಪ್ರಾಮಾಣಿಕ ಪ್ರಯತ್ನಗಳನ್ನು ಕೇವಲ 'ಅಂಗಡಿ ವ್ಯಾಪಾರ' ಎಂದು ಕರೆಯುವುದು ಶೋಚನೀಯ. ಯಾವುದೇ ಒಂದು ಬೃಹತ್ ಸಾಮಾಜಿಕ ದರ್ಶನವು ಮುಂದಿನ ತಲೆಮಾರುಗಳಿಗೆ ತಲುಪಬೇಕಾದರೆ, ಅದಕ್ಕೊಂದು ಸಾಂಸ್ಥಿಕ ರೂಪದ ಅಗತ್ಯವಿರುತ್ತದೆ. ಇಂದಿನ ಬಸವಪರ ಸಂಘಟನೆಗಳು ಕೇವಲ ಮಠಮಾನ್ಯಗಳ ಸ್ಥಾಪನೆಗಾಗಿ ಹುಟ್ಟಿಕೊಂಡಿದ್ದಲ್ಲ; ಬದಲಾಗಿ, ಮನುಷ್ಯರ ನಡುವೆ ಜಾತಿ, ವರ್ಗ ಮತ್ತು ವರ್ಣದ ಗೋಡೆಗಳನ್ನು ಕೆಡವಿ ಸಮಾನತೆಯ ಸಂದೇಶವನ್ನು ಸಾರಿದ ಬಸವಣ್ಣನವರ ಅಪ್ಪಟ ಇತಿಹಾಸವನ್ನು ಜನಸಾಮಾನ್ಯರಿಗೆ ತಲುಪಿಸುವ ಅನಿವಾರ್ಯತೆಯಿಂದ ರೂಪುಗೊಂಡಿವೆ.

ಬಸವಣ್ಣನವರ ಗುರಿ ಇದ್ದದ್ದು ಅಂಧಾನುಕರಣೆ ಮತ್ತು ಮೌಢ್ಯಗಳ ಭಂಜನೆಯೇ ಹೊರತು, ಸಮಾಜವನ್ನು ಕಟ್ಟುವ ಶಕ್ತಿಗಳ ಭಂಜನೆಯಲ್ಲ. ಅಂದಿನ ವ್ಯವಸ್ಥೆಯಲ್ಲಿದ್ದ ಡಾಂಭಿಕ ಭಕ್ತಿಯನ್ನು, ಕಪಟ ಆಚರಣೆಗಳನ್ನು ವಿಡಂಬಿಸಲು ಬಳಸಿದ ವಚನಗಳನ್ನು, ಇಂದು ಅದೇ ಶೋಷಣೆಯ ವಿರುದ್ಧ ಧ್ವನಿಯೆತ್ತುತ್ತಿರುವ ಸಮುದಾಯದ ಮೇಲೆಯೇ ಪ್ರಯೋಗಿಸುವುದು ಐತಿಹಾಸಿಕ ವಿಪರ್ಯಾಸ. ವಚನಗಳ ಭಾಷಿಕ ಹಿನ್ನೆಲೆಯನ್ನು ಅರಿಯದೆ ಕೇವಲ ಮೇಲ್ನೋಟದ ಅರ್ಥವನ್ನು ಕಲ್ಪಿಸುವುದು ಖಂಡಿತವಾಗಿಯೂ ಸಂಶೋಧನಾತ್ಮಕ ವಿಧಾನವಲ್ಲ.



ಬಸವಣ್ಣನವರು ಕೇವಲ ಸಾಮಾಜಿಕ ಕ್ರಾಂತಿಯ ಹರಿಕಾರರಷ್ಟೇ ಆಗಿರಲಿಲ್ಲ, ಅವರು ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಯ ಅತಿ ದೊಡ್ಡ ಶಕ್ತಿ ಎನ್ನುವುದನ್ನು ನಾವು ಮರೆಯಬಾರದು. ಹನ್ನೆರಡನೇ ಶತಮಾನದಲ್ಲಿ ಸಂಸ್ಕೃತದಂತಹ ಭಾಷೆಗಳ ಪ್ರಭಾವಳಿಯ ನಡುವೆ, ಸಾಮಾನ್ಯ ಜನರ ಆಡುಭಾಷೆಯಾದ ಕನ್ನಡದಲ್ಲಿ, ಅದೂ ಸ್ಥಳೀಯ ಉಪಭಾಷೆಗಳ ಸೊಗಡನ್ನು ಉಳಿಸಿಕೊಂಡು ವಚನಗಳನ್ನು ರಚಿಸಿದ್ದು ಅಂದಿನ ದಿನಮಾನದ ಅತಿದೊಡ್ಡ ಭಾಷಿಕ ಕ್ರಾಂತಿ. ಅಂದಿನ ಶರಣರು ತಮ್ಮ ದೈನಂದಿನ ಕಾಯಕದ ಪರಿಭಾಷೆಗಳನ್ನು ಸಾಹಿತ್ಯದ ಉನ್ನತ ಮಟ್ಟಕ್ಕೆ ಏರಿಸಿದರು. ಹೀಗೆ ಕನ್ನಡ ಭಾಷೆ ಮತ್ತು ಶ್ರಮಿಕರ ಅಸ್ಮಿತೆಯನ್ನು ಒಟ್ಟಿಗೆ ಕಟ್ಟಿದ ಬಸವಣ್ಣನವರ ಪರಂಪರೆಯನ್ನು, ಕೇವಲ ಇಂದಿನ ರಾಜಕೀಯ ಲಾಭ-ನಷ್ಟಗಳ ಲೆಕ್ಕಾಚಾರದಲ್ಲಿ ವಿಮರ್ಶಿಸುವುದು ಆ ಮಹಾನ್ ಚೇತನಕ್ಕೆ ಮಾಡುವ ನಿಜವಾದ ಅಪಚಾರ. ಶರಣರ ಸಾಹಿತ್ಯದಿಂದಲೇ ಕನ್ನಡ ಭಾಷೆ ತನ್ನ ನೈಜ ಜೀವಂತಿಕೆಯನ್ನು ಪಡೆದುಕೊಂಡಿತು ಎನ್ನುವ ಭಾಷಿಕ ಚರಿತ್ರೆಯನ್ನು ಈ ಅಪಪ್ರಚಾರಕರು ಅನುಕೂಲಾರ್ಥವಾಗಿ ಮರೆತಿದ್ದಾರೆ.

ಬಸವಣ್ಣನವರು ಕಟ್ಟಿದ ಅನುಭವ ಮಂಟಪವು ವಿಶ್ವದ ಮೊಟ್ಟಮೊದಲ ಪ್ರಜಾಪ್ರಭುತ್ವದ ಸಂಸತ್ತು. ಕಾಯಕವೇ ಕೈಲಾಸ ಎಂಬ ಪರಿಕಲ್ಪನೆಯ ಮೂಲಕ ಅವರು ಶ್ರಮಿಕ ವರ್ಗಕ್ಕೆ, ಮಹಿಳೆಯರಿಗೆ, ಮತ್ತು ತಳ ಸಮುದಾಯಗಳಿಗೆ ನೀಡಿದ ಘನತೆ ಅಸಾಮಾನ್ಯವಾದದ್ದು. ಇಂತಹ ಅಗಾಧವಾದ ಕೊಡುಗೆಯನ್ನು ಕೇವಲ ಸೀಮಿತ ಚೌಕಟ್ಟಿನಲ್ಲಿ ಬಂಧಿಸಿ, ಅವರ ಅನುಯಾಯಿಗಳು ಇಂದು ನಡೆಸುತ್ತಿರುವ ಅಸ್ಮಿತೆಯ ಹೋರಾಟವನ್ನು ದೂಷಿಸುವುದು ಸರಿಯಲ್ಲ. ಇಂದಿನ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಸಣ್ಣ ಪುಟ್ಟ ವೈಯಕ್ತಿಕ ಲೋಪಗಳನ್ನು ಮುಂದಿಟ್ಟುಕೊಂಡು, ಇಡೀ ಬಸವ ತತ್ವವನ್ನೇ, ಮತ್ತು ಆ ತತ್ವವನ್ನು ಉಸಿರಾಗಿಸಿಕೊಂಡು ಮುನ್ನಡೆಯುತ್ತಿರುವ ಲಕ್ಷಾಂತರ ಅನುಯಾಯಿಗಳ ಬದ್ಧತೆಯನ್ನು ಪ್ರಶ್ನಿಸುವುದು ದುರುದ್ದೇಶಪೂರಿತವಾಗಿದೆ.

ಇತಿಹಾಸವನ್ನು ಒರೆಗೆ ಹಚ್ಚಬೇಕಾದದ್ದು ಕೇವಲ ವಾಕ್ಚಾತುರ್ಯದ ಭಾವನಾತ್ಮಕ ಲೇಖನಗಳಿಂದಲ್ಲ, ಬದಲಾಗಿ ವಸ್ತುನಿಷ್ಠ ಮತ್ತು ವೈಜ್ಞಾನಿಕ ಆಧಾರಗಳಿಂದ. ಬಸವಣ್ಣನವರ ವ್ಯಕ್ತಿತ್ವ ಮತ್ತು ಅವರ ಸಾಮಾಜಿಕ ಸುಧಾರಣೆಗಳು ಯಾವುದೇ ಕಾಲಘಟ್ಟದ ಕುತರ್ಕಗಳಿಗಿಂತ ಮಿಗಿಲಾದವು. ಇಂದು ಬಸವಣ್ಣನವರ ಹೆಸರಿನಲ್ಲಿ ನಡೆಯುತ್ತಿರುವ ಹೋರಾಟಗಳು ಕೇವಲ ಅಧಿಕಾರದ ಹಪಾಹಪಿಯಲ್ಲ, ಬದಲಾಗಿ ಶತಮಾನಗಳಿಂದ ನಡೆದು ಬಂದಿರುವ ಸಾಂಸ್ಕೃತಿಕ ಶೋಷಣೆಯ ವಿರುದ್ಧದ ನಿರಂತರ ಜಾಗೃತಿಯಾಗಿದೆ. ಬಸವ ತತ್ವದ ನೈಜ ವಾರಸುದಾರರನ್ನು ಅಪಹಾಸ್ಯ ಮಾಡುವ ಇಂತಹ ಲೇಖನಗಳು, ಕಾಲದ ಕಸದ ಬುಟ್ಟಿಗೆ ಸೇರುತ್ತವೆಯೇ ವಿನಃ ಇತಿಹಾಸದ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ. ನಮಗೆ ಬೇಕಾಗಿರುವುದು ಬಸವಣ್ಣನವರ ಕ್ರಾಂತಿಕಾರಕ ಹೆಜ್ಜೆಗಳ ವೈಜ್ಞಾನಿಕ ಮರುಶೋಧನೆಯೇ ಹೊರತು, ಹಳೆಯ ಶೋಷಕ ವ್ಯವಸ್ಥೆಯನ್ನು ಪರೋಕ್ಷವಾಗಿ ಪೋಷಿಸುವ ಇಂತಹ ಅಪಪ್ರಚಾರಗಳಲ್ಲ. ಸಕಲ ಜೀವಾತ್ಮರಿಗೆ ಲೇಸಾಗಲೆಂದು, ಅನ್ನದಾತನಿಗೆ/ಕಾಯಕ ಜೀವಿಗಳಿಗೆ ಜಯವಾಗಲೆಂದು ಪ್ರಾರ್ಥಿಸುತ್ತ, ಬಸವಾದಿ ಶರಣರಿಗೆ ಶರಣಾರ್ಥಿ ಹೇಳುವೆ.

ಭಟ್ಟರ್ ಸ್ಕಾಚ್

- **ಭಾಸ್ಕರ ಹೆಗಡೆ, ಶಿವಮೊಗ್ಗ**
ಭಟ್ರೇ, ಸಾಲಗಾರನಿಗೆ ಅತಿ ಹೆಚ್ಚು ಭಯವಾಗುವುದು ಯಾವಾಗ?
– **ಅಪ್ಪಿತಪ್ಪಿ ಫೋನ್ ರಿಂಗ್ ಆದಾಗ!**

- **ಸಂದೀಪ ಪ್ರಭು, ಗುಬ್ಬಿ**
ಭಟ್ರೇ, ಲವ್ ಮ್ಯಾರೇಜ್ ಅಂದರೆ ಏನು?
– **ತಾನೇ ಹಳ್ಳ ತೋಡಿ ಅದಕ್ಕೆ ಬಣ್ಣದ ಲೇಪನ ಹಚ್ಚಿ ಬೀಳುವುದು.**

- **ಶಾರದಾ ಸೂಗೂರು, ಬಳ್ಳಾರಿ**
ಭಟ್ರೇ, ವಿಜ್ಞಾನಕ್ಕೂ, ಪತ್ನಿಯ ಕೋಪಕ್ಕೂ ಏನು ವ್ಯತ್ಯಾಸ?
– **ವಿಜ್ಞಾನಕ್ಕೆ ಕಾರಣ ತಿಳಿದಿರುತ್ತದೆ, ಪತ್ನಿಯ ಕೋಪಕ್ಕೆ ಕಾರಣ ಹುಡುಕುವುದರಲ್ಲೇ ವಿಜ್ಞಾನಿಗಳು ನಿವೃತ್ತರಾಗಬಹುದು!**

- **ವೆಂಕಟರಮಣ ಮೇಸ್ತ, ಹೊನ್ನಾವರ**
ಭಟ್ರೇ, ಕನ್ನಡಿ ಮತ್ತು ಪತ್ನಿ ಎರಡರಲ್ಲಿ ಯಾವುದು ವಾಸಿ?
– **ಕನ್ನಡಿ ವಾಸಿ, ಏಕೆಂದರೆ ಅದು ನಾವು ಕೂಗಾಡಿದಾಗ ತಿರುಗಿ ಕೂಗಾಡುವುದಿಲ್ಲ!**

- **ವೈಶಾಲಿ, (ಇಮೇಲ್ ಮೂಲಕ)**
ಭಟ್ರೇ, ಒಬ್ಬ ಮನುಷ್ಯ ಅತಿ ಹೆಚ್ಚು ಬುದ್ಧಿವಂತನಾಗಿರುವುದು ಯಾವಾಗ?
– **ಮದುವೆಯಾಗುವ ನಿರ್ಧಾರ ತೆಗೆದುಕೊಳ್ಳುವ ಮೊದಲು ಮಾತ್ರ!**

- **ರಾಮು, ಭದ್ರಾವತಿ**
ಭಟ್ರೇ, ಶಾಲಾ ದಿನಗಳಿಗೂ ಮತ್ತು ಆಫೀಸ್ ದಿನಗಳಿಗೂ ಇರುವ ವ್ಯತ್ಯಾಸವೇನು?
– **ಶಾಲೆಯಲ್ಲಿ ತಪ್ಪು ಮಾಡಿದರೆ ಶಿಕ್ಷೆ ಸಿಗುತ್ತಿತ್ತು, ಆಫೀಸಿನಲ್ಲಿ ಕೆಲಸ ಚೆನ್ನಾಗಿ ಮಾಡಿದರೆ ಹೆಚ್ಚಿನ ಕೆಲಸದ ಶಿಕ್ಷೆ ಸಿಗುತ್ತದೆ!**

- **ಪಿಕೆ, ಕುಣಿಗಲ್**
ಭಟ್ರೇ, ಸೋಷಿಯಲ್ ಮೀಡಿಯಾದಲ್ಲಿ ಎಲ್ಲರೂ ಯಾಕೆ ಖುಷಿಯಾಗಿರುತ್ತಾರೆ?
– **ಅಲ್ಲಿ ಫಿಲ್ಟರ್ ಹಾಕಲು ಅವಕಾಶವಿದೆ, ಜೀವನಕ್ಕಲ್ಲ!**

- **ವಿರೂಪಾಕ್ಷ ಹಲಕರ್ಣಿ, ಧಾರವಾಡ**
ಭಟ್ರೇ, ಗಂಡನಿಗೆ 'ಸ್ವಾತಂತ್ರ್ಯ' ಸಿಗುವುದು ಯಾವಾಗ?
– **ಪತ್ನಿ ತವರು ಮನೆಗೆ ಹೋದಾಗ ಮತ್ತು ಸಿಂಕ್‌ನಲ್ಲಿರುವ ಪಾತ್ರೆಗಳು ಮುಗಿದಾಗ!**

- **ಸುಬ್ಬಣ್ಣ, ಜಯಪುರ**
ಭಟ್ರೇ, ಪರೀಕ್ಷೆ ಮುಗಿದ ಮೇಲೆ ವಿದ್ಯಾರ್ಥಿಗಳ ಮುಖ ಯಾಕೆ ಹೊಳೆಯುತ್ತದೆ?
– **ಯಾಕೆಂದರೆ ಅವರಿಗೆ ಇನ್ನು ಆರು ತಿಂಗಳ ಕಾಲ ಪುಸ್ತಕಗಳನ್ನು ಮುಟ್ಟುವ ಭಯವಿರುವುದಿಲ್ಲ!**

ದೇವರ ವರ, ಕಾಡುಮಾವಿನ ಮರ!

ಒಂದು ಹಣ್ಣು ತಿಂದರೆ ಸಾಕೆ? ಹಣ್ಣಿನ ರುಚಿ ನಿಮ್ಮನ್ನು ಸಂಪೂರ್ಣ ಆವರಿಸಿಕೊಳ್ಳಬೇಕೆಂದರೆ ಹತ್ತಾದರೂ ತಿನ್ನಬೇಕು. ಕಾಟುಮಾವು ಕನಿಷ್ಠ ಇಪ್ಪತ್ತು. ಹಣ್ಣಿನ ರಸ ಕೈಯನ್ನೆಲ್ಲ ಒದ್ದೆಯಾಗಿಸಿ, ಮಣಿಕಟ್ಟನ್ನು ಹಾದು, ಮೊಣಕೈಯವರೆಗೂ ಇಳಿಯಬೇಕು. ಆಗ ಕೈಯನ್ನು ಮೊಣಕೈಯಿಂದ ಅಂಗೈವರೆಗೂ ಸು...ರ್ರನೆ ಆಗಾಗ ನೆಕ್ಕಿಕೊಳ್ಳಬೇಕು.

ಕಾಡುದಾರಿ
ಹರೀಶ್ ಕೇರ
vveditoped@gmail.com

ನಡುಬೇಸಿಗೆಯಲ್ಲಿ ಮಲೆನಾಡಿನ ಗದ್ದೆ ಬದು, ತೋಟದ ಬದಿ, ಹೊಳೆಯಂಚು, ಕಾಡಿನ ನಡುವೆ ಬೆಳೆದು ಉದ್ದೋಉದ್ದಕ್ಕೆ ನಿಂತ ಕಾಡುಮಾವಿನ ಮರದ ಕೆಳಗೆ ನಿಂತೋ ಕುಳಿತೋ ಧ್ಯಾನ ಮಾಡುವ ಸುಖ ನಿಮಗೆ ಗೊತ್ತೆ? ಈ ಧ್ಯಾನದಲ್ಲಿ ಯಾವ ದೇವರೂ ಸುಂದರಿಯೂ ಇರುವುದಿಲ್ಲ. ಬದಲು ಪುಷ್ಕಳವಾಗಿ ಬೆಳೆದು, ಅಲ್ಲಲ್ಲಿ ತುಸು ಹಳದಿ ಬಣ್ಣಕ್ಕೆ ತಿರುಗಿದ ಗಾಢ ಹಸಿರಿನ ಮಾವು ಮೇಲಿನಿಂದ ತೊಟ್ಟು ಕಳಚಿ ಯಾವಾಗ ಧರೆಗೆ ಉದುರುತ್ತದೆ ಎಂಬುದೊಂದೇ. ಕತ್ತೆತ್ತಿದರೆ, ಆಕಾಶದವರೆಗೂ ಬೆಳೆದು ನಿಂತ ಆ ಮರದಲ್ಲಿ ಹಣ್ಣುಗಳೇ ಕಾಣಿಸವು. ಆದರೆ, ಜೋರಾಗಿ ಗಾಳಿ ಬೀಸಿದಾಗೊಮ್ಮೆ ಫಟ್-ಫಟ್ ಎಂದು ನೆಲಕ್ಕುದುರುವ ಈ ಹಣ್ಣುಗಳ ತೊಟ್ಟಿನಲ್ಲಿ ಆಗತಾನೆ ಬಿಟ್ಟ ಸೊನೆ ಹನಿಯಾಗಿರುತ್ತದೆ. ಅದಕ್ಕೆ ಅದರದೇ ಸೆಳೆಯುವ ಪರಿಮಳ.

ಈ ಹಣ್ಣನ್ನು ತಿನ್ನುವ ಬಗೆ ವಿಧವಿಧ. ಹಾಗೇ ತೊಟ್ಟು ಕಚ್ಚಿ ತುಂಡು ಮಾಡಿ ಎಸೆದು, ತುಟಿ ದುಂಡಗೆ ಮಾಡಿ ಒಳಗಿನ ತಿರುಳನ್ನು ಹೀರಿ ಬಾಯಿಗೆ ತುಂಬಿಸಿಕೊಳ್ಳುವುದು ಉತ್ತಮ. ಸಿಪ್ಪೆಯನ್ನು ಹಲ್ಲಿನಿಂದ ಎಳೆದು ಬಿಡಿಸಿ ಅದಕ್ಕೆ ಅಂಟಿಕೊಂಡಿರುವ ತಿರುಳನ್ನು ಸೀಪಿ, ನಂತರ ಗೊರಟನ್ನು ಆಮೂಲಾಗ್ರವಾಗಿ ಸೀಪುವುದು ಮಧ್ಯಮ. ಚೂರಿಯಿಂದ ಕತ್ತರಿಸಿ ಹೋಳು ಮಾಡಿ ತಿನ್ನುವುದು ಅಧಮ. ಮೊನ್ನೆ ಯಾರದೋ ಮನೆಗೆ ಹೋಗಿದ್ದೆ. ನೀಟಾಗಿ ಕತ್ತರಿಸಿದ್ದ ಮಾವಿನ ಹೋಳುಗಳನ್ನು ತಟ್ಟೆಯಲ್ಲಿಟ್ಟು ತಂದು 'ಒಳ್ಳೆ ರಸಪುರಿ ಮಾರಾಯರೆ, ತಿನ್ನಿ' ಎಂದು ಮುಂದಿಟ್ಟರು. ಆಯತ ಮತ್ತು ಚೌಕಾಕಾರದ ಆ ತುಂಡುಗಳ ಜತೆಗೆ ಫೋರ್ಕು. ಅವರ ಮಕ್ಕಳು ನಾಜೂಕಾಗಿ ಹೋಳನ್ನು ಫೋರ್ಕಿನಲ್ಲಿ ಎತ್ತಿಕೊಂಡು ತುಟಿಗಳಿಗೆ ತಾಗದಂತೆ ಬಾಯಿಗೆಸೆದುಕೊಂಡು ಎದ್ದು ಹೋದರು. ಅದನ್ನು ನೋಡಿ ಬದುಕಿನ ಮೇಲೆಯೇ ಜಿಗುಪ್ಸೆ ಉಕ್ಕಿಬಂತು.

ಮಾವಿನ ಹಣ್ಣನ್ನು ಹೀಗೂ ತಿನ್ನುವ ಪಾಖಂಡಿಗಳುಂಟೇ? ಪಪ್ಪಾಯಿಯನ್ನು ಹೀಗೆ ತಿಂದರೆ ಸಮ. ಉಳಿದ ಹಣ್ಣುಗಳ ಕತೆ ಏನೇ ಇರಲಿ. ಮಾವಿನ ಹಣ್ಣನ್ನು ತಿನ್ನಬೇಕಾದ ರೀತಿಯೇ ಬೇರೆ. ಚಮಚ, ಫೋರ್ಕುಗಳನ್ನು ಇದರ ಜತೆ ಜೋಡಿಸುವುದು ಹೀನಾಯ. ಮಾವು ಯಾವುದೇ ಜಾತಿಯದಾಗಿರಲಿ, ಅದನ್ನು ಬುಟ್ಟಿಯಲ್ಲಿಯೇ ತಂದಿಡಬೇಕು. ಸಣ್ಣಗಾತ್ರದ ಕಾಟು ಮಾವು ಆಗಿದ್ದರೆ, ಕನಿಷ್ಠ ನೂರು ಇರತಕ್ಕದ್ದು. ತೊಳೆದಿರಲೇಬೇಕೆಂದಿಲ್ಲ. ಮೊದಲು ತೊಟ್ಟು ಮುರಿಯುವ ಕೆಲಸ. ಮಾವಿನ ಕಾಯಿಯ ತೊಟ್ಟು ಮುರಿಯುವಾಗ ಅದರಿಂದ ಬೆಳ್ಳಗಿನ ಸೊನೆ ಸಿರ್ರನೆ ಉಕ್ಕಿ ಹಾರುತ್ತದೆ. ಉಪ್ಪಿನಕಾಯಿಗೆ ಮಿಡಿ ಆಯುವವರಿಗೆ ಈ ವಿಚಾರ ಚೆನ್ನಾಗಿ ಗೊತ್ತು. ಹಣ್ಣು ಆ ವಿಚಾರದಲ್ಲಿ ಸಾಧು. ಮತ್ತೆ ಮಾವಿನ ಹಣ್ಣಿನಲ್ಲಿ ತೊಟ್ಟು ಮತ್ತು ಓಟೆ ಮಾತ್ರವೇ ತ್ಯಾಜ್ಯ. ಉಳಿದದ್ದೆಲ್ಲ ಭೋಜ್ಯ.

ಗೊರಟು ಅಲಿಯಾಸ್ ಸಿಪ್ಪೆಯಲ್ಲಿ ತಿರುಳನ್ನು ಬಿಡುವವನು ಪಾಪಿ. ಗೊರಟನ್ನು ಚೀಪಿ ಕಚ್ಚಿ ಹೀರಿ ಓಟೆಯನ್ನು ದಿಟ್ಟಿಸಬೇಕು. ಆಗ ಅದು 'ನಿನ್ನ ದಮ್ಮಯ್ಯ, ಇನ್ನು ಸಾಕು ಮಾರಾಯ ಬಿಡು' ಎಂದು ಅಂಗಲಾಚಿದರೆ ಅದಕ್ಕೆ ಬಿಡುಗಡೆ ಕೊಡಬಹುದು ಎಂದರ್ಥ. ಆಗಲೂ ಹಾಗೇ ಅದನ್ನು ಬಿಸಾಡುವಂತಿಲ್ಲ. ನಿಮ್ಮ ತಮ್ಮನೋ ತಂಗಿಯೋ ಹತ್ತಿರದಲ್ಲಿದ್ದರೆ ಅವರನ್ನು ಕರೆದು, ಅವರು 'ಓ' ಎಂದರೆ, 'ಹಾಗಿದ್ದರೆ ಓಟೆ ಜತೆ ಓಡು' ಎಂದು ಅದನ್ನು ದೂರ ಬಿಸಾಕಿ ಅವರನ್ನು 'ಕೊರಂಟು' ಮಾಡುವ ಸೀನು ಸೃಷ್ಟಿಸಬೇಕು. ಅಲ್ಲಿಗೆ ಆಮ್ರಾಸ್ವಾದನದ ಒಂದು ಅಧ್ಯಾಯ ಸಂಪೂರ್ಣ. ಅಂದ ಹಾಗೆ ಓಟೆಯನ್ನು ಒಡೆದರೆ ಒಳಗೆ ಇರುವ ಬಿಳಿಯ ಭಾಗಕ್ಕೆ ಮಲೆನಾಡಿನಲ್ಲಿ 'ಕೋಗಿಲೆ' ಎನ್ನುತ್ತಾರೆ. ಯಾಕೆ ಆ ಹೆಸರೋ ತಿಳಿಯದು.

ಒಂದು ಹಣ್ಣು ತಿಂದರೆ ಸಾಕೆ? ಹಣ್ಣಿನ ರುಚಿ ನಿಮ್ಮನ್ನು ಸಂಪೂರ್ಣ ಆವರಿಸಿಕೊಳ್ಳಬೇಕೆಂದರೆ ಹತ್ತಾದರೂ ತಿನ್ನಬೇಕು. ಕಾಟುಮಾವು ಕನಿಷ್ಠ ಇಪ್ಪತ್ತು. ಹಣ್ಣಿನ ರಸ ಕೈಯನ್ನೆಲ್ಲ ಒದ್ದೆಯಾಗಿಸಿ, ಮಣಿಕಟ್ಟನ್ನು ಹಾದು, ಮೊಣಕೈಯವರೆಗೂ ಇಳಿಯಬೇಕು. ಆಗ ಕೈಯನ್ನು ಮೊಣಕೈಯಿಂದ ಅಂಗೈವರೆಗೂ ಸು...ರ್ರನೆ ಆಗಾಗ ನೆಕ್ಕಿಕೊಳ್ಳಬೇಕು. ಹಣ್ಣೆಲ್ಲ ತಿಂದಾದ ನಂತರ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡ ನಾರನ್ನು ಬಿಡಿಸುವ ಕಾರ್ಯಕ್ರಮ. ಸಾಮಾನ್ಯವಾಗಿ ಒಂದು ಕಂಬಳಿ ಹೆಣೆಯುವಷ್ಟು ನಾರು ಅಲ್ಲಿ ಸಿಕ್ಕಿಕೊಂಡಿದ್ದರೆ ಮಾತ್ರ ನೀವು ಮಾವು ತಿನ್ನುವುದರಲ್ಲಿ ಪಂಟರ್ ಎಂದರ್ಥ.

ಹಾಗೆ ಹಣ್ಣು ಮುಕ್ಕುತ್ತಿದ್ದ ಬಾಲ್ಯದ ಮುಂಜಾನೆಗಳು ನೆನಪಾಗುತ್ತವೆ. ಯಾವತ್ತೂ ಎಂಟು ಗಂಟೆಗೆ ಮುನ್ನ ಎದ್ದೇಳದ ನಮ್ಮನ್ನು ಬೇಸಿಗೆಯಲ್ಲಿ ಬೇಗನೆ ಏಳಿಸಲು ದೊಡ್ಡವರು ಕಂಡುಕೊಂಡ ಉಪಾಯ: 'ಜೀರಿಗೆ ಮಾವಿನ ಹಣ್ಣು ಆಚೆ ಮನೆಯವ್ರ ಪಾಲಾಯ್ತಾ ಅಂತ!' ಹಾಸಿಗೆಯಿಂದ ಚಂಗನೆ ನೆಗೆದು ಎರಡೇ ಗುತ್ತಿನಲ್ಲಿ ಮಾವಿನ ಮರದ ಬುಡಕ್ಕೆ ಧಾವಿಸುತ್ತಿದ್ದೆವು. ಹಿಂದಿನ ರಾತ್ರಿ ಚೆನ್ನಾಗಿ ಗಾಳಿ ಬೀಸಿದ್ದರೆ ಮರದಡಿ ರಂಗೋಲಿ ಹಾಕಿದಂತೆ ಹಣ್ಣುಗಳು. ಅದು ಇನ್ನೊಬ್ಬರ ಪಾಲಾಗುವ ಮುನ್ನವೇ ಹೆಕ್ಕಿಕೊಳ್ಳಬೇಕು. ಕೆಲವೊಮ್ಮೆ ಮಾವಿನ ಮರದಡಿಯೇ ಮೂರನೇ ಮಹಾಯುದ್ಧ. ಮಕ್ಕಳು ಬೆಳಗ್ಗೆದ್ದು ಕಾಡುಬಿದ್ದರೆ ಸಂಜೆಯವರೆಗೂ ಮಾವಿನ ಹಣ್ಣುಗಳೇ ನಮ್ಮ ಜೀವ ಪೊರೆಯುತ್ತಿದ್ದವು. ಈಗಲೂ ಹಾಗೇ ತಿನ್ನುವ ಆಸೆಯಾಗುತ್ತದೆ.

ಬೈಬಲ್ ಮನುಷ್ಯನ ಸೃಷ್ಟಿಯ ಬಗ್ಗೆ ಹೇಳುವ ಈ ಕತೆ ನಿಮಗೆ ಗೊತ್ತಿರಬಹುದು–ದೇವರು ಮೊದಲು ಆದಂನನ್ನೂ ಆಮೇಲೆ ಈವ್‌ಳನ್ನೂ ಸೃಷ್ಟಿಸಿದ. ಬಳಿಕ ಮರವೊಂದನ್ನು ತೋರಿಸಿ, ಅದರಲ್ಲಿರುವುದು ನಿಷೇಧಿತ ಫಲವೆಂದೂ ಅದನ್ನು ತಿನ್ನಬಾರದೆಂದೂ ಹೇಳಿ, ಅವರನ್ನು ದೇವರ ಉದ್ಯಾನದಲ್ಲಿ ಆಡಲು ಬಿಟ್ಟ. ಆದರೆ ಆದಂ ಮತ್ತು ಈವ್ ಅದನ್ನು ದೇವರ ಕಣ್ಣುತಪ್ಪಿಸಿ ತಿಂದೇಬಿಟ್ಟರು. ಮುಗ್ಧತೆಯ ಸಾಕಾರಮೂರ್ತಿಗಳಾಗಿದ್ದ ಅವರಿಗೆ ಆ ಮೊದಲು ಪ್ರಣಯದ ಅರಿವಿರಲಿಲ್ಲ. ಹಣ್ಣು ತಿಂದದ್ದೇ, ನಾಚಿಕೆ, ಪ್ರೇಮ, ಕಾಮ ಮುಂತಾದ ಮನುಷ್ಯ ಸಹಜ ಭಾವಗಳು ಹುಟ್ಟಿಕೊಂಡವು. ಸೃಷ್ಟಿ ಮೊದಲಾಯಿತು.

ಬೈಬಲ್ ಹೇಳುವ ಈ ಆದಿಫಲ ಯಾವುದಿರಬಹುದು ಎಂಬ ಅನುಮಾನ ನನ್ನನ್ನು ಪದೇ ಪದೇ ಕಾಡಿದೆ. ಇತ್ತೀಚೆಗೆ ಆ ಸಂಶಯ ಪರಿಹಾರವಾಯ್ತು. ನಮ್ಮ ಪರಿಚಯದ ಆಯುರ್ವೇದ ವೈದ್ಯರೊಬ್ಬರು ಒಂದು ಶ್ಲೋಕವನ್ನು ಉಲ್ಲೇಖಿಸಿ ಅದರ ಅರ್ಥವನ್ನು ಹೀಗೆ ವಿವರಿಸಿದರು: 'ಪಕ್ವಂ ತು ಮಧುರಂ ವೃಷ್ಯಂ ಸ್ನಿಗ್ಧ ಹೃದ್ಯಂ ಬಲಪ್ರದಂ, ಗುರು ವಾತಹರಮ್ ರುಚ್ಯಂ ವರ್ಣ್ಯಂ ಶೀತಮಪಿತ್ತಲಮ್– ಮಾವಿನ ಹಣ್ಣು ಎಷ್ಟು ಒಳ್ಳೇದು ಗೊತ್ತಾ? ಚೆನ್ನಾಗಿ ಹಣ್ಣಾದ ಮಾವು ಮಧುರ



ಅಂದ್ರೆ ರುಚಿಕರ, ಸ್ನಿಗ್ಧ ಅಂದ್ರೆ ರಸವತ್ತಾದದ್ದು, ಹೃದ್ಯ ಅಂದ್ರೆ ಹೃದಯಕ್ಕೊಳ್ಳೇದು, ರುಚಿ ಮತ್ತು ವರ್ಣವನ್ನು ಉದ್ದೀಪಿಸುವಂಥದ್ದು, ಬಲಪ್ರದ ಮತ್ತು ವಾತಹರ, ಶೀತವೂ ಅಲ್ಲ ಪಿತ್ತವೂ ಅಲ್ಲದ್ದು. ವೃಷ್ಯ ಅಂದ್ರೆಂತದು ಗೊತ್ತುಂಟ? ವೀರ್ಯವೃದ್ಧಿ ಮಾಡುವಂಥದ್ದು ಅಂತ!' ಮಾವಿನ ಈ 'ವೃಷ್ಯ' ಗುಣದ ಪರಿಣಾಮವೇ ಆದಂ ಮತ್ತು ಈವ್‌ರ ಪ್ರಣಯಪ್ರಸಂಗ ಶುರುವಾಗಲು ಕಾರಣ ಎಂದು ನಾನು ಊಹಿಸುತ್ತೇನೆ.

ಉರ್ದು ಕವಿ ಮಿರ್ಜಾ ಗಾಲಿಬ್‌ನ ಮಾವುಪ್ರೇಮ ಜನಜನಿತ. ಇವನು ರಾಶಿ-ರಾಶಿ ಮಾವಿನ ಹಣ್ಣು ಸವಿಯುತ್ತಿದ್ದ. ಒಮ್ಮೆ ಈತ ಗೆಳೆಯ ರಜಿಯುದ್ದೀನ್ ಖಾನ್ ಜತೆ ಮನೆ ಮುಂದೆ ಕುಳಿತಿದ್ದ. ಬೀದಿಯಲ್ಲಿ ಮಾವಿನ ಹಣ್ಣಿಗೆ ಗೊರಟು, ಸಿಪ್ಪೆ ಬಿದ್ದಿದ್ದವು. ಅಲ್ಲೊಂದು ಕತ್ತೆ ಅಡ್ಡಾಡುತ್ತ ಬಂತು. ಮಾವಿನ ಹಣ್ಣನ್ನು ಮೂಸಿ, ತಿನ್ನದೆ ಹಾಗೇ ಹೋಯಿತು. ಅದನ್ನು ನೋಡಿ, ಗಾಲಿಬ್‌ನನ್ನು ಚುಡಾಯಿಸಲೆಂದು ರಜಿಯುದ್ದೀನ್ ಖಾನ್ ಹೇಳಿದ: 'ನೋಡು ಗಾಲಿಬ್, ಕತ್ತೆ ಕೂಡ ಮಾವಿನ ಹಣ್ಣು ತಿನ್ನಲ್ಲ!' ಥಟ್ಟಂತ ಬಂತು ಗಾಲಿಬ್‌ನ ಉತ್ತರ: 'ಹೌದು, ಕತ್ತೆಗಳು ಮಾತ್ರ ಮಾವಿನ ಹಣ್ಣು ತಿನ್ನಲ್ಲ.' ಮಾವಿನ ಹಣ್ಣನ್ನು ತಿನ್ನದವರು, ಅದನ್ನು ದ್ವೇಷಿಸುವವರು ಈ ಪ್ರಸಂಗ ಓದಿ ಆತ್ಮಾವಲೋಕನ ಮಾಡಿಕೊಳ್ಳಬೇಕು.

ಮಾವು ಎಂದ ಕೂಡಲೆ ಮನಸ್ಸು ಕಾಳಿದಾಸನ ಮೇಘದೂತಕ್ಕೇ ಮೊರೆ ಹೋಗುತ್ತದೆ. ಆತನ ಪದ್ಯವನ್ನು ದ.ರಾ. ಬೇಂದ್ರೆಯವರು ಹೀಗೆ ಪುನರ್ ಸೃಷ್ಟಿಸುತ್ತಾರೆ: 'ತೊಳೆದ ತುರುಬು ಕಪ್ಪಾದ ನೀನು/ ಗಿರಿಶಿಖರದಲ್ಲಿ ತೇಲೆ/ ಆಷಾಢ ಮಾವು ಸುರಿದಾವು ಗೊಂಚಲಲಿ/ ಬೆಟ್ಟದೆದೆಯ ಮೇಲೆ/ ಅಮರ ಮಿಥುನಗಳ ಪ್ರಣಯದೃಷ್ಟಿ/ ಅರಳರಳುವಂತೆ ಆಗೆ/ ಮಲೆಯ ತುದಿಯು ಕಪ್ಪಾಗಿ/ ತೋರುವದು ನೆಲದ ಮೊಲೆಯ ಹಾಗೆ!' ಆಮ್ರಕೂಟ ಬೆಟ್ಟದ ಮೇಲುಗಡೆ ತಂಗುವ ಮೋಡ, ಬೆಟ್ಟದ ತಪ್ಪಲ ತುಂಬಾ ಹಬ್ಬಿರುವ ಫಲಭರಿತ ಮಾವಿನ ತೋಪಿನ ಹಿನ್ನೆಲೆಯಲ್ಲಿ, ಆಕಾಶದಿಂದ ನೋಡುತ್ತಿರುವ ಅಮರಮಿಥುನಕ್ಕೆ ಕಾಣಿಸುವುದು ಹಾಗಂತೆ. ಈ ಸಾಲುಗಳನ್ನು ಓದಿದಾಗ ಅದರ ಉಪಮಾ ಸಾಮರ್ಥ್ಯ, ಚಿತ್ರಕ ಶಕ್ತಿಯನ್ನು ಕಂಡು ರೋಮಾಂಚನವಾಗದೆ ಇರದು. ಈ ಮೈನವಿರಿನ ನಿತ್ಯನೂತನತೆ ಬರಿಯ ಕಾಳಿದಾಸನಲ್ಲಿಲ್ಲ, ಬೇಂದ್ರೆಯಲ್ಲಿಲ್ಲ, ಮಾವು ಎಂಬ ಮಾಂತ್ರಿಕ ಫಲದಲ್ಲಿಯೂ ಇದೆ ಅನ್ನಿಸುವುದುಂಟು.

ನಾವು ಹೆಮ್ಮೆ ಪಡಬಹುದಾದ್ದು ಏನೆಂದರೆ, ಮಾವು ನಮ್ಮ ಸ್ವಂತದ್ದು ಎಂಬುದು. ನಾವು ಜಗತ್ತಿಗೆ ಸೊನ್ನೆ ಕೊಟ್ಟಂತೆ ಮಾವನ್ನೂ ಕೊಟ್ಟೆವು. ಅದಕ್ಕೆ ಇದರ ಹೆಸರು ಸಸ್ಯಶಾಸ್ತ್ರೀಯ ಹೆಸರು 'ಮ್ಯಾಂಜಿಫೆರಾ ಇಂಡಿಕಾ.' ಇಂದಿಗೂ ಜಗತ್ತಿನ ಮಾವು ಉತ್ಪಾದನೆಯಲ್ಲಿ ಅರ್ಧ ಭಾಗ ಭಾರತದ್ದೆ. ಮೊದಲು ಇಲ್ಲಿ ಕಾಡು ಮಾವಿನ ಹಣ್ಣಿನ ವೈವಿಧ್ಯವಿತ್ತು. ಮೊಘಲರು ಮತ್ತು ವಿದೇಶೀಯರು ಇಲ್ಲಿನ ಮಾವಿಗೆ ನಾನಾ ಬಗೆಯ ಕಸಿಯನ್ನು ಮಾಡಿ ದೊಡ್ಡ ಜಾತಿಯ ವೈವಿಧ್ಯಮಯ ಹಣ್ಣುಗಳನ್ನು ಸೃಷ್ಟಿಸಿದರು. ಕಾಡು ಮಾವುಗಳು ಮಾಯವಾದವು. ಆದರೆ ಒಳ್ಳೆಯ ಮಿಡಿ ಉಪ್ಪಿನಕಾಯಿಗೆ ಈಗಲೂ ಸಣ್ಣ ಕಾಡು ಮಾವೇ ಬೇಕು. ಅಪ್ಪೆ ಮಿಡಿಯೂ ಒಂದು ಬಗೆಯ ಕಾಡುಮಾವು. ಧನಿಯಾ, ಜೀರಿಗೆ– ಹೀಗೆ ಅದರ ಪರಿಮಳಕ್ಕನುಸರಿಸಿ ನಾನಾ ಹೆಸರುಗಳು.

ಹೊಸ ತಲೆಮಾರಿಗೆ ಬಹುಶಃ ಕಾಡುಮಾವು ಸವಿದು ಗೊತ್ತೇ ಇಲ್ಲ ಎನ್ನಬಹುದೋ ಏನೋ. ಯಾಕೆಂದರೆ ಪೇಟೆಯಲ್ಲಿ ಆಲ್ಫೋನ್ಸೋ, ರಸಪುರಿ, ಬಾದಾಮಿ ಮೊದಲಾದ ರುಚಿಕರ ಕಸಿ ಹಣ್ಣುಗಳು ಸಿಗುತ್ತವೆ. ಕತ್ತರಿಸಿ ತಿನ್ನಲು ಸುಲಭ, ನೋಡಲೂ ಚಂದ. ಇದರ ನಡುವೆ, ಕಾಡಿನಲ್ಲೆಲ್ಲೋ ಬೆಳೆಯುವ ಮರದ ಹಣ್ಣುಗಳು ಹೇಗೆ ತಾನೆ ಸ್ಥಾನ ಪಡೆಯಬೇಕು. ಅದು ಕಾಡುಪ್ರಾಣಿಗಳಿಗೇ ಇರಲಿ, ಪರವಾಗಿಲ್ಲ. ಆದರೆ ನಮಗೂ ಆಗಾಗ ಸಿಗಲಿ. ಆಕಾಶದೆತ್ತರಕ್ಕೆ ಬೆಳೆಯುವ ಕಾಡುಮಾವಿನ ಮರದಿಂದ ಹಣ್ಣನ್ನು ಕೊಯ್ಯುವುದು ಬಲುಕಷ್ಟ. ಅದು ಕರುಣಿಸಿ ಬೀಳಿಸಿದಾಗ ಮಾತ್ರ ನಮಗೆ ಫಲಪ್ರಾಪ್ತಿ. ಆ ದೃಷ್ಟಿಯಿಂದ ಅದು ದೇವರ ಹಾಗೆ.

ಪ್ರಸ್ತುತ

ಹೊಸ್ಮನೆ ಮುತ್ತು

ಶಾಲಾ ಮಕ್ಕಳಲ್ಲಿ ಪತ್ರಿಕೋದ್ಯಮದ ಪ್ರಜ್ಞೆ

ಶಾಲಾ ಮಕ್ಕಳಲ್ಲಿ ಬೆಳಗಿನ ಪ್ರಾರ್ಥನೆಯ ನಂತರ ದಿನಪತ್ರಿಕೆ ಓದುವ ಹವ್ಯಾಸವನ್ನು ಕಡ್ಡಾಯಗೊಳಿಸಿರುವುದು ಶಿಕ್ಷಣ ಕ್ಷೇತ್ರದಲ್ಲಿನ ಒಂದು ಕ್ರಾಂತಿಕಾರಿ ಹಾಗೂ ಸ್ವಾಗತಾರ್ಹ ನಿರ್ಧಾರ. ಇಂದಿನ ಡಿಜಿಟಲ್ ಯುಗದಲ್ಲಿ ಮಕ್ಕಳು ಮೊಬೈಲ್ ಫೋನ್ ಮತ್ತು ಸಾಮಾಜಿಕ ಜಾಲತಾಣಗಳಿಗೆ ಅತಿಯಾಗಿ ಅಂಟಿಕೊಂಡಿದ್ದಾರೆ. ಇದು ಅವರ ದೈಹಿಕ ಆರೋಗ್ಯವನ್ನಷ್ಟೇ ಅಲ್ಲದೆ, ಏಕಾಗ್ರತೆ ಮತ್ತು ಸೃಜನಶೀಲತೆಯ ಮೇಲೂ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ಇಂತಹ ಸಂದರ್ಭದಲ್ಲಿ, ದಿನಕ್ಕೆ ಕನಿಷ್ಠ 10-15 ನಿಮಿಷ ಪತ್ರಿಕೆ ಓದುವ ನಿಯಮವು ಮಕ್ಕಳಲ್ಲಿ ಬಹುಮುಖಿ ಬೆಳವಣಿಗೆಗೆ ಸಹಕಾರಿಯಾಗಲಿದೆ.

ಸೋಶಿಯಲ್ ಮೀಡಿಯಾಗಳ ಅಬ್ಬರದ ನಡುವೆಯೂ ದಿನಪತ್ರಿಕೆಗಳು ಅಧಿಕೃತ ಮತ್ತು ವಿಶ್ವಾಸಾರ್ಹ ಮಾಹಿತಿಯನ್ನು ನೀಡುವಲ್ಲಿ ಇಂದಿಗೂ ಮುಂಚೂಣಿಯಲ್ಲಿವೆ. ಇವು ಪ್ರಪಂಚದಾದ್ಯಂತ ನಡೆಯುವ ವಿದ್ಯಮಾನಗಳನ್ನು ಪರಿಚಯಿಸುವ ಕಿಟಕಿಗಳಿದ್ದಂತೆ. ರಾಜಕೀಯ, ಕ್ರೀಡೆ, ವಿಜ್ಞಾನ, ಪರಿಸರ ಮತ್ತು ಆರ್ಥಿಕತೆಯ ಬಗೆಗಿನ ತಾಜಾ ಮಾಹಿತಿಯನ್ನು ಪಡೆಯಲು ದಿನಪತ್ರಿಕೆ ಅತ್ಯುತ್ತಮ ಮಾಧ್ಯಮವಾಗಿದೆ. ನಿತ್ಯವೂ ಪತ್ರಿಕೆ ಓದುವುದರಿಂದ ವಿದ್ಯಾರ್ಥಿಗಳ ಶಬ್ದಕೋಶ (Vocabulary) ವೃದ್ಧಿಸುತ್ತದೆ. ಹೊಸ ಪದಗಳ ಬಳಕೆ, ವಾಕ್ಯ ರಚನೆ ಮತ್ತು ಭಾಷೆಯ ಮೇಲಿನ ಹಿಡಿತ ಸಾಧಿಸಲು ಇದು ನೆರವಾಗುತ್ತದೆ. ವಿಶೇಷವಾಗಿ ಪತ್ರಿಕೆಯ ಸಂಪಾದಕೀಯ ಪುಟಗಳು ಮತ್ತು ಲೇಖನಗಳು ವಿದ್ಯಾರ್ಥಿಗಳಲ್ಲಿ ಒಂದು ವಿಷಯವನ್ನು ವಿವಿಧ ಆಯಾಮಗಳಿಂದ ವಿಶ್ಲೇಷಿಸುವ ಸಾಮರ್ಥ್ಯವನ್ನು ಬೆಳೆಸುತ್ತವೆ. ಇದು ಅವರಲ್ಲಿ ಸರಿ-ತಪ್ಪುಗಳ ನಡುವಿನ ವ್ಯತ್ಯಾಸವನ್ನು ಅರಿಯುವ ವಿವೇಚನೆಯನ್ನು ಮೂಡಿಸುತ್ತದೆ. ದಿನಪತ್ರಿಕೆಗಳು ಕೇವಲ ಸುದ್ದಿಯನ್ನಷ್ಟೇ ನೀಡುವುದಿಲ್ಲ; ಅವು ಮಕ್ಕಳ ಕಲ್ಪನಾ ಲೋಕವನ್ನು ವಿಸ್ತರಿಸುತ್ತವೆ. ಪತ್ರಿಕೆಯಲ್ಲಿ ಬರುವ ಸೊಡುಕು, ಪದಬಂಧ (Crosswords) ಮತ್ತು ಚಿತ್ರಕಲೆಗಳು ಮಕ್ಕಳ ತಾರ್ಕಿಕ ಆಲೋಚನೆಗೆ ಉತ್ತೇಜನ ನೀಡುತ್ತವೆ. ಕವನಗಳು ಮತ್ತು ಸಣ್ಣ ಕಥೆಗಳನ್ನು ಓದುವ ಮೂಲಕ ಮಕ್ಕಳಲ್ಲಿ ಸ್ವಂತವಾಗಿ ಬರೆಯುವ ಆಸಕ್ತಿಯೂ ಚಿಗುರಬಹುದು.

ಸಮಾಜದ ವಿವಿಧ ಸ್ತರದ ಜನರ ಕಷ್ಟಗಳು, ಸಾಧನೆಗಳು ಮತ್ತು ಮಾನವೀಯತೆಯ ಕಥೆಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ. ಪ್ರಕೃತಿ ವಿಕೋಪಗಳ ಸಂದರ್ಭದ ವರದಿಗಳು ಅಥವಾ ಬಡತನದ ನಡುವೆಯೂ ಸಾಧನೆ ಮಾಡಿದವರ ಕಥೆಗಳನ್ನು ಓದಿದಾಗ ವಿದ್ಯಾರ್ಥಿಗಳಲ್ಲಿ ಸಹಾನುಭೂತಿ (Empathy) ಮೂಡುತ್ತದೆ. ಇದು ಅವರನ್ನು ಸಮಾಜದ ಬಗ್ಗೆ ಕಾಳಜಿಯುಳ್ಳ ಜವಾಬ್ದಾರಿಯುತ ವ್ಯಕ್ತಿಗಳನ್ನಾಗಿ ರೂಪಿಸುತ್ತದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉದ್ಯೋಗ ಅಥವಾ ಉನ್ನತ ಶಿಕ್ಷಣಕ್ಕಾಗಿ ಪ್ರಚಲಿತ ಘಟನೆಗಳ ಜ್ಞಾನ (General Knowledge) ಅತ್ಯಗತ್ಯ. ಶಾಲಾ ಹಂತದಲ್ಲೇ ಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಂಡರೆ ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗಳು ಸುಲಭವಾಗುತ್ತವೆ. ಶಾಲೆಗಳಿಗೆ ಕೇವಲ ಒಂದು ಪತ್ರಿಕೆಯ ಬದಲು ವಿವಿಧ ದೃಷ್ಟಿಕೋನಗಳಿರುವ 2-3 ಕನ್ನಡ ದಿನಪತ್ರಿಕೆಗಳನ್ನು ಒದಗಿಸುವುದು ಹೆಚ್ಚು ಸೂಕ್ತ.

ವರದಿಯಲ್ಲಿ ಉಲ್ಲೇಖಿಸಿರುವಂತೆ, ಅಧಿಕಾರಿಗಳು ಕೇವಲ ಆದೇಶಕ್ಕೆ ಸೀಮಿತವಾಗದೆ ನಿರಂತರ ಮೇಲ್ವಿಚಾರಣೆ ನಡೆಸುತ್ತಿರುವುದು ಉತ್ತಮ ಬೆಳವಣಿಗೆ. ಈ ಯೋಜನೆಯನ್ನು ಇನ್ನಷ್ಟು ಅರ್ಥಪೂರ್ಣವಾಗಿಸಲು, ಓದಿದ ವಿಷಯದ ಬಗ್ಗೆ ವಾರಕ್ಕೊಮ್ಮೆ ತರಗತಿಯಲ್ಲಿ ಸಣ್ಣ ಚರ್ಚೆ ಏರ್ಪಡಿಸುವುದು ಅಗತ್ಯ. ಕರ್ನಾಟಕ ಸರಕಾರದ ಈ ನಿರ್ಧಾರ ನಿಜಕ್ಕೂ ಅಭಿನಂದನೀಯ. ಇದು ಕೇವಲ ಸರಕಾರಿ ಆದೇಶವಾಗಿ ಉಳಿಯದೆ, ಮಕ್ಕಳಲ್ಲಿ ಒಂದು ಜೀವಮಾನದ ಹವ್ಯಾಸವಾಗಿ (Life-long habit) ರೂಪುಗೊಳ್ಳಲಿ.

ಸಾಂಸ್ಥಿಕ ಸೋಗಿನಲ್ಲಿ ಸಂಘಟಿತ ಮತಾಂತರ

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಭಾರತವು ಇಂದು ಜಾಗತಿಕವಾಗಿ 'ವಿಶ್ವಗುರು' ಆಗುವತ್ತ ದಾಪುಗಾಲು ಹಾಕುತ್ತಿದೆ. ತಂತ್ರಜ್ಞಾನ, ಆರ್ಥಿಕತೆ ಮತ್ತು ಬಾಹ್ಯಾಕಾಶ ಸಂಶೋಧನೆಯಲ್ಲಿ ನಾವು ಮುಂಚೂಣಿಯಲ್ಲಿದ್ದೇವೆ. ಆದರೆ, ಇಷ್ಟೆಲ್ಲಾ ಪ್ರಗತಿಯ ನಡುವೆಯೂ ನಮ್ಮ ಸಮಾಜದ ಆಳದಲ್ಲಿ ಅತ್ಯಂತ ಭಯಾನಕವಾದ, ವ್ಯವಸ್ಥಿತವಾದ ಒಂದು 'ಸಾಂಸ್ಕೃತಿಕ ಕ್ಯಾನ್ಸರ್' ಹರಡುತ್ತಿದೆ. ಮಹಾರಾಷ್ಟ್ರದ ನಾಸಿಕ್‌ನ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ನಂತಹ ಪ್ರತಿಷ್ಠಿತ ಕಾರ್ಪೊರೇಟ್ ಸಂಸ್ಥೆಯ ಆವರಣದಲ್ಲಿ ನಡೆದಿದೆ ಎನ್ನಲಾದ ಬಲವಂತದ ಮತಾಂತರ ಮತ್ತು ಕಿರುಕುಳದ ಘಟನೆಗಳು ಕೇವಲ ಒಂದು ಅಪರಾಧವಲ್ಲ, ಇದು ನಮ್ಮ ದೇಶದ ಆಂತರಿಕ ಭದ್ರತೆ ಮತ್ತು ಸಾಮಾಜಿಕ ಸ್ವಾಸ್ಥ್ಯಕ್ಕೆ ಎದುರಾಗಿರುವ ದೊಡ್ಡ ಸವಾಲು.

ಈ ಆಯ್ದ ವ್ಯವಸ್ಥಿತ ದೌರ್ಜನ್ಯದ ಹಿಂದೆ ಆಡಳಿತಾತ್ಮಕ ಅಧಿಕಾರ ಮತ್ತು ಕಾರ್ಪೊರೇಟ್ ವ್ಯವಸ್ಥೆಯನ್ನು ಅತ್ಯಂತ ಚಾಣಾಕ್ಷತನದಿಂದ ಬಳಸಿಕೊಳ್ಳಲಾಗಿದೆ. ಆರೋಪಿಗಳು ತಮ್ಮ ಧಾರ್ಮಿಕ ಅಜೆಂಡಾವನ್ನು ಅವರು ಹೊಂದಿದ್ದ ಉನ್ನತ ಹುದ್ದೆಗಳನ್ನು ಅಸ್ತ್ರವನ್ನಾಗಿ ಬಳಸಿ ಮುಂದುವರೆಸುತ್ತಿದ್ದರು ಎನ್ನಲಾಗುತ್ತಿದೆ. ಅವರು ಸಂತ್ರಸ್ತ ಮಹಿಳೆಯರ ಉದ್ಯೋಗದ ಭವಿಷ್ಯದ ಮೇಲೆ ಭಯ ಹುಟ್ಟಿಸಿ ಕಿರುಕುಳ ನೀಡಿರುವುದು ಶೋಚನೀಯ. ದೈನಂದಿನ ಕೆಲಸದ ಅವಧಿಯಲ್ಲಿ ಮಹಿಳೆಯರನ್ನು ಪ್ರತ್ಯೇಕವಾಗಿ ಕರೆಸಿ, ಅವರ ಮೇಲೆ ಮಾನಸಿಕ ಒತ್ತಡ ಹೇರುವುದು, ಪರ್ಫಾರ್ಮೆನ್ಸ್ ರೇಟಿಂಗ್‌ನಲ್ಲಿ ತಾರತಮ್ಯ ಮಾಡುವ ಬೆದರಿಕೆ ಹಾಕುವುದು ಮತ್ತು ಕೆಲಸದಿಂದ ತೆಗೆದುಹಾಕುವ ಭೀತಿಯನ್ನು ಒಡ್ಡುವ ಮೂಲಕ ಅವರನ್ನು ಅಸಹಾಯಕ ಸ್ಥಿತಿಗೆ ತಳ್ಳಲಾಗಿತ್ತು ಎಂದು ಸಂತ್ರಸ್ತರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಈ ಸಂಘಟಿತ ಗುಂಪು ಆಫೀಸ್‌ನ ನಿಯಮಗಳಿಗಿಂತ ಹೆಚ್ಚಾಗಿ ತಮ್ಮ ಧಾರ್ಮಿಕ ಸಿದ್ಧಾಂತಗಳನ್ನೇ ಅಲ್ಲಿನ ಅಘೋಷಿತ ಕಾನೂನನ್ನಾಗಿ ಮಾಡಿಕೊಂಡಿದ್ದರು.

ಇಲ್ಲಿ 'ಅಧಿಕಾರ'ವು ಕೇವಲ ಆಡಳಿತಕ್ಕೆ ಸೀಮಿತವಾಗದೆ, ವ್ಯವಸ್ಥಿತ ಕೋಮುವಾದಿ ಹುನ್ನಾರಕ್ಕೆ ದಾರಿಯಾಗಿತ್ತು. ಉದ್ಯೋಗದ ಅವಶ್ಯಕತೆಯಿರುವ ಮತ್ತು ಬಲಿಷ್ಠ ಬೆಂಬಲವಿಲ್ಲದ ಮಹಿಳೆಯರನ್ನು ಗುರಿಯಾಗಿಸಿಕೊಂಡು, ಅವರ ಆರ್ಥಿಕ ಭದ್ರತೆಯನ್ನೇ ಒತ್ತೆಯಾಳಾಗಿ ಇರಿಸಿಕೊಳ್ಳಲಾಗಿತ್ತು. ಇದು ಕೇವಲ ವೈಯಕ್ತಿಕ ಕಿರುಕುಳವಲ್ಲ, ಬದಲಿಗೆ ಒಬ್ಬ ವ್ಯಕ್ತಿಯ ಜೀವನೋಪಾಯದ ಮಾರ್ಗವನ್ನೇ ಬಳಸಿಕೊಂಡು ಅವರ ನಂಬಿಕೆ ಮತ್ತು ಧರ್ಮವನ್ನು ಕಿತ್ತುಕೊಳ್ಳುವ ಕೃತ್ಯವು ಅಕ್ಷಮ್ಯ ಅಪರಾಧವಾಗಿದೆ. ಪ್ರತಿಷ್ಠಿತ ಸಂಸ್ಥೆಯೊಂದು ನೀಡಿದ ಅಧಿಕಾರವನ್ನು ಇಂತಹ ನೀಚ ಕೃತ್ಯಕ್ಕೆ ಬಳಸಿಕೊಂಡಿದ್ದು, ಆಧುನಿಕ ಕಾರ್ಪೊರೇಟ್ ಜಗತ್ತಿನಲ್ಲಿ ಈ ರೀತಿಯ ಸಂಘಟಿತ ದಿಗ್ಭ್ರಮೆ ಮೂಡಿಸುವಂತಿದೆ. ಇದು ಅಧಿಕಾರದ ದುರುಪಯೋಗ ಮಾತ್ರವಲ್ಲದೆ, ಒಂದು ಸಮುದಾಯದ ಅಸ್ತಿತ್ವದ ಮೇಲಿನ ವ್ಯವಸ್ಥಿತ ಪ್ರಹಾರವಾಗಿದೆ.

ಮತಾಂತರವು ಕೇವಲ ಧರ್ಮ ಬದಲಾವಣೆಯಲ್ಲ, ಅದು ರಾಷ್ಟ್ರಾಂತರಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಅನೇಕ ಮಹನೀಯರು ಹೇಳಿದ್ದಾರೆ. ಈ ಹಿಂದೆಯೆ ಈ ಬಗ್ಗೆ ನಮ್ಮ ದೇಶದ ಉನ್ನತ ನ್ಯಾಯಾಲಯಗಳು ನೀಡಿರುವ ತೀರ್ಪುಗಳನ್ನು ನಾವು ಗಮನಿಸಬೇಕು. ಬಲವಂತದ ಮತಾಂತರ ರಾಷ್ಟ್ರೀಯ ಭದ್ರತೆಗೆ ಬೆದರಿಕೆ (2022) ಎಂದು ಸುಪ್ರೀಮ್ ಕೋರ್ಟ್ ನೀಡಿರುವ ಇತ್ತೀಚಿನ ಈ ತೀರ್ಪು ಅತ್ಯಂತ ಪ್ರಮುಖವಾದುದು. ಸುಪ್ರೀಂ ಕೋರ್ಟ್ ಮತಾಂತರದ ಗಂಭೀರತೆಯನ್ನು ರಾಷ್ಟ್ರೀಯ ಭದ್ರತೆಯ ದೃಷ್ಟಿಕೋನದಲ್ಲಿ ವಿಶ್ಲೇಷಿಸಿದೆ. ಅಶ್ವಿನಿ ಕುಮಾರ್ ಉಪಾಧ್ಯಾಯ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಬಲವಂತದ ಮತಾಂತರವು ಅತ್ಯಂತ ಗಂಭೀರ ವಿಷಯವಾಗಿದ್ದು, ಇದು ರಾಷ್ಟ್ರದ ಭದ್ರತೆ ಮತ್ತು ಪ್ರಜೆಗಳ ಧಾರ್ಮಿಕ ಸ್ವಾತಂತ್ರ್ಯದ ಮೇಲೆ ಪರಿಣಾಮ ಬೀರಬಹುದು ಎಂದು ನ್ಯಾಯಪೀಠವು ಅಭಿಪ್ರಾಯ ಪಟ್ಟಿದೆ. ಹಾಗೆಯೇ ಕೇಂದ್ರ ಸರಕಾರವು ಇದನ್ನು ತಡೆಯಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನ್ಯಾಯಮೂರ್ತಿ ಎಮ್. ಆರ್. ಶಾ ಅವರ ಪೀಠವು ನಿರ್ದೇಶಿಸಿದೆ.

ರೇವ್ ಸ್ಟಾನಿಸ್ಲಾಸ್ ವರ್ಸಸ್ ಮಧ್ಯಪ್ರದೇಶ ಸರಕಾರದ (1977) ಪ್ರಕರಣವು ಮತಾಂತರದ ಕುರಿತು ಇರುವ ಅತ್ಯಂತ ಹಳೆಯ ಮತ್ತು ಲ್ಯಾಂಡ್‌ಮಾರ್ಕ್ ತೀರ್ಪಾಗಿದೆ. ಸಂವಿಧಾನದ ವಿಧಿ 25ರ ಅಡಿಯಲ್ಲಿ 'ಧರ್ಮ ಪ್ರಸಾರ' ಮಾಡುವ ಹಕ್ಕಿದೆಯೇ ಹೊರತು 'ಮತಾಂತರ ಮಾಡುವ ಮೂಲಭೂತ ಹಕ್ಕಿಲ್ಲ' ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಮತಾಂತರವನ್ನು ಪ್ರತಿಬಂಧಿಸುವ ರಾಜ್ಯ ಸರಕಾರಗಳ ಕಾಯ್ದೆಗಳು ಸಾಂವಿಧಾನಿಕವಾಗಿ ಸರಿಯಾಗಿವೆ ಎಂದು ಈ ತೀರ್ಪು ಎತ್ತಿಹಿಡಿದಿದೆ.

ಕೇರಳದ ಹಾದಿಯಾ ಪ್ರಕರಣವು (ಶಫಿನ್ ಜಹಾನ್ ವರ್ಸಸ್ ಅಶೋಕನ್ ಕೆ.ಎಂ., 2017-18) ಸಂಘಟಿತ ಮತಾಂತರ ಮತ್ತು ಅದರಲ್ಲಿ ಭಯೋತ್ಪಾದನಾ ಸಂಘಟನೆಗಳ ಪಾತ್ರದ ಬಗ್ಗೆ ತನಿಖೆಗೆ ಆದೇಶಿಸಿದ ಪ್ರಸಿದ್ಧ ಪ್ರಕರಣವಾಗಿದೆ. ಕೇರಳ ಹೈಕೋರ್ಟ್ ಈ ಮದುವೆಯನ್ನು 'ಸಂಘಟಿತ ಮತಾಂತರದ ಹುನ್ನಾರ' ಎಂದು ಕರೆದು ರದ್ದುಗೊಳಿಸಿತ್ತು. ನಂತರ ಸುಪ್ರೀಂ ಕೋರ್ಟ್ ವೈಯಕ್ತಿಕ ಆಯ್ಕೆಯನ್ನು ಎತ್ತಿಹಿಡಿದರೂ, ಎನ್‌ಐಎ (NIA) ತನಿಖೆಗೆ ಆದೇಶಿಸಿತ್ತು. ಕೆಲವು ಸಂಘಟನೆಗಳು ವ್ಯವಸ್ಥಿತವಾಗಿ ಹಿಂದೂ ಹುಡುಗಿಯರನ್ನು ಗುರಿಯಾಗಿಸಿಕೊಂಡು ಮತಾಂತರ ಮಾಡುತ್ತಿವೆ ಎಂಬ ಆಘಾತಕಾರಿ ಅಂಶಗಳನ್ನು ಎನ್‌ಐಎ ತನ್ನ ವರದಿಯಲ್ಲಿ ಉಲ್ಲೇಖಿಸಿತ್ತು. ಹಾಗೆಯೇ ಪಿಎಫ್‌ಐ ಸಂಸ್ಥೆಯನ್ನು ಬ್ಯಾನ್ ಮಾಡಲು ಶಿಫಾರಸು ಮಾಡಿತ್ತು.

ಈ ಪ್ರಕರಣಗಳೇ ವ್ಯವಸ್ಥಿತ ಸಂಚುಗಳ ಸಾಕ್ಷ್ಯವಾಗಿವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪ್ರತಿ ಅಂತರ್ ಧರ್ಮೀಯ ಪ್ರೇಮ ಪ್ರಕರಣಗಳು ಲವ್ ಜಿಹಾದ್ ಪ್ರಕರಣ ಆಗದೇ ಇರಬಹುದು. ಆದರೆ ಕೆಲವು ಪ್ರಕರಣಗಳಲ್ಲಿ ಸಂಘಟನೆಗಳು ಈ ಜಿಹಾದ್‌ನಲ್ಲಿ ತೊಡಗಿಸಿಕೊಂಡಿರುವುದನ್ನು ಮಾತ್ರ ನಿರ್ಲಕ್ಷಿಸುವುದು ಸಾಂಸ್ಕೃತಿಕ ಆತ್ಮಹತ್ಯೆ ಆಗುವುದರಲ್ಲಿ ಸಂದೇಹವಿಲ್ಲ.

ನಾಸಿಕ್ ಪ್ರಕರಣ: ಸುಶಿಕ್ಷಿತರ ಸೋಗಿನಲ್ಲಿ 'ಕಾರ್ಪೊರೇಟ್ ಜಿಹಾದ್'?

ನಾಸಿಕ್‌ನ ಟಿಸಿಎಸ್ ಪ್ರಕರಣದಲ್ಲಿ ಕೇಳಿಬಂದಿರುವ ಅಂಶಗಳು ಬೆಚ್ಚಿಬೀಳಿಸುವಂತಿವೆ. ಒಂಬತ್ತಕ್ಕೂ ಹೆಚ್ಚು ಎಫ್‌ಐಆರ್‌ಗಳು ದಾಖಲಾಗಿದ್ದು, ವಿಶೇಷ ತನಿಖಾ ದಳ ಕಾರ್ಯಾಚರಣೆ ನಡೆಸುತ್ತಿದೆ. ಆರೋಪಿಗಳು ಉನ್ನತ ಶಿಕ್ಷಣ ಪಡೆದವರು ಮತ್ತು ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡುವವರು. ಇಲ್ಲಿ ಪ್ರಶ್ನೆ ಏನೆಂದರೆ, ಶಿಕ್ಷಣವು ಮನುಷ್ಯನನ್ನು ಸಂಸ್ಕಾರವಂತನನ್ನಾಗಿ ಮಾಡಬೇಕಲ್ಲವೇ? ಆದರೆ ಇಲ್ಲಿ ಅದೇ ಶಿಕ್ಷಣವನ್ನು ತನ್ನ ಸಹೋದ್ಯೋಗಿಗಳ ಮೇಲೆ ಒತ್ತಡ ಹೇರಲು, ಅವರ ಧರ್ಮವನ್ನು ಅವಹೇಳನ ಮಾಡಲು ಮತ್ತು ಅವರನ್ನು ಇಸ್ಲಾಂಗೆ ಮತಾಂತರಿಸಲು ಅಸ್ತ್ರವಾಗಿ ಬಳಸಲಾಗಿದೆ ಎಂದು ಆರೋಪಿಸಲಾಗಿದೆ.

ಬಲಿಪಶುಗಳಾದ ಮಹಿಳೆಯರ ಮೇಲೆ ದೈಹಿಕ ಹಲ್ಲೆ ಮತ್ತು ಮಾನಸಿಕ ಕಿರುಕುಳದಂತಹ ಗಂಭೀರ ಆರೋಪಗಳಿವೆ. ಇದು ಕೇವಲ ಒಬ್ಬ ವ್ಯಕ್ತಿ ಮಾಡಿದ ಕೆಲಸವಲ್ಲ; ಇದರ ಹಿಂದೆ ಒಂದು ವ್ಯವಸ್ಥಿತ ಜಾಲವಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಇಂತಹ ಘಟನೆಗಳನ್ನು ನಾವು 'ಲವ್ ಜಿಹಾದ್' ಅಥವಾ 'ಕಾರ್ಪೊರೇಟ್ ಕಿರುಕುಳ' ಎಂದು ಕರೆದು ಸುಮ್ಮನಾಗಬಾರದು. ಇದು ಭಾರತೀಯ ಸಂವಿಧಾನವು ನೀಡಿರುವ ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ಪ್ರಹಾರ. ಇಂದು ಚರ್ಚಿಸುತ್ತಿರುವುದು ಕೇವಲ ಆ ಘಟನೆಯ ಬಗ್ಗೆಯಲ್ಲ, ಬದಲಿಗೆ ಆ ಘಟನೆಯ ಬಗ್ಗೆ ನಮ್ಮ ದೇಶದ 'ಸೋ ಕಾಲ್ಡ್ ಜಾತ್ಯತೀತರು' ಮತ್ತು ಎಡಪಂಥೀಯ ಬುದ್ಧಿಜೀವಿಗಳು ವಹಿಸಿರುವ ವಜ್ರಲೇಪಿತ ಮೌನದ ಬಗ್ಗೆ.

ಭಗವದ್ಗೀತೆಯ ಪಾಠ: ಹಿರಿಯರ ಮೌನವೇ ವಿನಾಶಕ್ಕೆ ನಾಂದಿ

ಕುರುಕ್ಷೇತ್ರದ ಯುದ್ಧಕ್ಕೆ ಕೇವಲ ದುರ್ಯೋಧನನ ಹಠ ಅಥವಾ ಶಕುನಿಯ ಕುತಂತ್ರ ಮಾತ್ರ ಕಾರಣವಲ್ಲ. ಬದಲಿಗೆ ಆ ಸಮಯದಲ್ಲಿ ಅಧಿಕಾರದಲ್ಲಿದ್ದ ಹಿರಿಯರಾದ ಧೃತರಾಷ್ಟ್ರ ಮತ್ತು ಅಪ್ರತಿಮ ವೀರನಾಗಿದ್ದರೂ ಅಧರ್ಮದ ಪರವಾಗಿ ಮೌನಕ್ಕೆ ಶರಣಾದ ಭೀಷ್ಮಾಚಾರ್ಯರ ಮೌನವೇ ಆ ಮಹಾಯುದ್ಧಕ್ಕೆ ಮೂಲ ಕಾರಣ. ದ್ರೌಪದಿಯ ವಸ್ತ್ರಾಪಹರಣದಂತಹ ಅತಿ ಘೋರ ಅಧರ್ಮವು ರಾಜಸಭೆಯಲ್ಲೇ ನಡೆಯುತ್ತಿದ್ದಾಗ, ಧೃತರಾಷ್ಟ್ರನು ತನ್ನ ಪುತ್ರ ವ್ಯಾಮೋಹದಿಂದ ಕಣ್ಣಿದ್ದೂ ಕುರುಡನಾದನು, ಭೀಷ್ಮರು ತನ್ನ ಪ್ರತಿಜ್ಞೆಯ ಹೆಸರಿನಲ್ಲಿ ಮೌನಕ್ಕೆ ಶರಣಾದರು.

ಇಂದಿನ ಭಾರತದ ಪರಿಸ್ಥಿತಿಯೂ ಹಾಗೆಯೇ ಇದೆ. ನಾಸಿಕ್‌ನಲ್ಲಿ ಹಿಂದೂ ಮಹಿಳೆಯರ ಮೇಲೆ ಸಂಘಟಿತವಾಗಿ ಧಾರ್ಮಿಕ ದೌರ್ಜನ್ಯ ನಡೆಯುತ್ತಿದೆ ಎಂದು ಆರೋಪಗಳು ಕೇಳಿಬರುತ್ತಿರುವಾಗ, ಇಂದಿನ ಆಧುನಿಕ 'ಧೃತರಾಷ್ಟ್ರ'ರಾದ ಕಾಂಗ್ರೆಸ್ ನಾಯಕರು ಮತ್ತು 'ಭೀಷ್ಮ'ರಂತೆ ನಟಿಸುವ ಎಡಪಂಥೀಯರು ಮೌನವಾಗಿದ್ದಾರೆ. ಅಧರ್ಮವನ್ನು ನೋಡಿಯೂ ಮೌನವಾಗಿರುವುದು ಅಧರ್ಮ ಮಾಡುವುದಕ್ಕಿಂತಲೂ ಹೆಚ್ಚು ಅಪಾಯಕಾರಿ ಎಂದು ಗೀತೆಯು ನಮಗೆ ಬೋಧಿಸುತ್ತದೆ. ಅನ್ಯಾಯವನ್ನು ಸಹಿಸಿಕೊಳ್ಳುವುದು ಅನ್ಯಾಯ ಮಾಡುವುದಕ್ಕೆ ಸಮಾನ. ಈ ಮೌನವೇ ನಾಳೆ ಸಮಾಜದಲ್ಲಿ ಬಿರುಕನ್ನು ಹುಟ್ಟಿಸಿ ನಾಗರಿಕ ಸಂಘರ್ಷಕ್ಕೆ ದಾರಿ ಮಾಡಿಕೊಡಬಹುದು.

ಎಡಪಂಥೀಯರ ಮತ್ತು ಕಾಂಗ್ರೆಸ್‌ನ ದ್ವಂದ್ವ ನೀತಿ

ನಾಸಿಕ್‌ನಲ್ಲಿ ಮಹಿಳೆಯರ ಮೇಲೆ ಶೋಷಣೆಯಾದಾಗ ಬಾಯಿ ಮುಚ್ಚಿಕೊಂಡಿರುವ ಕಾಂಗ್ರೆಸ್ ಸರಕಾರ ಮತ್ತು ಅದರ ಮಿತ್ರಪಕ್ಷಗಳು, ಕರ್ನಾಟಕದಲ್ಲಿ ಯಾರೋ ಒಬ್ಬ ಆರೋಪಿಯನ್ನು ಬಂಧಿಸಿದರೆ 'ಸಂವಿಧಾನ ಅಪಾಯದಲ್ಲಿದೆ' ಎಂದು ಬೀದಿಗೆ ಇಳಿಯುತ್ತವೆ. ಇವರ 'ಜಾತ್ಯತೀತತೆ' ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿದೆಯೇ? ಹಿಂದೂ ಮಹಿಳೆಯರು ಸಂತ್ರಸ್ತರಾದಾಗ ಇವರ ನಾಲಿಗೆ ಏಕೆ ಎದ್ದೇಳುವುದಿಲ್ಲ? ಸಂತ್ರಸ್ತರನ್ನೇ ದೂಷಿಸುವುದು ಅಥವಾ ಇಂತಹ ಘಟನೆಗಳನ್ನು ಸಣ್ಣ-ಪುಟ್ಟ ವೈಯಕ್ತಿಕ ಘರ್ಷಣೆ ಎಂದು ಕಡೆಗಣಿಸುವುದು ಅಪರಾಧಿಗಳಿಗೆ ಹೆಚ್ಚಿನ ಶಕ್ತಿ ನೀಡಿದಂತಾಗುತ್ತದೆ. ಈ ಅತಿಯಾದ ಮುಸ್ಲಿಂ ತುಷ್ಟೀಕರಣದ ರಾಜಕಾರಣವು ಹಿಂದೂ ಮತ್ತು ಮುಸ್ಲಿಮರ ನಡುವೆ ಅನಗತ್ಯ ಬಿರುಕನ್ನು ಸೃಷ್ಟಿಸುತ್ತಿದೆ.

ಇವರ ಈ ಆಯ್ದ ಮೌನ ಕೇವಲ ಅಚಾತುರ್ಯವಲ್ಲ, ಬದಲಿಗೆ ಇದು ವ್ಯವಸ್ಥಿತವಾದ ರಾಜಕೀಯ ತಂತ್ರಗಾರಿಕೆಯಾಗಿದೆ. ತನ್ನನ್ನು ತಾನು 'ಸಂವಿಧಾನದ ರಕ್ಷಕ' ಎಂದು ಕರೆದುಕೊಳ್ಳುವ ವರ್ಗವು, ಅಪರಾಧಿಯು ಯಾರು ಮತ್ತು ಬಲಿಪಶು ಯಾರು ಎಂಬುದನ್ನು ನೋಡಿ ತನ್ನ ಧ್ವನಿಯ ಮಟ್ಟವನ್ನು ನಿರ್ಧರಿಸುತ್ತದೆ. ಒಂದು ನಿರ್ದಿಷ್ಟ ಸಮುದಾಯಕ್ಕೆ ಸಂಬಂಧಿಸಿದ ಸಣ್ಣ ಘಟನೆಯನ್ನೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸುವ ಈ ಶಕ್ತಿಗಳು, ಹಿಂದೂ ಹೆಣ್ಣುಮಕ್ಕಳ ಮೇಲೆ ಸಾಂಸ್ಥಿಕ ಮಟ್ಟದಲ್ಲಿ ದೌರ್ಜನ್ಯ ಮತ್ತು ಮತಾಂತರದ ಹುನ್ನಾರ ನಡೆದಾಗ 'ವೈಯಕ್ತಿಕ ಸ್ವಾತಂತ್ರ್ಯ'ದ ಸೋಗಿನಲ್ಲಿ ನುಣುಚಿಕೊಳ್ಳುತ್ತವೆ. ಈ ರೀತಿಯ ಇಬ್ಬಂದಿ ನೀತಿಯು ಸಂವಿಧಾನದ ಆಶಯಗಳಿಗೆ ಮಾಡುವ ಅಪಚಾರವಾಗಿದೆ. ನ್ಯಾಯದ ಅಳತೆಗೋಲು ಧರ್ಮದ ಆಧಾರದ ಮೇಲೆ ಬದಲಾದಾಗ, ಅದು ಪ್ರಜಾಪ್ರಭುತ್ವದ ಅಡಿಪಾಯವನ್ನೇ ಅಲುಗಾಡಿಸುತ್ತದೆ.

ಇದಲ್ಲದೆ, ಈ ಶಕ್ತಿಗಳು ಸೃಷ್ಟಿಸುತ್ತಿರುವ 'ಅಪರಾಧಿಗಳ ಓಲೈಕೆ'ಯ ವಾತಾವರಣವು ಸಮಾಜದಲ್ಲಿ ಸೌಹಾರ್ದತೆಯನ್ನು ಹಾಳುಮಾಡುತ್ತಿದೆ. ಸಂತ್ರಸ್ತ ಹಿಂದೂ ಮಹಿಳೆಯರ ನೋವಿಗೆ ಸ್ಪಂದಿಸುವ ಬದಲು, ಘಟನೆಯನ್ನು ಮುಚ್ಚಿಹಾಕುವ ಅಥವಾ ತಿರುಚುವ ಇವರ ಪ್ರಯತ್ನವು ಸಮಾಜದ ಬಹುಸಂಖ್ಯಾತರಲ್ಲಿ ತೀವ್ರ ಅಸಮಾಧಾನ ಮತ್ತು ಅಭದ್ರತೆಯನ್ನು ಮೂಡಿಸುತ್ತಿದೆ. ಅಲ್ಪಸಂಖ್ಯಾತರ ಮತಬ್ಯಾಂಕ್‌ಗಾಗಿ ಬಹುಸಂಖ್ಯಾತರ ಹಿತಾಸಕ್ತಿ ಮತ್ತು ಸುರಕ್ಷತೆಯನ್ನು ಬಲಿಗೊಡುವುದು ಯಾವ ರೀತಿಯ ಜಾತ್ಯತೀತತೆ? ಇಂತಹ ಅಪಾಯಕಾರಿ ತುಷ್ಟೀಕರಣದ ರಾಜಕಾರಣವು ಕೇವಲ ರಾಜಕೀಯ ಲಾಭಕ್ಕಾಗಿ ಸಮಾಜದ ಶಾಂತಿಯನ್ನು ಹರಾಜು ಹಾಕುತ್ತಿದ್ದು, ಇದನ್ನು ವಿರೋಧಿಸುವುದು ಪ್ರತಿಯೊಬ್ಬ ದೇಶಭಕ್ತನ ಕರ್ತವ್ಯವಾಗಿದೆ. ನೈಜ ಜಾತ್ಯತೀತತೆ ಎಂದರೆ ಎಲ್ಲರಿಗೂ ಸಮಾನ ನ್ಯಾಯವೇ ಹೊರತು, ಒಂದು ಸಮುದಾಯದ ಅಧರ್ಮಕ್ಕೆ ನೀಡುವ ಮೌನ ಸಹಮತಿಯಲ್ಲ.

ರಾಷ್ಟ್ರದ ನಿಲುವು ಏನಾಗಬೇಕು?

ನಾವು ಇಂದು ನಿರ್ಣಾಯಕ ಘಟ್ಟದಲ್ಲಿದ್ದೇವೆ. ಇಂತಹ ಸಂಘಟಿತ ಅಪರಾಧಗಳನ್ನು ಕೇವಲ ಪೊಲೀಸರು ಮಾತ್ರ ತಡೆಯಲು ಸಾಧ್ಯವಿಲ್ಲ. ಸಮಾಜವಾಗಿ ನಾವು ಧ್ವನಿ ಎತ್ತಬೇಕು. ಯಾವುದೇ ಶಿಕ್ಷಣ ಸಂಸ್ಥೆ ಅಥವಾ ಕಂಪನಿಯ ಆವರಣದಲ್ಲಿ ಇಂತಹ ಧಾರ್ಮಿಕ ಒತ್ತಡದ ಘಟನೆಗಳು ನಡೆದರೆ ಆ ಸಂಸ್ಥೆಯ ಮೇಲೆ ಕಠಿಣ ಕ್ರಮವಾಗಬೇಕು. ಕರ್ನಾಟಕ ಸೇರಿದಂತೆ ಅನೇಕ ರಾಜ್ಯಗಳಲ್ಲಿ ನಾವು ಮತಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತಂದಿದ್ದೇವೆ. ಆದರೆ ಇದರ ಅನುಷ್ಠಾನದಲ್ಲಿ ಯಾವುದೇ ರಾಜಿ ಇರಬಾರದು.

ಸಾರ್ವಜನಿಕ ಜಾಗೃತಿ ಅಗತ್ಯ. ಇಂತಹ ಘಟನೆಗಳ ಬಗ್ಗೆ ಮೌನವಾಗಿರುವುದು ಭವಿಷ್ಯದಲ್ಲಿ ನಮ್ಮ ಮಕ್ಕಳ ಭವಿಷ್ಯಕ್ಕೆ ನಾವೇ ಕೊಳ್ಳಿ ಇಟ್ಟಂತೆ. ಮೌನವು ಯಾವಾಗಲೂ ಸುಮ್ಮನಿರುವುದಲ್ಲ, ಅದು ಅಧರ್ಮಕ್ಕೆ ನೀಡುವ ಸಮ್ಮತಿ. ಧೃತರಾಷ್ಟ್ರನ ಮೌನ ಕುರುಕ್ಷೇತ್ರಕ್ಕೆ ಕಾರಣವಾದರೆ, ಇಂದಿನ ರಾಜಕೀಯ ನಾಯಕರ ಮೌನವು ನಾಳಿನ ಸಮಾಜದ ಶಾಂತಿಯನ್ನು ಹಾಳುಮಾಡಲಿದೆ. ಸಂಘಟಿತವಾಗಿ ನಡೆಯುವ ಈ ಧಾರ್ಮಿಕ ದೌರ್ಜನ್ಯಗಳ ವಿರುದ್ಧ ನಾವು ಇಂದು ಎದ್ದು ನಿಲ್ಲದಿದ್ದರೆ, ಇತಿಹಾಸವು ನಮ್ಮನ್ನು ಎಂದಿಗೂ ಕ್ಷಮಿಸುವುದಿಲ್ಲ.

ನಾವು ಸೌಹಾರ್ದತೆಯನ್ನು ಬಯಸುತ್ತೇವೆ, ಆದರೆ ಅದು ಶೋಷಣೆಯ ಬಲಿಪೀಠದ ಮೇಲೆ ಅಲ್ಲ. ಮಹಿಳೆಯರ ಗೌರವ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ರಕ್ಷಿಸುವುದು ನಮ್ಮ ಆದ್ಯತೆ. ನಾಸಿಕ್‌ನ ಪ್ರಕರಣವು ನಮಗೆಲ್ಲರಿಗೂ ಒಂದು ಎಚ್ಚರಿಕೆಯ ಗಂಟೆ. ಆ ಧ್ವನಿಯನ್ನು ನಾವು ಕೇಳಿಸಿಕೊಳ್ಳೋಣ ಮತ್ತು ಅಧರ್ಮದ ವಿರುದ್ಧ ಧ್ವನಿ ಎತ್ತೋಣ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕರುಳು ಕಿವುಚಿದ ಜೀತು ಕಥೆ!

ಒಡಿಶಾ ರಾಜ್ಯದ ಕಿಯೊಂಜರ್ ಜಿಲ್ಲೆಯ ಜೀತು ತನ್ನ ಮೃತ ಸೋದರಿಯ ಮರಣ ಪ್ರಮಾಣಪತ್ರದ ಬದಲಾಗಿ ಹೂಳಲಾಗಿದ್ದ ಸೋದರಿಯ ಶವವನ್ನೇ ಹಣ ಪಡೆಯಲು ಬ್ಯಾಂಕಿಗೆ ತಂದದ್ದು ಕರುಳು ಕಿವಿಚುವಂತಹ ಸುದ್ದಿ. ಇಂದಿಗೂ ನಮ್ಮ ದೇಶದಲ್ಲಿ ಇಂತಹ ಘಟನೆಗಳು ನಡೆಯುತ್ತಿರುವುದು ವಿಷಾದನೀಯ ಸಂಗತಿ. ಇದರ ಮೂಲ ಕಾರಣ ಬಡತನ, ಅನಕ್ಷರತೆ, ಬೇರೆಯಾವುದೋ ಅಸಹಾಯಕತೆ ಇನ್ನೂ ತಾಂಡವವಾಡುತ್ತಿದೆ ಎಂಬುದು ಸಾಬೀತಾಗಿದೆ. ನಗರ ಪ್ರದೇಶದಲ್ಲಿ ವಾಸಿಸುವ ನಾವು ನಮ್ಮ ಬಗೆಗೆ ಯೋಚಿಸಲು ಸಮಯವಿಲ್ಲದ ಕಾಲಮಾನದಲ್ಲಿ ನಾವಿದ್ದೇವೆ, ಆದರು ಒಮ್ಮೆಯಾದರು ಈ ರೀತಿಯ ಘಟನೆಗಳನ್ನು ಓದಿದಾಗ ಅಥವಾ ನೋಡಿದಾಗ ನಮ್ಮ ಸುತ್ತಮುತ್ತಲಲ್ಲಿರುವ ಜೀತುವಿನಂತಹವರ ಬಗೆಗೂ ಕಾಳಜಿ ವಹಿಸಿ ಮಾನವೀಯತೆಯನ್ನು ಮೆರೆಯಬೇಕಲ್ಲವೇ?

– **ಮಹೇಶ್ ಹೊಸಮನಿ**

ಫಲಿತಾಂಶ ಏರಿಸುವ ಹೊಸ ಪರೀಕ್ಷಾ ವಿಧಾನ !

ಪರೀಕ್ಷೆಗೂ ಮುನ್ನ, ಕೆಲ ನುರಿತ ಶಿಕ್ಷಕರಿಂದ 'ಸಂಭಾವ್ಯ' ಪ್ರಶ್ನೆಗಳನ್ನು ತಯಾರಿಸಿ, ಅವುಗಳನ್ನೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗೆ, ಪರೀಕ್ಷೆಯ ಕೆಲದಿನಗಳ ಮೊದಲೇ ತಲುಪಿಸಿ, ಇಲ್ಲಿ ಕೊಟ್ಟ ಪ್ರಶ್ನೆಗಳಿಗೆ ಸೂಕ್ತ ಉತ್ತರ ತಯಾರು ಮಾಡಿಟ್ಟುಕೊಳ್ಳಿ, ನೀವು ಹೆಚ್ಚಿನ ಅಂಕ ಪಡೆಯುವುದು ನಿಶ್ಚಿತ ಎಂಬ ಭರವಸೆ ದೊರೆತಿದೆ ಅಂದರೆ ಇದು ಯಾವುದರ ಸಂಕೇತ? ಪಾಸ್ ಅಂಕವನ್ನೂ 35 ರಿಂದ 33ಕ್ಕೆ ಇಳಿಸಿದ್ದಾದರೂ ಏಕೆ? ಪ್ರತಿ ವಿಷಯಕ್ಕೂ 20 'ಕೃಪಾಂಕ' ಕೊಟ್ಟಿದ್ದಾದರೂ ಏಕೆ? ಈ ಬಾರಿಯಂತೂ ತ್ರಿ-ಭಾಷಾ ಸೂತ್ರದಡಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಿಂದಿ ಪರೀಕ್ಷೆಯ ಬಗ್ಗೆ ಎಬ್ಬಿಸಿದ ಗೊಂದಲ ಮುಂದೆ ಹೇಗೆ ಪರಿಹಾರವಾಯ್ತು? ಪರೀಕ್ಷೆಯ ಫಲಿತಾಂಶ ಘೋಷಣೆ ಆದಕೂಡಲೇ, ನೂರಕ್ಕೆ ನೂರು ಪ್ರತಿಶತ ಪಾಸಾದ ವಿದ್ಯಾರ್ಥಿಗಳು, ನೂರಕ್ಕೆ ನೂರು ಫಲಿತಾಂಶ ತಂದ ಶಾಲೆ, ಈ ಬಾರಿ ಶೇ.94.10ರಷ್ಟು ರಿಸಲ್ಟ್ ಎನ್ನುತ್ತ, ಈ ಬಾರಿ ದಾಖಲೆಯ ಫಲಿತಾಂಶ, 2025-26ನೇ ಸಾಲಿನ ಪರೀಕ್ಷಾ ಫಲಿತಾಂಶದಲ್ಲಿ ಚಾರಿತ್ರಿಕ ಏರಿಕೆ ಅಂತೆಲ್ಲ ಹೇಳಿಕೊಂಡ ಶಿಕ್ಷಣ ಸಚಿವರ ಮಾತು ಏನನ್ನು ಬಿಂಬಿಸುತ್ತದೆ? ಇಂದು, ಪರೀಕ್ಷೆ ಅಂದರೆ ಕೇವಲ ಅಂಕ, ಪಾಸ್, ಪ್ರಮಾಣಪತ್ರ ಹೊರತು ಇನ್ನಾವುದೂ ಅಲ್ಲ. ಮೊದಲೆಲ್ಲ, ಎಸ್‌ಎಸ್‌ಎಲ್‌ಸಿಯಂತಹ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಪಡೆವ ವಿದ್ಯಾರ್ಥಿ ಕೇವಲ ಒಬ್ಬನೇ. ಆದರೆ ಇಂದು? ಎಲ್ಲ ಮ್ಯಾಜಿಕ್! ಇನ್ನು, ಪ್ರಾಥಮಿಕ ಹಂತದಲ್ಲಂತೂ, ಯಾರನ್ನೂ ಫೇಲ್ ಮಾಡುವ ಹಾಗೇ ಇಲ್ಲ. ಎಲ್ಲರೂ ಪಾಸ್! ಮುಂದೆ ಅವರು ಅದೆಷ್ಟು ಕಷ್ಟ ಅನುಭವಿಸಬೇಕಾಗುತ್ತದೆ. ಅದೇಕೆ ಹೀಗೆ ಅಂತ ಕೇಳಿದರೆ ಉತ್ತರವೂ ಸಿಗದು.

– **ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ.**

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:104

ಸಮಾಚಾರ ಸಣ್ಣದಲ್ಲ

ಡಿಜಿ ಅರೆಸ್ಟ್: 9400 ವಾಟ್ಸಾಪ್ ಖಾತೆ ಸ್ಥಗಿತ

ದೆಹಲಿ: ಸೈಬರ್ ವಂಚಕರು ಸೇರಿದಂತೆ ಅಪರಾಧ ಲೋಕದವರು 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಜನರನ್ನು ವಂಚಿಸಿ ಕೋಟ್ಯಂತರ ಹಣ ದೋಚುವುದು ನಡೆಯುತ್ತಿದೆ. ಇದನ್ನು ಮಟ್ಟ ಹಾಕುವ ನಿಟ್ಟಿನಲ್ಲಿ ಈವರೆಗೆ ದೇಶದಲ್ಲಿ ಒಟ್ಟು 9400 ವಾಟ್ಸಾಪ್ ಖಾತೆಗಳನ್ನು ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಇದಿಷ್ಟೇ ಅಲ್ಲದೇ, ದೂರಸಂಪರ್ಕ ಕ್ಷೇತ್ರದ ನಿಯಂತ್ರಣ ಸಂಸ್ಥೆಗಳು, ದೂರವಾಣಿ ಸೇವಾ ಕಂಪನಿಗಳು, ತಂತ್ರಜ್ಞಾನ ಕ್ಷೇತ್ರದ ಕಂಪನಿಗಳು, ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ), ಕೇಂದ್ರದ ತನಿಖಾ ದಳ(ಸಿಬಿಐ) 'ಡಿಜಿಟಲ್ ಅರೆಸ್ಟ್' ವಂಚನೆ ಪ್ರಕರಣಗಳನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳುತ್ತಿವೆ ಎಂದು ಸುಪ್ರೀಂಕೋರ್ಟ್‌ಗೆ ಕೇಂದ್ರ ಸರಕಾರ ಮಾಹಿತಿ ನೀಡಿದೆ.

ಸ್ವಾತಿ ಮಲಿವಾಲ್ ಬಿಜೆಪಿಗೆ ಸೇರ್ಪಡೆ

ದೆಹಲಿ: ಆಮ್ ಆದ್ಮಿ ಪಕ್ಷದ(ಎಎಪಿ) ಮಾಜಿ ನಾಯಕಿ, ಹಾಲಿ ರಾಜ್ಯಸಭಾ ಸದಸ್ಯೆ ಸ್ವಾತಿ ಮಲಿವಾಲ್ ಬಿಜೆಪಿ ದೆಹಲಿ ಘಟಕ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ಅವರ ಸಮ್ಮುಖ ಭಾರತೀಯ ಜನತಾ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಗೊಂಡರು. ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆಯಾಗಿದ್ದಾಗಿನ ಅನುಭವಗಳನ್ನು ಹಂಚಿಕೊಂಡ ಸ್ವಾತಿ, ಬಿಜೆಪಿ ನೀಡಿದ ಬೆಂಬಲವನ್ನು ಸ್ಮರಿಸಿದರು. ನಾನಿ ಯಾವುದೇ ಒತ್ತಡದಿಂದ ಈ ನಿರ್ಧಾರ ತೆಗೆದುಕೊಂಡಿಲ್ಲ. ಬದಲಾಗಿ ಬಿಜೆಪಿಯ ಸಮಾಜಮುಖಿ ಕೆಲಸಗಳಿಂದ ಪ್ರೇರಿತಳಾಗಿದ್ದೇನೆ ಎಂದು ಸ್ವಾತಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ 10 ವರ್ಷಗಳಲ್ಲಿ ದೆಹಲಿಯಲ್ಲಿ ದುರಾಡಳಿತ ನಡೆಸಿದ್ದಾರೆ, ಭ್ರಷ್ಟಾಚಾರದಲ್ಲಿ ವಿಜೃಂಭಿಸಿದ್ದಾರೆ ಎಂದೂ ಸ್ವಾತಿ ಆರೋಪಿಸಿದರು.

ಬುದ್ಧ ಭಗವಾನರ ಪವಿತ್ರ ಸ್ಮರಣಿಕೆ

ದೆಹಲಿ: ಬುದ್ಧ ಭಗವಾನರ ದೇಹದ(ದಂತ, ಮೂಳೆ) ಅಂಶಗಳನ್ನೊಳಗೊಂಡ 'ಪವಿತ್ರ ಧಾರ್ಮಿಕ ಸ್ಮರಣಿಕೆ'ಗಳು ಲಡಾಖ್‌ಗೆ ಬುಧವಾರ ಆಗಮಿಸಿವೆ. ಬುದ್ಧ ಪೂರ್ಣಿಮೆ ದಿನವಾದ 'ಮೇ 1'ರಿಂದ 15ರವರೆಗೂ ಸಾರ್ವಜನಿಕ ದರ್ಶನಕ್ಕೆ ಅವಕಾಶವಾಗಲಿದೆ. ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಮತ್ತು ಕೇಂದ್ರಾಡಳಿತ ಪ್ರದೇಶದ ಹಿರಿಯ ಅಧಿಕಾರಿಗಳು, ಭದ್ರತಾ ಪಡೆಗಳ ಮುಖ್ಯಸ್ಥರು ಲಡಾಖ್‌ನಲ್ಲಿನ ವಾಯುನೆಲೆಯಲ್ಲಿ ಉಪಸ್ಥಿತರಿದ್ದು, ವಾಯು ಪಡೆಯ ವಿಶೇಷ ವಿಮಾನದಲ್ಲಿ ತರಲಾದ ಬುದ್ಧ ಭಗವಾನರ ಪವಿತ್ರ ಧಾರ್ಮಿಕ ಸ್ಮರಣಿಕೆಗಳನ್ನು ಭಕ್ತಿಪೂರ್ವಕವಾಗಿ ಸ್ವಾಗತಿಸಿದರು. ಟ್ರಕ್‌ನಲ್ಲಿ ವಿಶೇಷವಾಗಿ ನಿರ್ಮಿಸಲಾಗಿದ್ದ, ಹೂವುಗಳಿಂದ ಅಲಂಕೃತವಾಗಿದ್ದ ಮಂಟಪದಲ್ಲಿ ಧಾರ್ಮಿಕ ಸ್ಮರಣಿಕೆಗಳನ್ನಿರಿಸಿ ವಾಯುನೆಲೆಯಿಂದ ಮೆರವಣಿಗೆಯಲ್ಲಿ ಜೀವತ್ಸಲ್‌ಗೆ ಕೊಂಡೊಯ್ಯಲಾಯಿತು. ಖಾಯಂ ಸಂರಕ್ಷಣಾ ಸ್ಥಳದಿಂದ ಬೇರೊಂದು ಸ್ಥಳಕ್ಕೆ ಕೊಂಡೊಯ್ದು ಸಾರ್ವಜನಿಕ ಪ್ರದರ್ಶನ ಏರ್ಪಡಿಸುತ್ತಿರುವುದು ದೇಶದಲ್ಲಿ ಇದೇ ಮೊದಲ ಬಾರಿಯಾಗಿದೆ.

ಉತ್ತರ ಪ್ರದೇಶದ ಗಾಜಿಯಾಬಾದ್ ಜಿಲ್ಲೆ ಅಭಯ್ ಖಂಡ್‌ನ ಇಂದಿರಾಪುರಂನಲ್ಲಿ 'ಗೌರ್ ಗ್ರೀನ್ ಅವೆನ್ಯೂ' ವಸತಿ ಸಂಕೀರ್ಣದ 9ನೇ ಮಹಡಿಯ ಮನೆಯೊಂದರ ಏರ್ ಕಂಡೀಷನರ್‌ನಲ್ಲಿ ಬುಧವಾರ ಬೆಳಗ್ಗೆ ಶಾರ್ಟ್‌ಸರ್ಕಿಟ್ ಆಗಿದ್ದರಿಂದ ಬೆಂಕಿ ಹೊತ್ತಿದ್ದು, 12ನೇ ಮಹಡಿವರೆಗೂ ವ್ಯಾಪಿಸಿದೆ. ಡಜನ್‌ಗೂ ಹೆಚ್ಚು ಮನೆಗಳು ಸುಟ್ಟುಹೋಗಿವೆ. ಅಗ್ನಿಶಾಮಕ ದಳದ ಹಲವು ವಾಹನಗಳು ಬೆಂಕಿ ನಂದಿಸಲು ಶ್ರಮಿಸಿವೆ. ವಸತಿ ಸಂಕೀರ್ಣದ್ದವರೆಲ್ಲಾ ತಕ್ಷಣ ಹೊರಬಂದಿದ್ದರಿಂದ ಯಾವುದೇ ಪ್ರಾಣ ಹಾನಿ ಆಗಿಲ್ಲ.

{ ಭಗವಂತ್ ಮಾನ್ } ಪಂಜಾಬ್ ಸಿಎಂ

ಆಮ್ ಆದ್ಮಿ ಪಕ್ಷದ(ಎಎಪಿ) 7 ರಾಜ್ಯಸಭಾ ಸದಸ್ಯರು ಬಿಜೆಪಿ ಸೇರಿರುವ ವಿಷಯಕ್ಕೆ ಸಂಬಂಧಿಸಿ ಮೇ 5ರ ಮಧ್ಯಾಹ್ನ 12ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಎಎಪಿ ನಾಯಕರೊಂದಿಗೆ ಭೇಟಿ ಮಾಡಿ ಮಾತುಕತೆ ನಡೆಸುವೆ. 7ಜನರಲ್ಲಿ 6 ಮಂದಿ ಪಂಜಾಬ್ ಪ್ರತಿನಿಧಿಸುವವರಾಗಿದ್ದಾರೆ. ಏಳೂ ಜನರ ರಾಜ್ಯಸಭಾ ಸದಸ್ಯತ್ವ ರದ್ದುಗೊಳಿಸಲು ಆಗ್ರಹಿಸುವೆ.

ಶೋಡಶೋಪಚಾರ ಪೂಜೆ-ಸರ್ವಾರ್ಥ ಸಿದ್ಧಿ ಯೋಗ ಮಾಡಿಸಿದ ಮೋದಿ । ಸ್ವಕ್ಷೇತ್ರದಲ್ಲಿ ಅಭಿವೃದ್ಧಿ ಯೋಜನೆ, 2 ಅಮೃತ್ ಭಾರತ್ ರೈಲಿಗೆ ಚಾಲನೆ

ಕಾಶಿಯಲ್ಲಿ ವಿಶ್ವನಾಥನಿಗೆ ಪ್ರಧಾನಿ ವಿಶೇಷ ಪೂಜೆ

ವಾರಾಣಸಿ: ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಮುಂಜಾನೆಯೇ ಕಾಶಿ ನಗರದಲ್ಲಿ ಶ್ರೀ ವಿಶ್ವನಾಥ ದೇವರ ಮಂದಿರಕ್ಕೆ ತೆರಳಿ ವಿಶ್ವನಾಥ ಭಗವಾನರಿಗೆ ಶೋಡಶೋಪಚಾರ ಪೂಜೆ ಸಲ್ಲಿಸಿದರು.

ಬುಧವಾರ ಮುಂಜಾನೆ ಪವಿತ್ರ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಭೇಟಿ ನೀಡಿದ ಪ್ರಧಾನಿ ಮೋದಿ ಅವರನ್ನು ಶಂಖನಾದ ಮತ್ತು ಸಾಂಪ್ರದಾಯಿಕ ಡೋಲು ವಾದ್ಯ ಮೇಳದೊಂದಿಗೆ ಬರಮಾಡಿಕೊಳ್ಳಲಾಯಿತು.

ಸ್ವಕ್ಷೇತ್ರ ವಾರಾಣಸಿಗೆ 2 ದಿನಗಳ ಭೇಟಿ ಕೈಗೊಂಡಿರುವ ಮೋದಿ 2ನೇ ದಿನವಾದ ಬುಧವಾರ ಬನಾರಸ್ ಲೋಕೋಮೋಟಿವ್ ವರ್ಕ್ಸ್ ಬಳಿಯಿಂದ ಲಹರ್ತಾರಾ, ಕಚಹರಿ, ಅಂಬೇಡ್ಕರ್ ಚೌರಾಹಾ, ಚೌಕಾಘಾಟ್, ತೆಲಿಯಾಬಾಗ್, ಲಹುರಾಬೀರ್ ಮತ್ತು ಮೈದಾಗಿನ್ ಮೂಲಕ ಕಾಶಿ ವಿಶ್ವನಾಥ ದೇಗುಲದವರೆಗೂ ರೋಡ್ ಷೋ ನಡೆಸಿದರು. ರಸ್ತೆಯ ಇಕ್ಕೆಲದಲ್ಲೂ ಭಾರೀ ಜನಸ್ತೋಮ ಸೇರಿ ಜಯಘೋಷ ಮೊಳಗಿಸಿತು. ಕಾಶಿ ವಿಶ್ವನಾಥನ ಮಂದಿರದ ಹೊರಭಾಗದಲ್ಲಿ ಪ್ರಧಾನಿ ಮೋದಿ ತ್ರಿಶೂಲ ಹಿಡಿದು ಡಮರು ನುಡಿಸಿರುವ ಫೋಟೊ-ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ.

'ಇಂದು ಬುಧವಾರ ಬೆಳಗ್ಗೆಯೇ ಕಾಶಿ ವಿಶ್ವನಾಥ ಮಂದಿರಕ್ಕೆ ತೆರಳಿ ಭಗವಾನ್ ಆಶೀರ್ವಾದ ಪಡೆದೆ. ರೂಪುಗೊಂಡ ಸರ್ವಾರ್ಥ ಸಿದ್ಧಿ ಯೋಗ ಮತ್ತು ತ್ರಯೋದಶಿ ತಿಥಿಯ ಅತ್ಯಂತ ಶುಭ ಸಂದರ್ಭದಲ್ಲಿ ವಿಶ್ವನಾಥನಿಗೆ ವಿಶೇಷ ಪೂಜೆಗಳನ್ನು ಸಲ್ಲಿಸಿದೆ' ಎಂದು ಪ್ರಧಾನಿ ಮೋದಿ ಎಕ್ಸ್ ಸಂದೇಶದಲ್ಲಿ ಹೇಳಿಕೊಂಡಿದ್ದಾರೆ.

ದಿನದ ಜ್ಯೋತಿಷ್ಯ ಶಾಸ್ತ್ರದ ಮಹತ್ವ ಗಮನದಲ್ಲಿಟ್ಟುಕೊಂಡು ಪ್ರಧಾನಿ ಮೋದಿ ಅವರು 16 ಹಂತದ ವೈವಿಧ್ಯಮಯ ಸೇವೆಗಳನ್ನು ಒಳಗೊಂಡ ಶೋಡಶೋಪಚಾರ ಪೂಜೆಯನ್ನು 30 ನಿಮಿಷ ಶಾಸ್ತ್ರೋಕ್ತವಾಗಿ ನೆರವೇರಿಸಿದ್ದಾರೆ. ಸರ್ವಾರ್ಥ ಸಿದ್ಧಿ ಯೋಗ ಮತ್ತು ತ್ರಯೋದಶಿ ತಿಥಿಯ ಶುಭ ಸಂದರ್ಭದಲ್ಲಿ ಈ ಪೂಜೆ ನೆರವೇರಿರುವುದರಿಂದ ವಿಶೇಷ ಮಹತ್ವವಿದೆ. ಈ ದಿನ ತ್ರಯೋದಶಿ ತಿಥಿ. ಶಿವನ ಆರಾಧನೆಗೆ ಈ ತಿಥಿ ಅತ್ಯಂತ ಪ್ರಿಯ. ತ್ರಯೋದಶಿಯಂದು ಶಿವನನ್ನು ಸ್ಮರಿಸುವುದರಿಂದ ಜೀವನದಲ್ಲಿ ಸುಖ, ಸಮೃದ್ಧಿ ಮತ್ತು ಶಾಂತಿ ಲಭಿಸುತ್ತದೆ ಎಂಬುದು ಭಕ್ತರ ದೃಢ ನಂಬಿಕೆ ಎಂದು ಅರ್ಚಕರು ತಿಳಿಸಿದ್ದಾರೆ.

ಶೋಡಶೋಪಚಾರ ಪೂಜೆ: ಸಾಂಪ್ರದಾಯಿಕ ವಿಧಾನವಾಗಿದೆ. ಈ ಪೂಜೆಯು ದೇವರನ್ನು ಆಹ್ವಾನಿಸಿ ಆಸನ ನೀಡುವುದರೊಂದಿಗೆ ಪ್ರಾರಂಭವಾಗಿ, ನಂತರ ಮುಖ್ಯ ಅಭಿಷೇಕದತ್ತ ಸಾಗುತ್ತದೆ. ಹಾಲು, ಮೊಸರು, ತುಪ್ಪ, ಜೇನುತುಪ್ಪ ಮತ್ತು ಪಂಚಾಮೃತದೊಂದಿಗೆ ಶಿವಲಿಂಗಕ್ಕೆ ಅಭಿಷೇಕ ಮಾಡಿ, ಕೊನೆಯದಾಗಿ ಶುದ್ಧ ನೀರಿನಿಂದಲೂ ಅಭಿಷೇಕ ಮಾಡಿಸಲಾಗುತ್ತದೆ. ಬಳಿಕ ವಸ್ತ್ರ, ಯಜ್ಞೋಪವೀತ ಮತ್ತು ಶ್ರೀಗಂಧವನ್ನು ಅರ್ಪಿಸಿ, ಶಿವನಿಗೆ ಅತ್ಯಂತ ಪ್ರಿಯವಾದ ಬಿಲ್ವಪತ್ರೆ ಹಾಗೂ ಪುಷ್ಪಗಳಿಂದ ಅರ್ಚನೆ ಮಾಡಲಾಗುತ್ತದೆ. ಅಂತಿಮವಾಗಿ ನೈವೇದ್ಯ, ತಾಂಬೂಲ ಅರ್ಪಿಸಿ, ಮಂತ್ರಘೋಷಗಳೊಂದಿಗೆ ಮಂಗಳಾರತಿ ಮಾಡುವ ಮೂಲಕ ಪೂಜಾ ವಿಧಿವಿಧಾನಗಳನ್ನು ಶಾಸ್ತ್ರೋಕ್ತವಾಗಿ ಮುಕ್ತಾಯಗೊಳಿಸಲಾಗುತ್ತದೆ.

ವಾರಾಣಸಿಗೆ 6350 ಕೋಟಿ ರು. ಅಭಿವೃದ್ಧಿ ಯೋಜನೆ

ತಾವು ಪ್ರತಿನಿಧಿಸುವ ಸಂಸದೀಯ ಕ್ಷೇತ್ರ ವಾರಾಣಸಿಗೆ ಮಂಗಳವಾರ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಶಿ ನಗರದ ಜನತೆ ಅಭೂತಪೂರ್ವ ಸ್ವಾಗತ ಕೋರಿದರು. ಲಾಹುರಾಬಿರ್ ಕ್ರಾಸಿಂಗ್ ಸೇರಿದಂತೆ ನಗರದಾದ್ಯಂತ ಕಿಕ್ಕಿರಿದು ಸೇರಿದ್ದ ಭಕ್ತರು 'ಹರ ಹರ ಮಹಾದೇವ್' ಘೋಷಣೆಗಳೊಂದಿಗೆ ಪುಷ್ಪವೃಷ್ಟಿ ಮಾಡಿದರು. ವಾರಾಣಸಿ ಕ್ಷೇತ್ರದಲ್ಲಿ 1,050 ಕೋಟಿ ರು. ಮೌಲ್ಯದ 48 ಯೋಜನೆಗಳ ಕಾಮಗಾರಿ ಪೂರ್ಣಗೊಂಡಿದ್ದು, ಅವುಗಳನ್ನು ಪ್ರಧಾನಿ ಮೋದಿ ರಾಷ್ಟ್ರಕ್ಕೆ ಸಮರ್ಪಿಸಿದರು. ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ 5,300 ಕೋಟಿ ರು. ಮೌಲ್ಯದ ವಿವಿಧ ಯೋಜನೆಗಳ ಕಾಮಗಾರಿಗಳಿಗೆ ಪ್ರಧಾನಿ ಮೋದಿ ಶಂಕುಸ್ಥಾಪನೆ ನೆರವೇರಿಸಿದರು. ಇದಕ್ಕೂ ಮುನ್ನ ಮಂಗಳವಾರ ಸಂಜೆ ಬನಾರಸ್ ಲೋಕೋಮೋಟಿವ್ ವರ್ಕರ್ಸ್ ಸಂಘಟನೆ ಆಯೋಜಿಸಿದ್ದ 'ಮಹಿಳಾ ಸಮ್ಮೇಳನ'ದಲ್ಲಿ ಭಾಗವಹಿಸಿದ ಪ್ರಧಾನಿ ಮೋದಿ, ಸ್ತ್ರೀ ಶಕ್ತಿಯ ಮಹತ್ವ ಸಾರಿದರು. ಸಿಎಂ ಯೋಗಿ ಆದಿತ್ಯನಾಥ್ ಮತ್ತು ಬಿಜೆಪಿ ಅಧ್ಯಕ್ಷ ನಿತಿನ್ ನಬಿನ್ ವೇದಿಕೆಯಲ್ಲಿದ್ದರು. 594 ಕಿಮೀ ಉದ್ದದ 'ಗಂಗಾ ಎಕ್ಸ್‌ಪ್ರೆಸ್ ವೇ'ಯನ್ನು ಪ್ರಧಾನಿ ಮೋದಿ ಉದ್ಘಾಟಿಸಿದರು.

2 ಅಮೃತ್ ಭಾರತ್ ರೈಲು

ಉತ್ತರ ಪ್ರದೇಶ ಎರಡು ಪುಣ್ಯ ಕ್ಷೇತ್ರಗಳನ್ನು ಮಹಾರಾಷ್ಟ್ರದ ಎರಡು ಪ್ರಮುಖ ನಗರಗಳ ಜತೆ ಸಂಪರ್ಕಗೊಳಿಸುವ 2 ಅಮೃತ್ ಭಾರತ್ ರೈಲು ಗಾಡಿಗಳ ಸಂಚಾರಕ್ಕೆ ಪ್ರಧಾನಿ ಮೋದಿ ಹಸಿರು ನಿಶಾನೆ ತೋರಿದರು. ವಾರಾಣಸಿಯಿಂದ ಪುಣೆ ಮತ್ತು ಅಯೋಧ್ಯೆಯಿಂದ ಮುಂಬೈ (ಲೋಕಮಾನ್ಯ ತಿಲಕ್ ಟರ್ಮಿನಸ್) ನಡುವೆ ಎರಡು ಅತಿವೇಗದ ರೈಲುಗಳು ಸಂಚರಿಸಲಿವೆ. ಅಯೋಧ್ಯೆ-ಮುಂಬೈ ಎಲ್‌ಟಿಟಿ ಸಂಪರ್ಕಿಸುವ ಅಮೃತ್ ಭಾರತ್ ಎಕ್ಸ್‌ಪ್ರೆಸ್(ನಾನ್ ಎಸಿ) ರೈಲು ವಾರಕ್ಕೊಮ್ಮೆ ಸಂಚರಿಸಲಿದೆ. 8 ಸ್ಲೀಪರ್, 11 ಜನರಲ್ ಬೋಗಿಗಳಿರುವ ಈ ಎಕ್ಸ್‌ಪ್ರೆಸ್ ರೈಲು, ಶ್ರೀರಾಮ ಮಂದಿರ ವೀಕ್ಷಣೆಗೆ ತೆರಳುವವರಿಗೆ ಕಡಿಮೆ ವೆಚ್ಚದಲ್ಲಿ ಪ್ರಯಾಣಕ್ಕೆ ಅವಕಾಶ ಮಾಡಿಕೊಡಲಿದೆ. ವಾರಾಣಸಿಯಿಂದ ಪುಣೆಯ ಹಡಪ್ಸರ್ ನಿಲ್ದಾಣವನ್ನು 30 ಗಂಟೆಗಳಲ್ಲಿ ಸಂಪರ್ಕಗೊಳಿಸುವ ಮತ್ತೊಂದು ಅಮೃತ್ ಭಾರತ್ ರೈಲು, ಮಧ್ಯಪ್ರದೇಶದಲ್ಲಿ ಹಾದು ಹೋಗಲಿದೆ.

ರಷ್ಯಾ ಉದ್ಯಮಿ ಅಲೆಕ್ಸಿ ಐಶಾರಾಮಿ ನೌಕೆ

ಹೊರ್ಮುಜ್ ದಾಟಿದ ಸೂಪರ್‌ಯಾಚ್ ನಾರ್ಡ್

ಮಸ್ಕತ್: ರಷ್ಯಾದ ಸಿರಿವಂತ ಉದ್ಯಮಿ ಅಲೆಕ್ಸಿ ಮೊರ್ದಾಶೋವ್ ಒಡೆತನದ 50 ಕೋಟಿ ಡಾಲರ್(4,730 ಕೋಟಿ ರು.) ಮೌಲ್ಯದ ಸೂಪರ್ ಯಾಚ್ (ಬಹುಮಹಡಿಗಳ ನೌಕೆ) 'ನಾರ್ಡ್', ಇರಾನ್-ಅಮೆರಿಕ ದಿಗ್ಬಂಧನದ ನಡುವೆಯೇ ಹೊರ್ಮುಜ್ ಜಲಸಂಧಿ ದಾಟಿದೆ. ದುಬೈನಿಂದ ಏ.25ರಂದು ಹೊರಟ ಯಾಚ್, ಭಾನುವಾರ ಬೆಳಗ್ಗೆ ಹೊರ್ಮುಜ್ ಜಲಸಂಧಿ ದಾಟಿದ್ದು, ಸದ್ಯ ಒಮಾನ್‌ನ ಮಸ್ಕತ್‌ನಲ್ಲಿರುವ ಅಲ್‌ಮೌಜ್ ಮರೀನಾ ಬಂದರು ತಲುಪಿದೆ. ರಷ್ಯಾ-ಇರಾನ್ ನಡುವಿನ ಸ್ನೇಹ ಸಂಬಂಧದ ಕಾರಣ ರಷ್ಯಾ ಉದ್ಯಮಿಯ ಐಶಾರಾಮಿ ನೌಕೆಗೆ ಹೊರ್ಮುಜ್ ಸುಲಭವಾಗಿ ದಾಟಲು ಅವಕಾಶವಾಗಿದೆ.

ರಷ್ಯಾದ ದೊಡ್ಡ ಉಕ್ಕು ಮತ್ತು ಗಣಿಗಾರಿಕೆ ಕಂಪನಿ ಸೆವೆರ್‌ಸ್ಟಾಲ್ ಮತ್ತು ಚಿನ್ನದ ಗಣಿಗಾರಿಕೆ ಕಂಪನಿ ನಾಡರ್‌ಗೋಲ್ಡ್‌ನ ಮಾಲೀಕ ಅಲೆಕ್ಸಿ ಮೊರ್ದಾಶೋವ್ ಅಧ್ಯಕ್ಷ ಪುಟಿನ್‌ರ ಆಪ್ತ ವಲಯದ ವ್ಯಕ್ತಿ. ಅವರ ಒಡೆತನದ ಈ ಯಾಚ್ 142 ಮೀ. ಉದ್ದವಿದ್ದು, 20 ಐಷಾರಾಮಿ ಕೊಠಡಿಗಳು, ಈಜುಕೊಳ, ಜಿಮ್, ಸ್ಪಾ, ಸಿನಿಮಾ ಥಿಯೇಟರ್ ಮತ್ತು ಎರಡು ಹೆಲಿಪ್ಯಾಡ್ ಒಳಗೊಂಡಿದೆ. ಹಾಗಾಗಿ ವಿಶ್ವದ 14ನೇ ಅತೀ ದೊಡ್ಡ ಐಶಾರಾಮಿ ನೌಕೆ ಎನಿಸಿಕೊಂಡಿದೆ. ಇದನ್ನು ಜರ್ಮನಿಯ ಲುರ್ಸೆನ್ ಕಂಪನಿ ನಿರ್ಮಿಸಿದೆ.

ಹಾಸ್ಯ, ಚರ್ಚೆ, ರಾಜತಾಂತ್ರಿಕತೆ ಮೇಳೈಸಿದ ಶ್ವೇತಭವನದ ಔತಣಕೂಟ

ಟ್ರಂಪ್‌ಗೆ 80 ವರ್ಷ ಹಳೆ ಘಂಟೆ ಚಾರ್ಲ್ಸ್ ಉಡುಗೊರೆ

ವಾಷಿಂಗ್ಟನ್: ಬ್ರಿಟನ್ ನೆರವು ಇಲ್ಲದೇ ಇದ್ದರೆ ಅಮೆರಿಕನ್ನರು ಫ್ರೆಂಚ್ ಮಾತನಾಡಬೇಕಾಗುತ್ತಿತ್ತು ಎಂದು ಬ್ರಿಟನ್ ಕಿಂಗ್ ಚಾರ್ಲ್ಸ್-3 ಅವರು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಲಘು ದಾಟಿಯಲ್ಲೇ ಚುರುಕು ಮುಟ್ಟಿಸಿದ್ದಾರೆ. ಅಮೆರಿಕದ ಸಹಾಯವಿಲ್ಲದಿದ್ದರೆ ಯುರೋಪ್ ರಾಷ್ಟ್ರಗಳು ಜರ್ಮನ್ ಮಾತನಾಡುತ್ತಿದ್ದವು ಎಂದು ಟ್ರಂಪ್ ಹೇಳಿದ್ದರು.

ಬ್ರಿಟನ್‌ನ ಕಿಂಗ್ ಚಾರ್ಲ್ಸ್-3 ಅವರ ಗೌರವಾರ್ಥ ಮಂಗಳವಾರ ಶ್ವೇತಭವನದಲ್ಲಿ ಔತಣಕೂಟ ಏರ್ಪಡಿಸಲಾಗಿತ್ತು. ಈ ವೇಳೆ, ಚಾರ್ಲ್ಸ್-3 ಮತ್ತು ಟ್ರಂಪ್ ನಡುವೆ ಫ್ರೆಂಚ್ ಭಾಷೆಗೆ ಸಂಬಂಧಿಸಿ ಸ್ವಾರಸ್ಯಕರ ಚರ್ಚೆ ನಡೆಯಿತು.

ಔತಣಕೂಟದ ಭಾಷಣದಲ್ಲಿ ಕಿಂಗ್ ಚಾರ್ಲ್ಸ್, 'ಮಿ ಟ್ರಂಪ್, ನೀವು ಹೇಳಿದಂತೆ ಅಮೆರಿಕ ಇಲ್ಲದೇ ಇದ್ದಿದ್ದರೆ ಯುರೋಪ್ ಜನರು ಜರ್ಮನ್ ಮಾತನಾಡುತ್ತಿದ್ದರು. ಅದೇ ರೀತಿ ಬ್ರಿಟನ್ ಸಹಾಯ ಮಾಡದೇ ಇದ್ದಿದ್ದರೆ ಅಮೆರಿಕನ್ನರು ಫ್ರೆಂಚ್ ಮಾತನಾಡಬೇಕಾಗುತ್ತಿತ್ತು ಎಂದು ಹೇಳಿ ನಗೆಬೀರಿದರು. ಶ್ವೇತಭವನದ 'ಈಸ್ಟ್‌ವಿಂಗ್' ಮರುನಿರ್ಮಾಣ ವಿಷಯವಾಗಿಯೂ ಟ್ರಂಪ್‌ರನ್ನು ಚಾರ್ಲ್ಸ್ ನಗುತ್ತಲೇ ಅಣಕಿಸಿದರು. 1814ರಲ್ಲಿ ಬ್ರಿಟಿಷರು 'ವೈಟ್ ಹೌಸ್' ಸುಟ್ಟುಹಾಕಿದ್ದ ಘಟನೆ ಕೂಡ ಒಂದು ರೀತಿಯಲ್ಲಿ 'ರಿಯಲ್' ಎಸ್ಟೇಟ್ ಅಭಿವೃದ್ಧಿ ಎಂದು ನಕ್ಕರು. 1773ರ ಬೋಸ್ಟನ್ ಟೀ ಪಾರ್ಟಿ ಘಟನೆ ನೆನಪಿಸಿ, ಇದಂತೂ ಎಲ್ಲಕ್ಕಿಂತ ದೊಡ್ಡ ಪಾರ್ಟಿ ಆಗಿತ್ತು ಎಂದು ಚಾರ್ಲ್ಸ್ ಚಟಾಕಿ ಸಿಡಿಸಿದರು. ಇದೇ ಸಂದರ್ಭ, 2ನೇ ವಿಶ್ವಯುದ್ಧ ಸಮಯ(1944)ದಲ್ಲಿ ಬ್ರಿಟನ್ ಜಲಾಂತರ್ಗಾಮಿ 'ಎಚ್ ಎಂಎಸ್ ಟ್ರಂಪ್'ಗಾಗಿ ತಯಾರಿಸಲಾಗಿದ್ದ ಮಿಶ್ರಲೋಹದ ದೊಡ್ಡ ಘಂಟೆಯನ್ನು ಟ್ರಂಪ್‌ಗೆ ಚಾರ್ಲ್ಸ್ ಅಮೆರಿಕ ಸ್ವಾತಂತ್ರ್ಯ ದಿನದ ಉಡುಗೊರೆಯಾಗಿ ನೀಡಿದರು. ಅಷ್ಟಕ್ಕೆ ಸುಮ್ಮನಾಗದೇ 'ಅಧ್ಯಕ್ಷ ಟ್ರಂಪ್, ನಿಮಗೆ ನಮ್ಮ ಅಗತ್ಯ ಇದೆ ಎಂದಾಗಲೆಲ್ಲಾ ನಮ್ಮನ್ನು ತುರ್ತಾಗಿ ಸಂಪರ್ಕಿಸಲು ಈ ಗಂಟೆ ಬಾರಿಸಿ' ಎಂದು ಚಟಾಕಿ ಹಾರಿಸಿ ನಗೆ ಬೀರಿದರು.

ಡೊನಾಲ್ಡ್ ಟ್ರಂಪ್‌ಗೆ ಕಿಂಗ್ಸ್ ಚಾರ್ಲ್ಸ್-3 ನೀಡಿದ ಉಡುಗೊರೆ ಮಿಶ್ರಲೋಹದ ಘಂಟೆ. ಅದರ ಮೇಲೆ ಜಲಾಂತರ್ಗಾಮಿ ಹೆಸರು 'ಟ್ರಂಪ್-1944' ಎಂದು ಕೆತ್ತಲಾಗಿದೆ.

ಚಾರ್ಲ್ಸ್ ಭಾಷಣಕ್ಕೆ ಟ್ರಂಪ್ ನಗೆ-ಚಪ್ಪಾಳೆ

'ನಿಮ್ಮ ಭಾಷಣ ಅದ್ಭುತವಾಗಿತ್ತು' ಎಂದು ಚಾರ್ಲ್ಸ್ ಅವರನ್ನು ಅಭಿನಂದಿಸಿದ ಟ್ರಂಪ್, ಔತಣಕೂಟದಲ್ಲಿ ಹಾಜರಿದ್ದ ಅಮೆರಿಕದ ಗಣ್ಯರು, ಸಚಿವರು, ಉನ್ನತ ಅಧಿಕಾರಿಗಳು ಆಸನದಿಂದ ಮೇಲೆದ್ದು ಚಪ್ಪಾಳೆ ತಟ್ಟುವಂತೆ ಮಾಡಿದರು. ಶ್ವೇತಭವನದ ಭೋಜನಕೂಟ ರಾಜತಾಂತ್ರಿಕತೆ ಜತೆಗೆ ಹಾಸ್ಯ, ಲಘು ಮಾತುಕತೆ, ಇತಿಹಾಸ ಮತ್ತು ರಾಜಕೀಯ ಚರ್ಚೆಗಳ ಸಮನ್ವಯವಾಗಿತ್ತು. ಅಮೆರಿಕ ಸ್ವಾತಂತ್ರ್ಯ ದಿನದ 250ನೇ ವರ್ಷಾಚರಣೆ ಅಂಗವಾಗಿ ಕಿಂಗ್ ಚಾರ್ಲ್ಸ್-3 ಮತ್ತು ಕ್ವೀನ್ ಕ್ಯಾಮಿಲ್ಲಾ ಸೋಮವಾರ ವಾಷಿಂಗ್ಟನ್‌ಗೆ ತೆರಳಿದ್ದು, ನಾಲ್ಕು ದಿನ ಅಮೆರಿಕದಲ್ಲಿರುವರು.

ಮೇ 1ರಂದು ನಿರ್ಧಾರ ಜಾರಿಗೆ ಬರಲಿದೆ: ಯುಎಇ ಇಂಧನ ಸಚಿವ ಸುಹೇಲ್

ತೈಲರಫ್ತು ದೇಶಗಳ ಸಂಘ ಒಪೆಕ್ ತ್ಯಜಿಸಿದ ಯುಎಇ

ಅಬುಧಾಬಿ: ತೈಲ ರಫ್ತು ದೇಶಗಳ ಒಕ್ಕೂಟವಾದ ಒಪೆಕ್ ಮತ್ತು ಒಪೆಕ್+ಯಿಂದ ಮೇ 1ರಂದು ಹೊರಬರುವುದಾಗಿ ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಘೋಷಿಸಿದೆ.

ಒಂದೆಡೆ, ಇರಾನ್ ಬೆದರಿಕೆ ಮತ್ತು ಹಡಗು ಸಂಚಾರದ ಮೇಲಿನ ನಿರ್ಬಂಧ ಮತ್ತು 'ಐಆರ್‌ಜಿಸಿ'ಯ ದಾಳಿಗಳಿಂದಾಗಿ 'ಯುಎಇ' ಸೇರಿದಂತೆ ಒಪೆಕ್ ಒಕ್ಕೂಟದ ಸದಸ್ಯ ದೇಶಗಳು ಹೊರ್ಮುಜ್ ಜಲಸಂಧಿ ಮೂಲಕ ರಫ್ತು ಚಟುವಟಿಕೆ ನಡೆಸುವುದಕ್ಕೆ ತೊಂದರೆ ಎದುರಿಸುತ್ತಿವೆ. ಮತ್ತೊಂದೆಡೆ, ಅಮೆರಿಕ-ಇಸ್ರೇಲ್ ಜಂಟಿಯಾಗಿ ಇರಾನ್ ವಿರುದ್ಧ ಫೆ.28ರಂದು ಯುದ್ಧ ಆರಂಭಿಸಿದ ನಂತರ ಪಶ್ಚಿಮ ಏಷ್ಯಾ ಭಾಗದಲ್ಲಿ ದೊಡ್ಡ ಬಿಕ್ಕಟ್ಟು ಉಂಟಾಗಿದ್ದು, ತೈಲ ಸಂಪದ್ಭರಿತ ದೇಶಗಳು ಕಚ್ಚಾತೈಲ ಉತ್ಪಾದನೆ ಪ್ರಮಾಣ ತಗ್ಗಿಸುವುದು ಅನಿವಾರ್ಯವಾಗಿದೆ. ಪರಿಣಾಮ ಜಾಗತಿಕ ಮಟ್ಟದಲ್ಲಿ ಭಾರೀ ಇಂಧನ ಬಿಕ್ಕಟ್ಟು ಸೃಷ್ಟಿಯಾಗಿದೆ. ಹಾಗಾಗಿ ಯುಎಇ ಸ್ವತಂತ್ರವಾಗಿರಲು ಬಯಸಿದೆ ಎನ್ನಲಾಗಿದೆ. 'ಯುಎಇ ತನ್ನದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಸಮರ್ಥವಾಗಿದೆ' ಎಂದು ಹೇಳಿರುವ 'ಯುಎಇ' ಇಂಧನ ಸಚಿವ, 'ಒಪೆಕ್' ಒಕ್ಕೂಟದಿಂದ ಹೊರಬರುವ ನಿರ್ಧಾರವನ್ನು ಸ್ವತಂತ್ರವಾಗಿ ತೆಗೆದುಕೊಳ್ಳಲಾಗಿದೆ. ಯಾರ ಒತ್ತಡವೂ ಇಲ್ಲ. ಸೌದಿ ಅರೇಬಿಯ ಸೇರಿದಂತೆ ಒಕ್ಕೂಟದ ಯಾವ ದೇಶದ ಜತೆಗೂ ಸಮಾಲೋಚನೆ ನಡೆಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇಂಧನ ತೈಲಗಳ ಉತ್ಪಾದನಾ ನೀತಿ, ರಾಷ್ಟ್ರೀಯ ಹಿತಾಸಕ್ತಿ ಮತ್ತು ಭವಿಷ್ಯದ ದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಮಾರುಕಟ್ಟೆಯ ತಕ್ಷಣದ ಅಗತ್ಯಗಳನ್ನು ಪೂರೈಸುವ ನಮ್ಮ ಬದ್ಧತೆಯನ್ನು ಈ ನಿರ್ಧಾರ ಆಧರಿಸಿದೆ ಎಂದು ಸಚಿವರು ಹೇಳಿದ್ದಾರೆ.



ತೈಲೋತ್ಪನ್ನ ದೇಶಗಳ ಒಕ್ಕೂಟ

ಕಚ್ಚಾತೈಲ ಉತ್ಪಾದನೆ-ಮಾರಾಟ ಸಂಬಂಧ ತೈಲೋತ್ಪನ್ನ ದೇಶಗಳಲ್ಲಿ ಸ್ಪಷ್ಟ ನೀತಿ ರೂಪಿಸಲೆಂದೇ 1960ರಲ್ಲಿ ಬಾಗ್ದಾದ್‌ನಲ್ಲಿ 'ಒಪೆಕ್' ಸಂಘಟನೆ ರಚಿಸಲಾಯಿತು. ಆರಂಭದಲ್ಲಿ ಇರಾಕ್, ಇರಾನ್, ಕುವೈತ್, ಸೌದಿ ಅರೇಬಿಯ ಮತ್ತು ವೆನೆಜುವೆಲಾ ದೇಶಗಳು ಇದರ ಭಾಗವಾದವು. ನಂತರ, ಸದಸ್ಯತ್ವ ವಿಸ್ತರಿಸಿದ ಬಳಿಕ ಸೌದಿ ಅರೇಬಿಯ, ಇರಾಕ್, ಇರಾನ್, ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ), ಲಿಬಿಯ, ಇಂಡೋನೇಷ್ಯಾ, ಕುವೈತ್, ನೈಜೀರಿಯ ಮತ್ತು ವೆನೆಜುವೆಲಾ ದೇಶಗಳು ಸದಸ್ಯತ್ವ ಹೊಂದಿವೆ. ಇದಕ್ಕೆ ವಿಶ್ವದ ಶೇ.30ರಷ್ಟು ಕಚ್ಚಾತೈಲ ಉತ್ಪಾದನೆ ಸಾಮರ್ಥ್ಯವಿತ್ತು. 2016ರಲ್ಲಿ 'ಒಪೆಕ್ ಪ್ಲಸ್' ರಚಿಸಿದಾಗ 12 ಸದಸ್ಯರ ಹೊರತು ರಷ್ಯಾ, ಅಜರ್‌ಬೈಜಾನ್, ಬಹ್ರೇನ್, ಬ್ರೂನಿ, ಕಝಕಿಸ್ತಾನ್, ಮಲೇಷ್ಯಾ, ಮೆಕ್ಸಿಕೊ, ಒಮಾನ್ ಮತ್ತು ದಕ್ಷಿಣ ಸುಡಾನ್ ಸದಸ್ಯತ್ವ ಪಡೆದವು. ಆಗ ಕಚ್ಚಾತೈಲ ಉತ್ಪಾದನಾ ಸಾಮರ್ಥ್ಯ ವಿಶ್ವದ ಒಟ್ಟು ತೈಲ ಉತ್ಪಾದನೆಯ ಶೇ.41ರಷ್ಟಕ್ಕೆ ಹೆಚ್ಚಿತು.

ತೈಲ ಉತ್ಪಾದನೆ ಸಾಮರ್ಥ್ಯ ವೃದ್ಧಿ

ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) 2027ರ ವೇಳೆಗೆ ತನ್ನ ಕಚ್ಚಾತೈಲ ಉತ್ಪಾದನೆ ಸಾಮರ್ಥ್ಯವನ್ನು ದಿನಕ್ಕೆ 50 ಲಕ್ಷ ಬ್ಯಾರಲ್‌ಗಳ ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳಲು ಯೋಜಿಸಿದ್ದು, ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಅತ್ಯಧಿಕ ಕಚ್ಚಾತೈಲ ರಫ್ತು ಮಾಡುವ ಗುರಿ ಇಟ್ಟುಕೊಂಡಿದೆ. ಅದಕ್ಕಾಗಿ ಭಾರೀ ಪ್ರಮಾಣದಲ್ಲಿ ಬಂಡವಾಳ ಹೂಡಿಕೆ ಮಾಡಲು ಮುಂದಾಗಿದೆ ಎಂದು ವರದಿಯಾಗಿದೆ.

ಚೀನಾ, ರಷ್ಯಾ ರಕ್ಷಣಾ ಸಚಿವರ ಜತೆ ರಾಜನಾಥ್ ಸಿಂಗ್ ಸಭೆ

ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬಿಸ್ಕೆಕ್ ನಗರದಲ್ಲಿ ಚೀನಾ, ರಷ್ಯಾ ರಕ್ಷಣಾ ಸಚಿವರ ಜತೆ ಮಾತುಕತೆ ನಡೆಸಿದರು.

ದೆಹಲಿ: ಶಾಂಘೈ ಸಹಕಾರ ಸಂಸ್ಥೆ(ಎಸ್‌ಸಿಒ) ದೇಶಗಳ ರಕ್ಷಣಾ ಸಚಿವ ಶೃಂಗಸಭೆಯಲ್ಲಿ ಭಾಗವಹಿಸಲು ಸದ್ಯ ಬಿಷ್ಕೆಕ್ ನಗರದಲ್ಲಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಚೀನಾದ ರಕ್ಷಣಾ ಸಚಿವ ಅಡ್ಮಿರಲ್ ಡಾಂಗ್ ಜುನ್ ಅವರನ್ನು ಮಂಗಳವಾರ ಭೇಟಿ ಮಾಡಿದ್ದರು. ಇಬ್ಬರೂ ನಾಯಕರು ಭಾರತ-ಚೀನಾ ನಡುವಿನ ವಾಸ್ತವ ನಿಯಂತ್ರಣ ರೇಖೆ(ಎಲ್‌ಎಸಿ)ಯಲ್ಲಿ ಶಾಂತಿ ಸ್ಥಾಪನೆ, ಪಶ್ಚಿಮ ಏಷ್ಯಾ ಭಾಗದಲ್ಲಿನ ಬಿಕ್ಕಟ್ಟು ಮತ್ತಿತರ ವಿಷಯಗಳ ಕುರಿತು ಚರ್ಚೆ ನಡೆಸಿದರು.

ಚೀನಾದ ಸಹವರ್ತಿ ಅಡ್ಮಿರಲ್ ಡಾಂಗ್ ಜುನ್ ಅವರ ಜತೆ ಸಮಾಲೋಚನೆ ನಡೆಸಲು ಅವಕಾಶವಾಗಿದ್ದಕ್ಕೆ ಸಂತಸವಾಗಿದೆ ಎಂದು ರಾಜನಾಥ್ ಸಿಂಗ್ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. ಫೋಟೊವನ್ನೂ ಹಂಚಿಕೊಂಡಿದ್ದಾರೆ.

ಪೂರ್ವ ಲಡಾಖ್ ಗಡಿಯಲ್ಲಿ ಭಾರತ-ಚೀನಾ ಯೋಧರ ನಡುವಿನ ಸಂಘರ್ಷದ ನಂತರ ಎರಡೂ ದೇಶಗಳ ಸಂಬಂಧ ಹದಗೆಟ್ಟಿದೆ. ಸಂಬಂಧ ಸರಿಪಡಿಸಿಕೊಳ್ಳುವ ದಿಶೆಯಲ್ಲಿ ಎರಡೂ ದೇಶಗಳು ಹಲವು ಹಂತಗಳಲ್ಲಿ ಮಾತುಕತೆ ನಡೆಸುತ್ತಿವೆ.

ಇದೇ ವೇಳೆ, ರಷ್ಯಾದ ರಕ್ಷಣಾ ಸಚಿವ ಆಂಡ್ರ್ಯೂ ಬೆಲೌಸೊವ್ ಅವರ ಜತೆಗೂ ದ್ವಿಪಕ್ಷೀಯ ಸಭೆ ನಡೆಸಿದರು. ಉಭಯ ನಾಯಕರೂ ರಕ್ಷಣಾ ವಲಯದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಸಮಾಲೋಚನೆ ನಡೆಸಿದರು ಎಂದು ವರದಿಯಾಗಿದೆ. 'ಎಸ್‌ಸಿಒ' ಒಕ್ಕೂಟದಲ್ಲಿ ಚೀನಾ, ಭಾರತ, ರಷ್ಯಾ, ಕಝಖಸ್ತಾನ್, ಕಿರ್ಗಿಸ್ತಾನ್, ತಜಕಿಸ್ತಾನ್, ಉಜ್ಬೇಕಿಸ್ತಾನ್, ಇರಾನ್, ಬೆಲಾರುಸ್ ಮತ್ತು ಪಾಕಿಸ್ತಾನ್ ಸದಸ್ಯರಾಗಿವೆ. ಭಾರತ 2017ರಲ್ಲಿ 'ಎಸ್‌ಸಿಒ'ದ ಪೂರ್ಣ ಪ್ರಮಾಣದ ಸದಸ್ಯನಾಗಿದೆ.

ಸಚಿವ ನಿತೇಶ್‌ರಾಣೆ 1 ತಿಂಗಳು ಜೈಲಿಗೆ

ಮುಂಬೈ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ(ಎನ್‌ಎಚ್‌ಎಐ) ಎಂಜಿನಿಯರ್ ಮೇಲೆ 2020ರಲ್ಲಿ ಕೆಸರು ಎರಚಿದ ಪ್ರಕರಣದಲ್ಲಿ ಮಹಾರಾಷ್ಟ್ರ ಸರಕಾರದ ಮೀನುಗಾರಿಕೆ ಮತ್ತು ಬಂದರು ಅಭಿವೃದ್ಧಿ ಸಚಿವ ನಿತೇಶ್ ನಾರಾಯಣ ರಾಣೆ ಅವರಿಗೆ ಸಿಂಧುದುರ್ಗದ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ 1 ತಿಂಗಳ ಜೈಲು ಶಿಕ್ಷೆ ವಿಧಿಸಿದೆ. ಆದರೆ, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಕಾಲಾವಕಾಶ ನೀಡಲಾಗಿರುವುದರಿಂದ ಸಚಿವ ರಾಣೆ ಬಂಧನ ಸಮಸ್ಯೆಯಿಂದ ಪಾರಾಗಿದ್ದಾರೆ. ಐಪಿಸಿ ಸೆಕ್ಷನ್ 504 (ಸಾರ್ವಜನಿಕ ಶಾಂತಿಗೆ ಭಂಗ ತರುವ ಉದ್ದೇಶದಿಂದ ಅವಮಾನ) ಅನ್ವಯ ನಿತೇಶ್ ರಾಣೆ ದೋಷಿ ಎಂದು ನ್ಯಾಯಾಲಯ ತೀರ್ಮಾನಿಸಿದೆ. ತಿಂಗಳ ಜೈಲು ಶಿಕ್ಷೆ ಜತೆಗೆ 1 ಲಕ್ಷ ರು. ದಂಡವನ್ನೂ ವಿಧಿಸಲಾಗಿದೆ. ದಂಡ ಮೊತ್ತದಲ್ಲಿ 50 ಸಾವಿರ ರು.ಗಳನ್ನು ಸಂತ್ರಸ್ತ ಎಂಜಿನಿಯರ್‌ಗೆ ಪರಿಹಾರವಾಗಿ ಕೊಡುವಂತೆಯೂ ಕೋರ್ಟ್ ಆದೇಶಿಸಿದೆ. ಸಚಿವರಾಗಿರಲಿ, ಶಾಸಕರಾಗಿರಲಿ ಯಾರೊಬ್ಬರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು. ಸಾರ್ವಜನಿಕ ಸೇವಕರು ಘನತೆಗೆ ಧಕ್ಕೆ ತರುವಂತೆ ವರ್ತಿಸಬಾರದು ಎಂದೂ ನ್ಯಾಯಾಧೀಶರು ತೀರ್ಪಿನಲ್ಲಿ ಬುದ್ಧಿಮಾತು ಹೇಳಿದ್ದಾರೆ. ಇತರೆ 29 ಆರೋಪಿಗಳನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ.

ಸ್ಥಳೀಯ ಸಂಸ್ಥೆ ಚುನಾವಣೆ ಬಿಜೆಪಿ ಪ್ರಾಬಲ್ಯ । ಮೋರ್ಬಿ, ಪೋರಬಂದರ್ 'ಎಂಸಿ'ಗಳ 52 ಕ್ಷೇತ್ರಗಳೂ ಬಿಜೆಪಿಗೆ

ಗುಜರಾತ್‌ನ 15 ಮುನಿಸಿಪಲ್ ಕಾರ್ಪೊರೇಷನ್ ಕಮಲಮಯ

ಅಹಮದಾಬಾದ್: ಗುಜರಾತ್ ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ) ಜಯಭೇರಿ ಭಾರಿಸಿದೆ. ಅಹಮದಾಬಾದ್, ಸೂರತ್, ವಡೋದರಾ, ರಾಜ್‌ಕೋಟ್ ಸೇರಿದಂತೆ ರಾಜ್ಯದ ಎಲ್ಲೆಡೆಯ 15 ಮುನಿಸಿಪಲ್ ಕಾರ್ಪೊರೇಷನ್‌ಗಳಲ್ಲೂ ಕಮಲವೇ ಅರಳಿದೆ. ಎದುರಾಳಿ ಪಕ್ಷಗಳೆಲ್ಲವೂ ಧೂಳಿಪಟವಾಗಿವೆ.

ಮೋರ್ಬಿ ಮತ್ತು ಪೋರಬಂದರ್ ಮುನಿಸಿಪಲ್ ಕಾರ್ಪೊರೇಷನ್‌ಗಳಲ್ಲಿನ ಎಲ್ಲಾ 52 ಕ್ಷೇತ್ರಗಳಲ್ಲಿಯೂ ಬಿಜೆಪಿಯೇ ಗೆದ್ದಿದೆ. ನವ್‌ಸಾರಿ ಮುನಿಸಿಪಲ್ ಕಾರ್ಪೊರೇಷನ್‌ನ 52 ಕ್ಷೇತ್ರಗಳಲ್ಲಿ 50 ಕ್ಷೇತ್ರಗಳು(ಶೇ.96.20) ಬಿಜೆಪಿ ಪಾಲಾಗಿದೆ. ಇಲ್ಲಿ 2 ಸ್ಥಾನಗಳಷ್ಟೇ ಕಾಂಗ್ರೆಸ್‌ಗೆ ಸಿಕ್ಕಿದೆ. ಮೂರೂ ಮುನಿಸಿಪಾಲಿಟಿ ಕಾರ್ಪೊರೇಷನ್‌ಗಳಲ್ಲಿ ಅಧಿಕೃತ ವಿರೋಧ ಪಕ್ಷವೇ ಇಲ್ಲದಂತಾಗಿದೆ. ವಾಪಿ, ನವ್‌ಸಾರಿ, ಗಾಂಧಿಧಾಮ್ ಸೇರಿದಂತೆ ಹೊಸದಾಗಿ ರಚನೆಯಾಗಿದ್ದ ಮುನಿಸಿಪಲ್ ಕಾರ್ಪೊರೇಷನ್(ಎಂಸಿ)ಗಳೂ ಕೇಸರಿ ಬಾವುಟ ಹಾರಿಸಿವೆ. ಎಲ್ಲಾ 'ಎಂಸಿ'ಗಳಲ್ಲಿಯೂ ಶೇ.50ಕ್ಕೂ ಹೆಚ್ಚು ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳೇ ಗೆದ್ದಿದ್ದಾರೆ.

ಅದಲ್ಲದೇ, ರಾಜ್ಯದ 84 ಮುನಿಸಿಪಾಲಿಟಿಗಳಲ್ಲಿ 78ರಲ್ಲಿನ ಆಡಳಿತವೂ ಕಮಲ ಪಕ್ಷದ್ದೇ ಆಗಿದೆ. 34 ಜಿಲ್ಲಾ ಪಂಚಾಯತ್‌ಗಳಲ್ಲಿಯೂ 33 ಜಿಪಂಗಳನ್ನೂ ಬಿಜೆಪಿ ಗೆದ್ದುಕೊಂಡಿದೆ. 260 ತಾಲೂಕು ಪಂಚಾಯತ್‌ಗಳಲ್ಲಿ 220 ತಾಪಂಗಳು ಬಿಜೆಪಿ ಮಡಿಲಿಗೆ ಸೇರಿವೆ. ಎಲ್ಲಾ ಕಡೆಯೂ ಕಾಂಗ್ರೆಸ್ ಅಭ್ಯರ್ಥಿಗಳು ಹಿನ್ನಡೆ ಅನುಭವಿಸಿದ್ದಾರೆ. ಎಎಪಿ ನರ್ಮದಾ ಜಿಲ್ಲಾ ಪಂಚಾಯಿತಿ ಮತ್ತು ಬುಡಕಟ್ಟು ಜನರೇ ಹೆಚ್ಚಿರುವ ಪ್ರದೇಶಗಳಲ್ಲಷ್ಟೇ ಗೆಲುವು ಕಂಡಿದೆ.

ರಾಜ್ಯದಲ್ಲಿನ ಮುನಿಸಿಪಲ್ ಕಾರ್ಪೊರೇಷನ್, ನಗರ ಸಭೆ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಸೇರಿ ಒಟ್ಟು 9,200ಕ್ಕೂ ಹೆಚ್ಚು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 4.18 ಕೋಟಿ ಮತದಾರರು ಮತ ಚಲಾಯಿಸಿದ್ದು, ಶೇ.60ರಷ್ಟು ಮತಗಳನ್ನು ಬಿಜೆಪಿಯೇ ಪಡೆದುಕೊಂಡಿದೆ. ಕಾಂಗ್ರೆಸ್‌ಗೆ ಶೇ.26.46, ಎಎಪಿಗೆ ಶೇ.10.27ರಷ್ಟು ಮತ ಸಿಕ್ಕಿವೆ.

'ಅಹಮದಾಬಾದ್ ಎಂಸಿ'ಯ 192 ವಾರ್ಡ್‌ಗಳಲ್ಲಿ 160 ಬಿಜೆಪಿಗೆ, 32 ಕಾಂಗ್ರೆಸ್‌ಗೆ ಸಿಕ್ಕಿವೆ. 'ಸೂರತ್ ಎಂಸಿ'ಯ 120 ವಾರ್ಡ್‌ಗಳಲ್ಲಿ 115ರಲ್ಲಿ ಬಿಜೆಪಿ ಗೆದ್ದಿದ್ದರೆ, ಕಾಂಗ್ರೆಸ್‌ಗೆ 1 ಕ್ಷೇತ್ರದಲ್ಲಷ್ಟೇ ಗೆಲ್ಲಲು ಸಾಧ್ಯವಾಗಿದೆ. ಮುಂದಿನ ವರ್ಷವೇ(2027) ರಾಜ್ಯ ವಿಧಾನ ಸಭೆಗೆ ಚುನಾವಣೆ ನಡೆಯಲಿರುವುದರಿಂದ ಈಗಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಭವಿಷ್ಯದ ದಿಕ್ಸೂಚಿ ಎಂದೇ ಪರಿಗಣಿಸಲಾಗಿದೆ.

ರಾಜ್ಯದ 22 ಮುನಿಸಿಪಲ್ ಕಾರ್ಪೊರೇಷನ್‌ಗಳ ಅವಧಿಯಿನ್ನೂ ಪೂರ್ಣಗೊಳ್ಳದ ಕಾರಣ ಅವೆರಡರಲ್ಲಿ ಚುನಾವಣೆ ನಡೆದಿಲ್ಲ.

ಶೇ.100 ಮುಸ್ಲಿಂ ಮತದಾರ ವಾರ್ಡ್‌ನಲ್ಲಿ ಗೆದ್ದ ಹಿಂದೂ

ಗೋಧ್ರಾ ಪುರಸಭೆ ಚುನಾವಣೆಯಲ್ಲಿ ಒಂದು ವಾರ್ಡ್‌ನಲ್ಲಿ ಇತಿಹಾಸ ಸೃಷ್ಟಿಯಾಗಿದೆ. ಶೇ.100ರಷ್ಟು ಮುಸ್ಲಿಂ ಮತದಾರರೇ ಇರುವ 7ನೇ ವಾಡ್‌ನಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಹಿಂದೂ ಮಹಿಳೆ ಅಪೇಕ್ಷಾಬೆನ್ ನೈನೇಶ್ಭಾಯ್ ಸೋನಿ ಗೆದ್ದಿದ್ದಾರೆ. ಅಚ್ಚರಿ ಎಂದರೆ, ಅಪೇಕ್ಷಾಬೆನ್ ವಾರ್ಡ್ 7ರ ಮತದಾರರೇ ಅಲ್ಲ. ಆದರೆ, ವಾರ್ಡ್ 7ರ ನಿವಾಸಿಗಳ ವಿಶ್ವಾಸ ಗಳಿಸಿದ್ದಾರೆ. ಶೇ.100 ಮುಸ್ಲಿಂ ಮತದಾರರ ವಾರ್ಡ್‌ನಲ್ಲಿ ಅಪೇಕ್ಷಾಬೆನ್ ಸೋನಿ ಅವರ ಈ ಗೆಲುವು ರಾಜಕೀಯ ನಿರೂಪಣೆಯನ್ನೇ ಬದಲಿಸುವಂತಿದೆ. ಸ್ಥಳೀಯ ಆಡಳಿತಕ್ಕೆ ಜಾತಿ-ಮತ-ಪಂಥ ಮೀರಿದ ಸಮರ್ಥ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕೆಂದು ಮುಸ್ಲಿಂ ಮತದಾರರು ನಿರ್ಣಯಿಸಿದ್ದರಿಂದಲೇ ಅಪೇಕ್ಷಾಬೆನ್ ಗೆಲುವು ಸಾಧ್ಯವಾಗಿದೆ ಎಂಬ ವಿಶ್ಲೇಷಣೆ ಕೇಳಿಬಂದಿದೆ.

ಸಮಾಚಾರ ಸಣ್ಣದಲ್ಲ

ಮಲ್ಲಿಕಾರ್ಜುನ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ಕೆ.ಆರ್.ಪೇಟೆ: ಸಮಾಜ ಸೇವಕ ಮಲ್ಲಿಕಾರ್ಜುನ್ ಅವರ ಜನ್ಮದಿನದ ಅಂಗವಾಗಿ, ಶ್ರೀ ಮಲ್ಲಿಕಾರ್ಜುನ ಚಾರಿಟಬಲ್ ಟ್ರಸ್ಟ್ ವತಿಯಿಂದ 2025-26ನೇ ಸಾಲಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಟ್ರಸ್ಟಿ ಗಂಜಿಗೆರೆ ಮಹೇಶ್ ತಿಳಿಸಿದ್ದಾರೆ.

ಅರ್ಹತೆಗಳು:

ಎಸ್ಸೆಸ್ಸೆಲ್ಸಿ: ರಾಜ್ಯ ಪಠ್ಯಕ್ರಮದಲ್ಲಿ ಶೇ. 95, ಸಿಬಿಎಸ್ ಸಿ ಮತ್ತು ಐಸಿಎಸ್ ಸಿ ನಲ್ಲಿ ಶೇ. 85 ಅಂಕ ಗಳಿಸಿರಬೇಕು.

ಪಿಯುಸಿ: ವಿಜ್ಞಾನ, ವಾಣಿಜ್ಯ ಹಾಗೂ ಕಲಾ ವಿಭಾಗದಲ್ಲಿ ಶೇ. 90 ಅಂಕ ಗಳಿಸಿರಬೇಕು.

ದಾಖಲೆಗಳು: ದೃಢೀಕೃತ ಅಂಕಪಟ್ಟಿ, ಆಧಾರ್ ಕಾರ್ಡ್ ಹಾಗೂ 3 ಭಾವಚಿತ್ರಗಳೊಂದಿಗೆ ಮೇ 16ರ ಸಂಜೆ 6 ಗಂಟೆಯೊಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಮೇ 20ರಂದು ಬೆಳಗ್ಗೆ 11 ಗಂಟೆಗೆ ಪುರಸ್ಕಾರ ಸಮಾರಂಭ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ಸುಜೇಂದ್ರ ಕುಮಾರ್, ಪೂರ್ಣಚಂದ್ರ ತೇಜಸ್ವಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಪುರುಷರ ಕಬಡ್ಡಿ ಪಂದ್ಯಾವಳಿಗೆ ಶಾಸಕ ಉದಯ ಚಾಲನೆ

ಮದ್ದೂರು: ನಗರದ ಕ್ರೀಡಾಂಗಣದಲ್ಲಿ ಮದ್ದೂರು ಉತ್ಸವದ ಅಂಗವಾಗಿ ಆಯೋಜಿಸಿರುವ ಪುರುಷರ ಕಬಡ್ಡಿ ಮತ್ತು ವಾಲಿಬಾಲ್ ಪಂದ್ಯಾವಳಿಗಳಿಗೆ ಶಾಸಕ ಹಾಗೂ ಕದಲೂರು ಉದಯ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಕೆ.ಎಂ.ಉದಯ ಚಾಲನೆ ನೀಡಿದರು. ಕ್ರೀಡಾಪಟುಗಳಿಗೆ ಸಮವಸ್ತ್ರ, ಕ್ರೀಡಾ ಪರಿಕರಗಳು ಹಾಗೂ ಇನ್ನಿತರ ಅಗತ್ಯ ವಸ್ತುಗಳನ್ನು ವಿತರಿಸಿ ಮಾತನಾಡಿದ ಯುವಜನಾಂಗ ಸಕ್ರಿಯವಾಗಿ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಮಾನಸಿಕ ಹಾಗೂ ದೈಹಿಕ ಸದೃಢತೆ ಹೊಂದುವಂತೆ ಕಿವಿಮಾತು ಹೇಳಿದರು. ವಿಜೇತ ಕ್ರೀಡಾಪಟುಗಳಿಗೆ ಟ್ರಸ್ಟ್ ವತಿಯಿಂದ ಆಕರ್ಷಕ ಬಹುಮಾನ ವಿತರಿಸಲು ತೀರ್ಮಾನಿಸಿದ್ದು ಪ್ರಥಮ ಬಹುಮಾನ 50 ಸಾವಿರ, ದ್ವಿತೀಯ 25 ಸಾವಿರ, ತೃತೀಯ 10 ಸಾವಿರ ಸೇರಿದಂತೆ ಹತ್ತು ತಂಡಗಳಿಗೆ ತಲಾ 10 ಸಾವಿರಗಳ ನಗದು ಪುರಸ್ಕಾರಕ್ಕೆ ವ್ಯವಸ್ಥೆ ಕಲ್ಪಿಸಿರುವುದಾಗಿ ವಿವರಿಸಿದರು. ಕ್ರೀಡಾ ಸ್ಫೂರ್ತಿಯೊಟ್ಟಿಗೆ ಎರಡು ದಿನಗಳು ಕ್ರೀಡಾಚಟುವಟಿಕೆಗಳಲ್ಲಿ ತಾಲೂಕಿನ ಯುವಜನತೆ ಭಾಗವಹಿಸುವಂತೆ ಸೋಲು ಗೆಲುವುಗಳನ್ನು ಸಮಾನಾಂತರವಾಗಿ ಸ್ವೀಕರಿಸುವಂತೆ ಕಿವಿಮಾತು ಹೇಳಿದರು. ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ, ತಾ.ಪಂ. ಇ.ಒ ರಾಮಲಿಂಗಯ್ಯ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಚಲುವರಾಜು, ನಿರ್ದೇಶಕ ಪಿ.ಸಂದರ್ಶ,ಬಿಇಒ ಧನಂಜಯ, ಪ್ರೊ ಕೃಷ್ಣ, ಕೆ.ಎಂ.ಉದಯ್ ಚಾರಿಟಬಲ್ ಟ್ರಸ್ಟ್ ನಿರ್ದೇಶಕ ಕೆ.ಎಂ.ರವಿ, ಉದ್ಯಮಿ ಹಳ್ಳಿಕೆರೆ ಸತೀಶ್, ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷ ಎಂ.ಡಿ.ಮಹಾಲಿಂಗಯ್ಯ, ತಾಲೂಕು ಮಹಿಳಾ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಮಮತಾ ಶಂಕರೇಗೌಡ ಇದ್ದರು.

ಬಂಟರ ಭವನಕ್ಕೆ ಶಂಕುಸ್ಥಾಪನೆ ಮೇ 1ಕ್ಕೆ

ಮಡಿಕೇರಿ: ಕೊಡಗು ಬಂಟರ ಭವನ ಟ್ರಸ್ಟ್ ಮತ್ತು ಕೊಡಗು ಜಿಲ್ಲಾ ಬಂಟರ ಸಂಘದ ವತಿಯಿಂದ ಮಡಿಕೇರಿಯ ಅಬ್ಬಿಫಾಲ್ಸ್ ರಸ್ತೆಯ ಬಳಿ ಕೊಡಗು ಬಂಟರ ಭವನ ನಿರ್ಮಾಣ ಕಾಮಗಾರಿಗೆ ಮೇ 1 ರಂದು ಶಂಕುಸ್ಥಾಪನೆ ನೆರವೇರಲಿದೆ ಎಂದು ಕೊಡಗು ಜಿಲ್ಲಾ ಬಂಟರ ಸಂಘದ ಅಧ್ಯಕ್ಷ ಬಿ.ಡಿ.ಜಗದೀಶ್ ರೈ ತಿಳಿಸಿದ್ದಾರೆ. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸುಮಾರು 12 ರಿಂದ 15 ಕೋಟಿ ರು. ವೆಚ್ಚದಲ್ಲಿ ಬಂಟರ ಭವನ ನಿರ್ಮಾಣಗೊಳ್ಳಲಿದೆ. ಶುಕ್ರವಾರ ಬೆಳಗ್ಗೆ 11 ಗಂಟೆಗೆ ತಮ್ಮ ಅಧ್ಯಕ್ಷತೆಯಲ್ಲಿ ಒಡಿಯೂರಿನ ಶ್ರೀ ಗುರುದೇವಾನಂದ ಸ್ವಾಮೀಜಿಯ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಮಡಿಕೇರಿ ಶಾಸಕ ಡಾ.ಮಂತರ್‌ಗೌಡ ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ, ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕೊಡಗು ಜಿಲ್ಲಾ ಬಂಟರ ಸಂಘದ ಗೌರವಾಧ್ಯಕ್ಷ ಬಿ.ಬಿ.ಐತಪ್ಪ ರೈ, ಉಪಾಧ್ಯಕ್ಷ ಬಿ.ಎಸ್.ಸದಾಶಿವ ರೈ, ಕಾರ್ಯದರ್ಶಿ ರವೀಂದ್ರ ವಿ.ರೈ, ಬಂಟರ ಭವನ ಟ್ರಸ್ಟ್ ಕಾರ್ಯದರ್ಶಿ ಅಪ್ಪು ಬಾಲಕೃಷ್ಣ ರೈ ಹಾಗೂ ಯುವ ಬಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಕೆ. ಸದಾನಂದ ರೈ ಇದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ನೀಟ್ ಕುರಿತ ಪೂರ್ವಭಾವಿ ಸಭೆ | 17 ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ: ಎಡಿಸಿ ಐಶ್ವರ್ಯ

ನೀಟ್ ಪರೀಕ್ಷೆಗೆ ಅಗತ್ಯ ಸಿದ್ಧತೆ

ಮೈಸೂರು: ಜಿಲ್ಲೆಯಲ್ಲಿ ನೀಟ್ ಪರೀಕ್ಷೆಯನ್ನು ಯಾವುದೇ ಲೋಪ ಉಂಟಾಗದಂತೆ ವ್ಯವಸ್ಥಿತವಾಗಿ ನಡೆಸಲು ಸಕಲ ಸಿದ್ಧತೆ ಮಾಡಿಕೊಳ್ಳಿ ಎಂದು ಅಪರ ಜಿಲ್ಲಾಧಿಕಾರಿ ಐಶ್ವರ್ಯ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನೀಟ್ ಪರೀಕ್ಷೆ ಕುರಿತು ಪೂರ್ವಭಾವಿ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನೀಟ್ ಪರೀಕ್ಷೆಯು ಮೇ 3ರಂದು ಮೈಸೂರು ನಗರದಲ್ಲಿ ಒಟ್ಟು 17 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. 7711 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷೆ ಸುಸೂತ್ರವಾಗಿ ನಡೆಸಲು 17 ಪರೀಕ್ಷಾ ಕೇಂದ್ರಗಳಿಗೆ ಒಟ್ಟು ಇಬ್ಬರು ಕೋಆರ್ಡಿನೇಟರ್,20 ಪರೀಕ್ಷಾ ಅಧೀಕ್ಷಕರು ಹಾಗೂ ಏಳು ಅಧಿಕಾರಿಗಳ ತಂಡದ ಫ್ಲೈಯಿಂಗ್ ಸ್ಕ್ವಾಡ್ ನಿಯೋಜಿಸಲಾಗಿದೆ. ಫ್ರಿಸ್ಕಿಂಗ್ ಕೆಲಸವನ್ನು ಭಾರತ ಸರಕಾರದ ಮಾರ್ಗಸೂಚಿಯಂತೆ ನಡೆಸಬೇಕು ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಎಂ.ಜಿ.ಕೊಪ್ಪಲು ಸರಕಾರಿ ಪದವಿ ಪೂರ್ವ ಕಾಲೇಜು, ಮೈಸೂರು ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಎಂಜಿನಿಯರಿಂಗ್, ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು, ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮಹಾರಾಣಿ ಮಹಿಳಾ ಕಲಾ ಕಾಲೇಜು, ವಿಜಯನಗರ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು,

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನೀಟ್ ಪರೀಕ್ಷೆ ಕುರಿತು ಪೂರ್ವಭಾವಿ ಸಿದ್ದತಾ ಸಭೆಯಲ್ಲಿ ಪರ ಜಿಲ್ಲಾಧಿಕಾರಿ ಐಶ್ವರ್ಯ ಮಾತನಾಡಿದರು.

> **ಪರೀಕ್ಷೆಯು ಮೇ 3ರಂದು ಮಧ್ಯಾಹ್ನ 2 ರಿಂದ 5 ಗಂಟೆಯವರೆಗೆ ನಡೆಯಲಿದೆ. ಪರೀಕ್ಷಾ ಕೇಂದ್ರದಲ್ಲಿ ಬೆಳಗ್ಗೆ 11 ಗಂಟೆಯಿಂದ ಪರೀಕ್ಷಾರ್ಥಿಗಳ ಫ್ರಿಸ್ಕಿಂಗ್ ಹಾಗೂ ಬಯೋಮೆಟ್ರಿಕ್ ಪರಿಶೀಲನೆ ಪ್ರಕ್ರಿಯೆ ಪ್ರಾರಂಭವಾಗಲಿದೆ. ಮಧ್ಯಾಹ್ನ 1.30ರೊಳಗೆ ಮಾತ್ರ ಪರೀಕ್ಷಾರ್ಥಿಗಳಿಗೆ ಪರೀಕ್ಷಾ ಕೇಂದ್ರಕ್ಕೆ ಪ್ರವೇಶವಿರುತ್ತದೆ, ನಂತರ ಪ್ರವೇಶವಿರುವುದಿಲ್ಲ. ಪರೀಕ್ಷಾರ್ಥಿಗಳು ಪ್ರವೇಶ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು**
>
> **ಡಾ. ಎನ್.ಆರ್. ಶ್ರೀನಾಥ್, ನೀಟ್ ಪರೀಕ್ಷೆಯ ಕೋ ಆರ್ಡಿನೇಟರ್**

ಒಂಟಿಕೊಪ್ಪಲು ಸರಕಾರಿ ಪದವಿ ಪೂರ್ವ ಕಾಲೇಜು, ಮಹಾರಾಣಿ ಸರಕಾರಿ ಪದವಿ ಪೂರ್ವ ಕಾಲೇಜು, ಸರಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜು, ಮಹಾರಾಜ ಸರಕಾರಿ ಪದವಿ ಪೂರ್ವ ಕಾಲೇಜು, ಕುವೆಂಪು ನಗರ ಸರಕಾರಿ ಪದವಿಪೂರ್ವ ಕಾಲೇಜು, ಜಾಕಿ ಕ್ವಾಟ್ರಸ್ ಬಳಿ ಇರುವ ಸರಕಾರಿ ಆದರ್ಶ ವಿದ್ಯಾಲಯ, ನಜರ್ಬಾದ್ ಹತ್ತಿರ ಇರುವ ಬೈಫರ್ಕೇಟೆಡ್ ಮಹಾರಾಜ ಸರಕಾರಿ ಪದವಿ ಪೂರ್ವ ಕಾಲೇಜು, ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯ ಹಾಗೂ ಮಹಾರಾಜ ಸರಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದಲ್ಲಿ ಪರೀಕ್ಷೆ ನಡೆಯಲಿದೆ ಎಂದರು.

ಸಭೆಯಲ್ಲಿ ನೀಟ್ ಪರೀಕ್ಷೆ ಕೋ ಆರ್ಡಿನೇಟರ್ ಮಿಥಿಲೇಶ್ ಕುಮಾರ್, ಜಿಲ್ಲಾಧಿಕಾರಿಗಳ ಕಚೇರಿಯ ಶಿಷ್ಟಾಚಾರ ತಹಸೀಲ್ದಾರ್‌ಶ್ರೀನಿವಾಸ, ಪದವಿ ಪೂರ್ವ ಶಿಕ್ಷಣ ಇಲಾಖೆಯ ರವಿಶಂಕರ್‌ಇದ್ದರು.

ಕುಡಿವ ನೀರಿನ ಬಗ್ಗೆ ನಿಗಾ ವಹಿಸಿ

ಮೈಸೂರಿನ ಜಿಪಂ ಮಿನಿ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಿಷನ್ ಸಭೆಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿದರು.

ಮೈಸೂರು: ಕುಡಿಯುವ ನೀರಿನ ಮಾದರಿಯನ್ನು ಪರಿಶೀಲನೆಗೆ ಒಳಪಡಿಸಿದಾಗ ಫಲಿತಾಂಶ ತೃಪ್ತಿಕರವಾಗಿಲ್ಲ ಎಂದು ಕಂಡುಬಂದಲ್ಲಿ, ಸೂಕ್ತ ಕ್ರಮ ಕೈಗೊಂಡು ನಂತರ ಅದೇ ಸ್ಥಳದಲ್ಲಿ ಪುನ: ಕುಡಿಯುವ ನೀರಿನ ಮಾದರಿಯನ್ನು ಪರಿಶೀಲಿಸಿ, ಯೋಗ್ಯವಾದ ಕುಡಿಯುವ ನೀರು ಸರಬರಾಜಾಗುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಜಿಲ್ಲಾ ಪಂಚಾಯತಿ ಮಿನಿ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಿಷನ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕುಡಿಯುವ ನೀರು ಕಲುಷಿತವಾದಲ್ಲಿ ಹಲವಾರು ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಇದ್ದು, ಕುಡಿಯುವ ನೀರಿನ ಪರಿಶೀಲನೆಯ ಬಗ್ಗೆ ಹೆಚ್ಚು ನಿಗಾ ವಹಿಸಿ ಎಂದರು. ಕೋಟ್ಪ್ ಕಾಯಿದೆಯಡಿ ದಾಳಿ ನಡೆಸಿ ಸೆಕ್ಷನ್ 4ರಡಿ ಏ. 2025 ರಿಂದ 2026 ರವರಗೆ 2,98,400 ರು. ದಂಡ ಸಂಗ್ರಹಿಸಲಾಗಿದೆ. ಇದು ಉತ್ತಮ ಕೆಲಸವಾಗಿದ್ದು, ಇನ್ನೂ ಹೆಚ್ಚಿನ ದಾಳಿಯನ್ನು ನಡೆಸಿ. ಹುಕ್ಕಾವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದ್ದು, ಇದು ಕಂಡುಬಂದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಎಂದು ನಿರ್ದೇಶನ ನೀಡಿದರು. ಮಕ್ಕಳಿಗೆ ನೀಡಲಾಗುವ ಲಸಿಕೆ ಹಾಗೂ ಇನ್ನಿತರೆ ಮಾಹಿತಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವಾರು ನಿಗದಿತ ಅವಧಿಯಲ್ಲಿ ನೀಡಲಾಗಿರುವ ಆ್ಯಪ್ ಗಳಲ್ಲಿ ಅಪ್ ಡೇಟ್ ಆಗಬೇಕು ಇಲ್ಲವಾದಲ್ಲಿ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು. ರಾಷ್ಟ್ರೀಯ ಬಾಲ ಸ್ವಸ್ಥ ಕಾರ್ಯಕ್ರಮ ಯೋಜನೆಯಡಿ ಮಕ್ಕಳ ಸ್ಕ್ರೀನಿಂಗ್ ನಡೆದ ನಂತರ ಅವರಿಗೆ ಬೇಕಿರುವ ಚಿಕಿತ್ಸೆ ಪಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಿ, ಅಪೌಷ್ಟಿಕತೆಯಿಂದ ಬಳಲುವ ಮಕ್ಕಳ ಸಂಖ್ಯೆ ಎಚ್.ಡಿ.ಕೋಟೆ ತಾಲೂಕಿನಲ್ಲಿ ಹೆಚ್ಚಿದ್ದು, ಇಲ್ಲಿ ತೀವ್ರ ನಿಗಾ ವಹಿಸಿ ಎಂದರು. ಸಭೆಯಲ್ಲಿ ಜಿಲ್ಲಾ ಆರೋಗ್ಯ ಇಲಾಖೆಯ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ. ಸಿರಾಜ್ ಅಹಮದ್, ಡಾ. ಗೋಪಿನಾಥ್, ಡಾ.ನಾಗರಾಜ್, ಡಾ. ಬೃಂದ, ಡಾ. ಸುವರ್ಣ ಇದ್ದರು.

ಸರಕಾರಿ ಆಸ್ಪತ್ರೆಗಳ ಆಧುನೀಕರಣಕ್ಕೆ ಒತ್ತು

ನಗರದ ಸರಕಾರಿ ಆಸ್ಪತ್ರೆ ಆವರಣದಲ್ಲಿ 2.25 ಕೋಟಿ ರು. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಎಂ.ಉದಯ ಗುದ್ದಲಿ ಪೂಜೆ ನೆರವೇರಿಸಿದರು.

ಮದ್ದೂರು: ತಾಲೂಕು ಆಸ್ಪತ್ರೆ ಸೇರಿದಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮರ್ಪಕವಾಗಿ ಆಧುನೀಕರಣಗೊಳಿಸಿ ಮೂಲ ಸೌಲಭ್ಯ ಕಲ್ಪಿಸಲು ಹೆಚ್ಚಿನ ಒತ್ತು ನೀಡಿರುವುದಾಗಿ ಶಾಸಕ ಕೆ.ಎಂ.ಉದಯ ತಿಳಿಸಿದರು.

ನಗರದ ಕೆ.ಗುರುಶಾಂತಪ್ಪ ಸಾರ್ವಜನಿಕ ತಾಲೂಕು ಆಸ್ಪತ್ರೆ ಆವರಣದಲ್ಲಿ ನೂತನವಾಗಿ ನಿರ್ಮಿಸುತ್ತಿರುವ 2.20 ಕೋಟಿ ರು. ವೆಚ್ಚದ ಔಷಧಿ ಕಟ್ಟಡ, ಹೈಟೆಕ್ ಶವಾಗಾರ, ಕಾಂಪೌಂಡ್ ನಿರ್ಮಾಣ, ಲಾಂಡ್ರಿಂಗ್ ಕೊಠಡಿ ಹಾಗೂ ಇನ್ನಿತರ ಮೂಲ ಸೌಲಭ್ಯಗಳಿಗ ಬಿಡುಗಡೆಯಾಗಿರುವ 2.25 ಕೋಟಿ ರು. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ತಾಲೂಕು ಸರಕಾರಿ ಆಸ್ಪತ್ರೆಗೆ ರೋಗಿಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಹಲವು ಸೌಲಭ್ಯಗಳನ್ನು ಪಡೆಯುತ್ತಿರುವ ಹಿನ್ನೆಲೆಯಲ್ಲಿ ಮತ್ತಷ್ಟು ಸವಲತ್ತನ್ನು ಒದಗಿಸಬೇಕೆಂಬ ನಿಟ್ಟಿನಲ್ಲಿ 30 ಕೋಟಿ ರು. ವೆಚ್ಚದಲ್ಲಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಹೊಸ ಕಟ್ಟಡ ನಿರ್ಮಾಣ ಮಾಡುವುದರ ಜತೆಗೆ ಪ್ರತ್ಯೇಕ ರಿಂಗ್ ಮತ್ತು ಡಯಾಲಿಸಸ್ ಕೇಂದ್ರ, ಶಸ್ತ್ರ ಚಿಕಿತ್ಸಾ ಕೊಠಡಿ ಇನ್ನಿತರೆ ಪ್ರತ್ಯೇಕ ವಾರ್ಡ್‌ಗಳನ್ನಾಗಿ ನಿರ್ಮಿಸಲು ಕ್ರಮ ವಹಿಸಲಾಗಿದೆ ಎಂದರು.

30 ಕೋಟಿ ರು. ವೆಚ್ಚದಲ್ಲಿ ವೈದ್ಯರ ಮತ್ತು ಶುಶ್ರೂಕಿಯರ ವಸತಿಗೃಹ, ಲ್ಯಾಂಡ್ರಿಂಗ್ ಕೊಠಡಿ, ಅಡುಗೆಮನೆ ಸೇರಿದಂತೆ ಇನ್ನಿತರ ವ್ಯವಸ್ಥೆಯನ್ನು ಕಲ್ಪಿಸಿ ಸಾರ್ವಜನಿಕರ ಒತ್ತಡವನ್ನು ಕಡಿಮೆ ಮಾಡಲು ಕ್ರಮ ವಹಿಸಲಾಗಿದೆ ಎಂದರು.

ಹೈಕಮಾಂಡ್ ತೀರ್ಮಾನಕ್ಕೆ ಬದ್ಧ:

ಉಪಮುಖ್ಯಮಂತ್ರಿ ಡಿ.ಕೆ. ಶಿ ವ ಕ ು ವ ಾ ರ ್ ರ ವ ರ ು ಮುಖ್ಯಮಂತ್ರಿಯಾಗಬೇಕೆಂಬುದು ಅಭಿಮಾನಿಗಳ, ಕೆಲ ಶಾಸಕರ ಆಸೆಯಾಗಿದ್ದು ಹೈಕಮಾಂಡ್ ಕೈಗೊಳ್ಳುವ ತೀರ್ಮಾನಕ್ಕೆ ತಾವು ಬದ್ಧರಾಗಿದ್ದು ಮುಂದಿನ ದಿನಗಳಲ್ಲಿ ಒಳ್ಳೆಯ ಶುಭಸುದ್ದಿ ಹೊರಹೊಮ್ಮಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ನಗರಸಭೆ ಮಾಜಿ ಅಧ್ಯಕ್ಷೆ ಕೋಕಿಲಾಅರುಣ್, ಮಾಜಿ ಉಪಾಧ್ಯಕ್ಷ ಟಿ.ಆರ್.ಪ್ರಸನ್ನಕುಮಾರ್, ಮಾಜಿ ಸದಸ್ಯರಾದ ಬಸವರಾಜು, ವನಿತಾ, ಎಂ.ಬಿ.ಸಚಿನ್,

ಸಿದ್ದರಾಜು, ಸ್ಥಳೀಯ ಮುಖಂಡರಾದ ಎಂ.ಡಿ. ಮಹಾಲಿಂಗಯ್ಯ, ಜಯಪ್ರಕಾಶ್, ಸಂತೋಷ್, ಶಾಂತಮ್ಮ ಇತರರಿದ್ದರು.

ಮೇ 5ಕ್ಕೆ ಫೈರಿಂಗ್ ರೇಂಜ್ ಉದ್ಘಾಟನೆ

ಮಡಿಕೇರಿ: ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜ್ ನ ಹಳೇ ವಿದ್ಯಾರ್ಥಿ ಸಂಘ ಕಾಲೇಜು ಮೈದಾನದ ಬಳಿ ನಿರ್ಮಿಸಿರುವ ಫೈರಿಂಗ್ ರೇಂಜ್ ಮೇ 5 ರಂದು ಉದ್ಘಾಟನೆಗೊಳ್ಳಲಿದೆ.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜ್ ಹಾಗೂ ಹಳೇ ವಿದ್ಯಾರ್ಥಿ ಸಂಘದ ಸಂಯುಕ್ತಾಶ್ರಯದಲ್ಲಿ ಮೇ 5 ರಂದು ಬೆಳಗ್ಗೆ 10 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಕೊಡಗು ವಿಶ್ವವಿದ್ಯಾನಿಲಯದ ಉಪ ಕುಲಪತಿ ಪ್ರೊ.ಅಶೋಕ್ ಸಂಗಪ್ಪ ಆಲೂರ್ ಹಾಗೂ ಎನ್ಸಿಸಿಯ ಕಮಾಂಡಿಂಗ್ ಆಫೀಸರ್ ಕರ್ನಲ್ ರೆಜಿತ್ ಮುಕುಂದನ್ ಅವರು ಫೈರಿಂಗ್ ರೇಂಜ್ ನ್ನು ಉದ್ಘಾಟಿಸಲಿದ್ದಾರೆ. ಫೀ.ಮಾ.ಕಾರ್ಯಪ್ಪ ಕಾಲೇಜ್ ಪ್ರಾಂಶುಪಾಲ ಮೇಜರ್‌ಪ್ರೊ. ರಾಘವ ಬಿ. ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಎನ್ಸಿಸಿಯ ಆಡಳಿತಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಶ್ರೀನಿವಾಸ್ ಎಸ್., ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಮುಕ್ಕಾಟಿರ ಎ.ಅಪ್ಪಯ್ಯ, ಫೀ.ಮಾ.ಕಾರ್ಯಪ್ಪ ಕಾಲೇಜ್ ನ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಹಾಗೂ ವಕೀಲ ಮಂಡುವಅಡ ಸುದಯ್ ನಾಣಯ್ಯ ಹಾಗೂ ಉದ್ಯಮಿ ಪುರುಷೋತ್ತಮ್ ಪಿ. ಬೆಂಗಳೂರು ಪಾಲ್ಗೊಳ್ಳಲಿದ್ದಾರೆ. ಸಭಾ ಕಾರ್ಯಕ್ರಮ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ ಎಂದು ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಪತ್ರಿಕಾ ಪ್ರಕಟಣೆ ನೀಡಿದ್ದಾರೆ.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘ ಕಾಲೇಜು ಮೈದಾನ.

4.95 ರು. ಲಕ್ಷ ವೆಚ್ಚದ ಯೋಜನೆ:

ಮಡಿಕೇರಿ ನಗರದ ಎಲ್ಲಾ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಎನ್ಸಿಸಿ ಶಿಬಿರಾರ್ಥಿಗಳಿಗೆ ಸಹಕಾರಿಯಾಗಬೇಕು ಎನ್ನುವ ಉದ್ದೇಶದಿಂದ ಫೈರಿಂಗ್ ರೇಂಜ್ ನ್ನು ನಿರ್ಮಿಸಲಾಗಿದೆ. ಹಳೇ ವಿದ್ಯಾರ್ಥಿಗಳು ಹಾಗೂ ದಾನಿಗಳ ಸಹಕಾರದಿಂದ ಸುಮಾರು 4.95 ಲಕ್ಷ ರೂ. ವೆಚ್ಚದ ಯೋಜನೆ ಸಾಕಾರಗೊಂಡಿದೆ ಎಂದು ಬೊಳ್ಳಜಿರ ಬಿ.ಅಯ್ಯಪ್ಪ ಹರ್ಷ ವ್ಯಕ್ತಪಡಿಸಿದ್ದಾರೆ.

ನಗರೋತ್ಥಾನ ಕಾಮಗಾರಿ ಪರಿಶೀಲಿಸಿದ ಡಿಸಿ

ಚಾಮರಾಜನಗರ: ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ ನಗರೋತ್ಥಾನ 4ನೇ ಹಂತದ ಯೋಜನೆಯಡಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಜಿಲ್ಲಾಧಿಕಾರಿ ಶ್ರೀರೂಪ ಪರಿಶೀಲಿಸಿದರು.

ನಗರದ ವಾರ್ಡ್ ಸಂಖ್ಯೆ 19, 20 ಹಾಗೂ 29ರಲ್ಲಿ ಸುಮಾರು 118 ಲಕ್ಷ ರು. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ 1.18 ಕಿ.ಮೀ ಉದ್ದದ ಸಿಸಿ ರಸ್ತೆ ಕಾಮಗಾರಿಯನ್ನು ವೀಕ್ಷಿಸಿದರು. 292 ಮೀಟರ್‌ಉದ್ದದ ಚರಂಡಿ ಅಭಿವೃದ್ಧಿ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದರು.

ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅಧಿಕಾರಿಗಳಿಗೆ

ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ ನಗರೋತ್ಥಾನ 4ನೇ ಹಂತದ ಯೋಜನೆಯಡಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಜಿಲ್ಲಾಧಿಕಾರಿ ಶ್ರೀರೂಪ ಪರಿಶೀಲಿಸಿದರು.

ಸೂಚನೆ ನೀಡಿದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಇಲಾಖೆಯ ಯೋಜನಾ ನಿರ್ದೇಶಕರಾದ ವೆಂಕಟೇಶ್, ಕಾರ್ಯಪಾಲಕ ಅಭಿಯಂತರರಾದ ರಾಮಚಂದ್ರ, ನಗರಸಭೆ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಪ್ರಕಾಶ್, ಇತರೆ ಅಧಿಕಾರಿಗಳು ಇದ್ದರು.

ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಡಿಸಿ ಸಭೆ

ಜಿಲ್ಲಾ ಮಟ್ಟದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಜಿಲ್ಲಾ ಮುನ್ನಡೆ ಕಾರ್ಯಕ್ರಮ ಆರಂಭಿಸುವ ಕುರಿತು ಜಿಲ್ಲಾಧಿಕಾರಿ ಶ್ರೀರೂಪ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಚಾಮರಾಜನಗರ: ಜಿಲ್ಲಾ ಮಟ್ಟದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಜಿಲ್ಲಾ ಮುನ್ನಡೆ ಕಾರ್ಯಕ್ರಮ ಆರಂಭಿಸುವ ಕುರಿತು ಜಿಲ್ಲಾಧಿಕಾರಿ ಶ್ರೀರೂಪ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಚಾಮರಾಜನಗರ ವಿಶ್ವವಿದ್ಯಾಲಯ ವ್ಯಾಪ್ತಿಗೆ ಒಳಪಡುವ ಪದವಿ ಹಾಗೂ ಸ್ನಾತಕೋತ್ತರ ಕಾಲೇಜುಗಳ ಪ್ರಾಂಶುಪಾಲರು,ಅಧಿಕಾರಿಗಳೊಂದಿಗೆ ಸಭೆಯಲ್ಲಿ ಚರ್ಚಿಸಲಾಯಿತು.

ಕಾರ್ಯಕ್ರಮವನ್ನು ಪದವಿ ವಿದ್ಯಾರ್ಥಿಗಳು ಹಾಗೂ ಈಗಾಗಲೇ ವ್ಯಾಸಂಗ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಸಹಕಾರಿಯಾಗುವಂತೆ ರೂಪಿಸುವ ಕುರಿತು ಸಮಾಲೋಚಿಸಲಾಯಿತು.

ಪದವಿ ಅವಧಿಯಲ್ಲಿಯೇ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ತಿಳಿವಳಿಕೆ, ಮಾರ್ಗದರ್ಶನ ಮತ್ತು ಪರಿಚಯವನ್ನು ಮಾಡಿಕೊಟ್ಟು ಅವರಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಜ್ಜುಗೊಳಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಈ ಕಾರ್ಯಕ್ರಮವನ್ನು ಇಂಡಿಯಾ ಫೋರ್‌ಐಎಎಸ್ ಸಂಸ್ಥೆಯ ಸಹಯೋಗದಲ್ಲಿ ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಕಾರ್ಯಕ್ರಮದ ಜಾರಿಗೆ ಸಂಬಂಧಿಸಿದ ರೂಪರೇಷೆ ಮತ್ತು ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸುವಿಕೆ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ಜಿಲ್ಲಾ ಸಿ.ಎಸ್.ಆರ್ ಸಂಯೋಜಕರೊಂದಿಗೆ ಇಂಡಿಯಾ ಫೋರ್‌ಐಎಎಸ್ ಸಂಸ್ಥೆಯ ಪ್ರತಿನಿಧಿಗಳು, ಅಧಿಕಾರಿಗಳು ಇದ್ದರು.

ಏತ ನೀರಾವರಿ ಯೋಜನೆಗೆ ಶೀಘ್ರ ಚಾಲನೆ

ಕೆ.ಆರ್.ನಗರ: ಈ ಭಾಗದ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಆಗಬಾರದೆಂಬ ಉದ್ದೇಶದಿಂದ 60 ಕೋಟಿ ರು.ಗಳಲ್ಲಿ ಏತ ನೀರಾವರಿ ಯೋಜನೆಯಿಂದ ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಹಾಗೂ ಕುಡಿಯುವ ನೀರು ಸರಬರಾಜು ಮಾಡಲು ನಮ್ಮ ಸರಕಾರದ ಮೊದಲನೆ ವರ್ಷದ ಬಜೆಟ್ ನಲ್ಲಿ ಘೋಷಣೆ ಮಾಡಲಾಗಿತ್ತು ಎಂದು ಶಾಸಕ ಡಿ.ರವಿಶಂಕರ್ ಹೇಳಿದರು. ತಾಲೂಕಿನ ಡಿ.ಕೆ.ಕೊಪ್ಪಲು ಗೇಟ್ ಮತ್ತು ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು ಏತ ನೀರಾವರಿ ಯೋಜನೆಯ ಟೆಂಡರ್‌ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದ ಗುತ್ತಿಗೆದಾರರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆಹೂಡಿದ್ದುದ್ದರಿಂದ

ಡಿ.ಕೆ.ಕೊಪ್ಪಲು ಗೇಟ್ ಗ್ರಾಮಸ್ಥರು ಶಾಸಕ ಡಿ.ರವಿಶಂಕರ್ ಅವರನ್ನು ಸನ್ಮಾನಿಸಿದರು.

ವಿಳಂಬವಾಗಿದ್ದು ಈಗ ಎಲ್ಲ ಸಮಸ್ಯೆಗೂ ಪರಿಹಾರ ಒದಗಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭಗೊಳ್ಳಲಿದೆ ಎಂದರು. ಇದರಿಂದ ಸಿದ್ದಾಪುರ, ಕೆಸ್ತೂರು, ಬ್ಯಾಡರಹಳ್ಳಿ, ಮಾವತ್ತೂರು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಕೆರೆಕಟ್ಟೆಗಳಿಗೆ ನೀರು ತುಂಬಿಸಲು ಹಾಗೂ ಕುಡಿಯುವ ನೀರಿನ ಸರಬರಾಜು ಮಾಡಲು ಅನುಕೂಲವಾಗಲಿದೆ ಎಂದರು ತಿಳಿಸಿದರು.

ತಾ.ಪಂ.ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ರಂಗೇಶ್ಕುಮಾರ್,ಪಿಎಲ್ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಟಿ. ಚಂದ್ರೇಗೌಡ, ನಿವೃತ್ತ ಆರಕ್ಷಕ ನಿರೀಕ್ಷ ಸಿ.ಡಿ. ರಾಜಾಚಾರ್, ಮುಖಂಡರಾದ ಕೆ.ಎಸ್.ಹಿರಣ್ಣಯ್ಯ, ಕೆ.ರಾಮಚಂದ್ರ, ವೆಂಕಟ ರಾಮು, ಗವಿಯಪ್ಪ ಕೆ.ವಿ.ಪುಟ್ಟಸ್ವಾಮೀಗೌಡ, ಆನಂದ್, ನಿಂಗೇಗೌಡ, ಪ್ರಭಾಕರ್, ಪಿಡಿಒ ಇದ್ದರು.

ಬ್ಯಾರಿ ಸಮುದಾಯ ಭವನ ನಿರ್ಮಾಣಕ್ಕೆ ಒಂದು ಕೋಟಿ ಅನುದಾನ: ಸ್ಪೀಕರ್ ಖಾದರ್

ಮಡಿಕೇರಿಯಲ್ಲಿ ಕೊಡಗು ಜಿಲ್ಲಾ ಬ್ಯಾರಿ ಮೊದಲ ಸಾಹಿತ್ಯ ಸಮ್ಮೇಳನ

{ಡಿ.ಕೆ. ಶಿವಕುಮಾರ್ } ಡಿಸಿಎಂ

ಬೇಸಿಗೆ ಹಿನ್ನೆಲೆಯಲ್ಲಿ ನೀರು, ಆಹಾರ ಹುಡುಕಿಕೊಂಡು ಆನೆಗಳು ಹಳ್ಳಿಗಳತ್ತ ಬರುತ್ತಿವೆ. ಆನೆಗಳು ಬರುವುದನ್ನು ತಪ್ಪಿಸಲು ರೈಲ್ವೇ ಹಳಿ ಕಂಬಿಯ ಬ್ಯಾರಿಕೇಡ್ ನಿರ್ಮಿಸಲು ಸಾಕಷ್ಟು ಅನುದಾನ ನೀಡಲಾಗಿದೆ. ನಿನ್ನೆ ಕೂಡ ಅರಣ್ಯ ಇಲಾಖೆ ಸಚಿವರು ಹಾಗೂ ಅಧಿಕಾರಿಗಳ ಜತೆ ಚರ್ಚೆ ಮಾಡಿದ್ದು ಮತ್ತಷ್ಟು ಅನುದಾನ ನೀಡಲಾಗುತ್ತಿದೆ.



ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಬ್ಯಾರಿ ಸಮುದಾಯ ಭವನ ನಿರ್ಮಾಣಕ್ಕೆ ಒಂದು ಕೋಟಿ ರು. ಒದಗಿಸಲಾಗುವುದು. ಆ ನಿಟ್ಟಿನಲ್ಲಿ ಜಾಗ ಗುರುತಿಸುವಂತೆ ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್‌ತಿಳಿಸಿದ್ದಾರೆ.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ವತಿಯಿಂದ ಕೊಡಗು ಬ್ಯಾರೀಸ್ ವೆಲ್ಫೇರ್ ಟ್ರಸ್ಟ್ ಮಡಿಕೇರಿ ಇವರ ಸಹಯೋಗದಲ್ಲಿ ಮಡಿಕೇರಿಯಲ್ಲಿ ನಡೆದ ಕೊಡಗು ಜಿಲ್ಲಾ ಬ್ಯಾರಿ ಪ್ರಥಮ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದರು.

ಬ್ಯಾರಿ ಸಂಸ್ಕೃತಿ, ಸಾಹಿತ್ಯ, ಪರಂಪರೆಗೆ ತನ್ನದೇ ಇತಿಹಾಸ ಇದ್ದು, ಬ್ಯಾರಿ ಸಂಸ್ಕೃತಿ, ಸಾಹಿತ್ಯ, ಪರಂಪರೆ ಉಳಿಸಿ ಬೆಳೆಸಲು ಶ್ರಮಿಸಬೇಕು ಎಂದು ಕರೆ ನೀಡಿದ ಖಾದರ್ ಬ್ಯಾರಿ ಸಾಹಿತ್ಯ ಸಮ್ಮೇಳನದಿಂದ ಬ್ಯಾರಿ ಭಾಷೆ ಬೆಳವಣಿಗೆ ಜೊತೆಗೆ ಚಿಂತನ ಮಂಥನಗಳು ನಡೆಯಲಿದ್ದು, ಸಮಾಜ ಅಭಿವೃದ್ಧಿಯತ್ತ ಮುನ್ನಡೆಯಬೇಕು ಎಂದು ಸಲಹೆ ಮಾಡಿದರು.

ಬ್ಯಾರಿ ಸಾಹಿತ್ಯ ಸಮ್ಮೇಳನದಿಂದ ಯುವಜನರಿಗೆ ಬ್ಯಾರಿ ಸಾಹಿತ್ಯ, ಸಂಸ್ಕೃತಿ, ಇತಿಹಾಸದ ಬಗ್ಗೆ ಮಾಹಿತಿ ನೀಡಲು ಸಹಕಾರಿಯಾಗಲಿದೆ. ಆ ನಿಟ್ಟಿನಲ್ಲಿ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಅನುಕೂಲ ಆಗಲಿದ್ದು, ಅಭಿಪ್ರಾಯ ಹಂಚಿಕೊಳ್ಳಲು ಸಹಕಾರಿಯಾಗಲಿದೆ ಎಂದೂ ಯು.ಟಿ.ಖಾದರ್ ಹೇಳಿದರು.

ಶಾಸಕ ಡಾ.ಮಂತರ್‌ಗೌಡ ಮಾತನಾಡಿ ಬ್ಯಾರಿ ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಸ್ಥಾನಕ್ಕೆ ಕೊಡಗು ಜಿಲ್ಲೆಯವರಿಗೂ ಅವಕಾಶ ಮಾಡಬೇಕು ಎಂದರು.

ಸಮ್ಮೇಳನ ಅಧ್ಯಕ್ಷ ಬಿ.ಎ.ಷಂಶುದ್ದೀನ್ ಮಾತನಾಡಿ, ಬ್ಯಾರಿ ಸಮುದಾಯದ ಬೆಳವಣಿಗೆಯನ್ನು ಗಮನಿಸಿದಾಗ ದೇಶದ ಒಂದು ಮೂಲೆಯಲ್ಲಿದ್ದ ಈ ಸಣ್ಣ ಸಮುದಾಯ ಮುಂದಿನ ದಿನಗಳಲ್ಲಿ ರಾಜ್ಯ ಮಾತ್ರವಲ್ಲ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಮಿಂಚುವ ಸುಳಿವನ್ನು ನೀಡುತ್ತಿದೆ ಎಂದರು.

ಹಿರಿಯ ಸಾಹಿತಿ ಹಾಗೂ ಚಿಂತಕರಾದ ಎಸ್ .ಜಿ.ಸಿದ್ಧರಾಮಯ್ಯ ಮಾತನಾಡಿದರು.

ಕೊಡಗು ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷರಾದ ಬಿ.ಜಿ.ಅನಂತಶಯನ ಮಾತನಾಡಿ, ಎಲ್ಲ ಧರ್ಮ ಒಂದು. ಹಿಂದೂ, ಮುಸ್ಲಿಂ, ಕ್ರೈಸ್ತ ಸಮುದಾಯಗಳಿಗೆ ಜಾನಪದೀಯ ಹಿನ್ನೆಲೆ ಇದ್ದರೆ ಸಮಾಜ ಉತ್ತಮವಾಗಿ ಬೆಳೆಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕನಿಷ್ಟ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ.ಶಾಹಿದ್ ತೆಕ್ಕಿಲ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಮಹೇಶ್ ನಾಚಯ್ಯ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಬಿ.ಹಸನಬ್ಬ, ಅಮೀನ್ ಮೊಹಿಸಿನ್, ಮನ್ಸೂರ್,ಮಹಮ್ಮದ್, ಮಡಿಕೇರಿ ನಗರಸಭೆ ಸದಸ್ಯರಾದ ಎಂ.ಎ.ಮುಸ್ತಫಾ, ಬಶೀರ್ ಅಹ್ಮದ್, ನಾಮ ನಿರ್ದೇಶಿತ ಸದಸ್ಯರಾದ ಮಹಮ್ಮದ್ ಯಾಕೂಬ್, ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಯು.ಹೆಚ್.ಉಮರ್ ಇದ್ದರು.

ಕರ್ನಾಟಕ ವಿಧಾನಸಭೆ ಸ್ಪೀಕರ್‌ಯು.ಟಿ.ಖಾದರ್ ಹಾಗೂ ಸಮ್ಮೇಳನಾಧ್ಯಕ್ಷರಾದ ಬಿ.ಎ.ಷಂಶುದ್ದೀನ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮೆರವಣಿಗೆಗೆ ಮಡಿಕೇರಿ ನಗರಸಭೆ ಸದಸ್ಯರಾದ ಅಮೀನ್ ಮೊಹ್ಸಿನ್ ಉದ್ಘಾಟಿಸಿದರು.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ವತಿಯಿಂದ ಕೊಡಗು ಬ್ಯಾರೀಸ್ ವೆಲ್ಫೇರ್‌ಟ್ರಸ್ಟ್ ಮಡಿಕೇರಿ ಇವರ ಸಹಯೋಗದಲ್ಲಿ ಮಡಿಕೇರಿಯಲ್ಲಿ ನಡೆದ ಕೊಡಗು ಜಿಲ್ಲಾ ಬ್ಯಾರಿ ಪ್ರಥಮ ಸಾಹಿತ್ಯ ಸಮ್ಮೇಳನಕ್ಕೆ ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಚಾಲನೆ ನೀಡಿದರು.

> **ಕನ್ನಡ ಭಾಷೆ ಹಾಗೂ ಉಪ ಭಾಷೆಗಳು ನಶಿಸಿ ಹೋಗುತ್ತಿವೆ ಎಂಬ ಮಾತಿದೆ. ಆದರೆ ಭಾಷೆಗಳು ಎಂದು ನಶಿಸಲು ಸಾಧ್ಯವಿಲ್ಲ. ಯಾವಾಗ ನಾವು ನಮ್ಮ ಭಾಷೆಯನ್ನು ಮಾತನಾಡುತ್ತೇವೊ ಆಗ ಭಾಷೆ, ಸಂಸ್ಕೃತಿ ಉಳಿಯುತ್ತದೆ. ಕೆಲವು ಪ್ರದೇಶಗಳಲ್ಲಿ ಹೊರತು ಪಡಿಸಿದರೆ ಉಳಿದೆಡೆ ಭಾಷೆ ಬೆಳವಣಿಗೆ ಕಾಣುತ್ತಿಲ್ಲ. ಆದ್ದರಿಂದ ಭಾಷೆಯನ್ನು ಉಳಿಸುವ ಮೂಲಕ ನಮ್ಮ ಸಂಸ್ಕೃತಿ, ದೇಶವನ್ನು ಉಳಿಸಬೇಕು.**
>
> **ಎಂ.ಪಿ.ಕೇಶವ ಕಾಮತ್,** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್
ಅಭಿಷೇಕ್ ಶರ್ಮಾ
ಹೈದರಾಬಾದ್

ಪರ್ಪಲ್ ಕ್ಯಾಪ್
ಇಶಾನ್ ಮಾಲಿಂಗ
ಹೈದರಾಬಾದ್

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಪಂಜಾಬ್	8	6	1	13
ಬೆಂಗಳೂರು	8	6	2	12
ಹೈದರಾಬಾದ್	9	6	3	12
ರಾಜಸ್ಥಾನ್	9	6	3	12
ಗುಜರಾತ್	8	4	4	8
ಚೆನ್ನೈ	8	3	5	6
ಡೆಲ್ಲಿ	8	3	5	6
ಕೋಲ್ಕತಾ	8	2	5	5
ಮುಂಬೈ	8	2	6	4
ಲಖನೌ	8	2	6	4

ಸಮಾಚಾರ ಸಣ್ಣದಲ್ಲ

ಟಿ20 ರ್‍ಯಾಂಕಿಂಗ್: ದೀಪ್ತಿಗೆ 4ನೇ ಸ್ಥಾನ

ದುಬೈ: ದ.ಆಫ್ರಿಕಾ ವಿರುದ್ಧದ ಸರಣಿಯಲ್ಲಿ ಉತ್ತಮ ಪ್ರದರ್ಶನ ತೋರಿದ ಭಾರತದ ದೀಪ್ತಿ ಶರ್ಮಾ ಅವರು ಐಸಿಸಿ ಮಹಿಳಾ ಟಿ20 ಬೌಲರ್‌ಗಳ ರ್‍ಯಾಂಕಿಂಗ್‌ನಲ್ಲಿ 4ನೇ ಸ್ಥಾನಕ್ಕೆ ಭಡ್ತಿ ಪಡೆದಿದ್ದಾರೆ.

ಆಲ್‌ರೌಂಡರ್‌ಗಳ ವಿಭಾಗದಲ್ಲಿ ಅವರು 3ನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ. ದ.ಆಫ್ರಿಕಾ ವಿರುದ್ಧದ 5 ಪಂದ್ಯಗಳ ಸರಣಿಯಲ್ಲಿ ದೀಪ್ತಿ 7 ವಿಕೆಟ್ ಗಳಿದ್ದರು. ಐಸಿಸಿ ರ್‍ಯಾಂಕಿಂಗ್ ಪಟ್ಟಿಯಲ್ಲಿ ಸ್ಮೃತಿ ಮಂಧಾನಾ ಒಂದು ಸ್ಥಾನ ಹಿಂಬಡ್ತಿಯೊಂದಿಗೆ 5ನೇ ಕ್ರಮಾಂಕ ಪಡೆದಿದ್ದಾರೆ.

ಸೂರ್ಯವಂಶಿ ದಾಖಲೆ

ಮುಲ್ಲನ್‌ಪುರ: ಕೇವಲ 15 ವರ್ಷ ವಯಸ್ಸಿನಲ್ಲಿಯೇ ಹಲವು ಟಿ20 ದಾಖಲೆಗಳನ್ನು ಬರೆದಿರುವ ವೈಭವ್ ಸೂರ್ಯವಂಶಿ ಮಂಗಳವಾರ ಮತ್ತೊಂದು ದಾಖಲೆಯನ್ನು ತಮ್ಮ ಹೆಸರಿಗೆ ಸೇರಿಸಿಕೊಂಡಿದ್ದಾರೆ. ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ ತಂಡದ ಪರ 16 ಎಸೆತಕ್ಕೆ 43 ರನ್ ಸಿಡಿಸಿ ಐಪಿಎಲ್ ಆವೃತ್ತಿಯೊಂದರಲ್ಲಿ ಅತಿ ವೇಗವಾಗಿ 400 ರನ್ ಕಲೆ ಹಾಕಿದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರು 400 ರನ್ ಗಳಿಸಲು ಕೇವಲ 167 ಎಸೆತಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ಈ ಮೂಲಕ 2019ರಲ್ಲಿ ಆ್ಯಂಡ್ರೆ ರಸೆಲ್ ನಿರ್ಮಿಸಿದ್ದ ದಾಖಲೆ (188 ಎಸೆತ) ಮುರಿದರು.

ಟ್ರಾವಿಸ್ ಹೆಡ್, ಹೆನ್ರಿಕ್ ಕ್ಲಾಸೆನ್ ಸ್ಫೋಟಕ ಬ್ಯಾಟಿಂಗ್ | ಹೈದರಾಬಾದ್‌ಗೆ 6 ವಿಕೆಟ್ ಜಯ

ಮುಂಬೈಗೆ ಪ್ಲೇ ಆಫ್ ಹಾದಿ ಕಠಿಣ

ಮುಂಬೈ: ಟ್ರಾವಿಸ್ ಹೆಡ್ ಹಾಗೂ ಹೆನ್ರಿಕ್ ಕ್ಲಾಸೆನ್ ಅವರ ಸ್ಫೋಟಕ ಅರ್ಧಶತಕಗಳ ಬಲದಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡ, ತನ್ನ ಎದುರಾಳಿ ಮುಂಬೈ ಇಂಡಿಯನ್ಸ್ ಎದುರು 6 ವಿಕೆಟ್‌ಗಳ ಭರ್ಜರಿ ಗೆಲುವು ಪಡೆಯಿತು. ಈ ಜಯದ ಮೂಲಕ 12 ಅಂಕಗಳ ಗಳಿಸಿ ಪಾಯಿಂಟ್ಸ್ ಟೇಬಲ್‌ನಲ್ಲಿ ಮೂರನೇ ಸ್ಥಾನಕ್ಕೆ ಲಗ್ಗೆ ಇಟ್ಟಿತು.

ಬೃಹತ್ ಮೊತ್ತದ ಗುರಿ ನೀಡಿದ್ದರೂ ಬೌಲಿಂಗ್ ವೈಫಲ್ಯದಿಂದಾಗಿ ಐದು ಬಾರಿಯ ಚಾಂಪಿಯನ್ಸ್ ಆಗಿರುವ ಮುಂಬೈ ಸೋಲು ಅನುಭವಿಸಿ, ತನ್ನ ಪ್ಲೇಆಫ್ಸ್ ಹಾದಿಯನ್ನು ಕಠಿಣವಾಗಿಸಿಕೊಂಡಿದೆ.

ಬುಧವಾರ ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ 244 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಹೈದರಾಬಾದ್ ತಂಡಕ್ಕೆ ಅಭಿಷೇಕ್ ಶರ್ಮಾ ಹಾಗೂ ಟ್ರಾವಿಸ್ ಹೆಡ್ 129 ರನ್‌ಗಳ ಜತೆಯಾಟವನ್ನು ಆಡುವ ಮೂಲಕ ಭರ್ಜರಿ ಆರಂಭವನ್ನು ತಂದುಕೊಟ್ಟರು. ಅಬ್ಬರಿಸಿದ ಅಭಿಷೇಕ್ ಶರ್ಮಾ 24 ಎಸೆತಗಳಲ್ಲಿ 45 ರನ್ ಗಳಿಸಿ ಅರ್ಧಶತಕದಂಚಿನಲ್ಲಿ ಗಜನ್‌ಫರ್‌ಗೆ ವಿಕೆಟ್ ಒಪ್ಪಿಸಿದರು.

ಹೆಡ್ ಸ್ಫೋಟಕ ಅರ್ಧಶತಕ: ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತು ಬ್ಯಾಟ್ ಬೀಸಿದ ಟ್ರಾವಿಸ್ ಹೆಡ್ ತಾನು ಆಡಿದ 30 ಎಸೆತಗಳಲ್ಲಿ ಬರೋಬ್ಬರಿ 8 ಸಿಕ್ಸರ್ ಹಾಗೂ 4 ಬೌಂಡರಿಗಳೊಂದಿಗೆ 76 ರನ್ ಸಿಡಿಸಿ, 10ನೇ ಓವರ್‌ನಲ್ಲಿ ಹಾರ್ದಿಕ್ ಪಾಂಡ್ಯಗೆ ವಿಕೆಟ್ ಒಪ್ಪಿಸಿದರು.

ನಾಲ್ಕನೇ ವಿಕೆಟ್‌ಗೆ ಜತೆಯಾದ ಹೆನ್ರಿಕ್ ಕ್ಲಾಸೆನ್ ಹಾಗೂ ನಿತೀಶ್ ಕುಮಾರ್ ರೆಡ್ಡಿ ಮಧ್ಯಮ ಕ್ರಮಾಂಕದಲ್ಲಿ ಭರ್ಜರಿ ಬ್ಯಾಟ್ ಮಾಡಿದರು. ಈ ಇಬ್ಬರೂ 80 ರನ್‌ಗಳ ಜತೆಯಾಟವನ್ನು ಆಡುವ ಮೂಲಕ ತಮ್ಮ ತಂಡವನ್ನು ಗೆಲುವಿನ ಸನಿಹ ತಂದರು. 21 ರನ್ ಗಳಿಸಿದ ಬಳಿಕ ನಿತೀಶ್ ರೆಡ್ಡಿ ಔಟ್ ಆದರು. ಹೆನ್ರಿಕ್ ಕ್ಲಾಸೆನ್ 30 ಎಸೆತಗಳಲ್ಲಿ ಅಜೇಯ 65 ರನ್ (7 ಬೌಂಡರಿ, 4 ಸಿಕ್ಸರ್) ಗಳಿಸಿದಾಗ ಹೈದರಾಬಾದ್ 18.4 ಓವರ್‌ಗಳಿಗೆ 4 ವಿಕೆಟ್ ನಷ್ಟಕ್ಕೆ 249 ರನ್ ಗಳಿಸಿ ಗೆಲುವಿನ ದಡ ಸೇರಿತು. ಕೊನೆಯಲ್ಲಿ ಅರೋರಾ 10 ಎಸೆತಗಳಲ್ಲಿ ಅಜೇಯ 30 ರನ್ ಸಿಡಿಸಿದರು.

ಮುಂಬೈಗೆ ಭರ್ಜರಿ ಆರಂಭ: ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಮುಂಬೈ ನಾಯಕ ಹಾರ್ದಿಕ್ ಪಾಂಡ್ಯ ಅವರ ನಿರ್ಧಾರವನ್ನು ಮೊದಲನೇ ವಿಕೆಟ್‌ಗೆ 93 ರನ್ ಜತೆಯಾಟವನ್ನು ಆಡುವ ಮೂಲಕ ರಯಾನ್ ರಿಕೆಲ್ಟನ್ ಹಾಗೂ ವಿಲ್ ಜ್ಯಾಕ್ಸ್ ಸಮರ್ಥಿಸಿಕೊಂಡರು. ವಿಲ್ ಜ್ಯಾಕ್ಸ್ ಕೇವಲ 22 ಎಸೆತಗಳಲ್ಲಿ 46 ರನ್ ಗಳಿಸಿ ಅರ್ಧಶತದಂಚಿನಲ್ಲಿ ನಿತೀಶ್ ರೆಡ್ಡಿಗೆ ವಿಕೆಟ್ ಒಪ್ಪಿಸಿದರು.

ಸೂರ್ಯಕುಮಾರ್ ಯಾದವ್ (5) ಅವರು ಮತ್ತೊಮ್ಮೆ ವಿಫಲರಾದರು. ನಾಲ್ಕನೇ ಕ್ರಮಾಂಕದಲ್ಲಿ ಆಡಿದ ನಮನ್ ಧೀರ್ 22 ರನ್ ಗಳಿಸಿ ಉತ್ತಮ ಆರಂಭ ಪಡೆದರೂ ಅದನ್ನು ಸಮಪಯೋಗ ಪಡಿಸಿಕೊಳ್ಳುವಲ್ಲಿ ವಿಫಲರಾದರು. ಪಾಂಡ್ಯ 31 ರನ್ ಗಳಿಸಿದರು.

ರಯಾನ್ ರಿಕೆಲ್ಟನ್ ಶತಕ ವ್ಯರ್ಥ: ಮುಂಬೈ ಪರ ಇನಿಂಗ್ಸ್ ಆರಂಭಿಸಿ 20 ಓವರ್‌ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ರಯಾನ್ ರಿಕೆಲ್ಟನ್ ತಮ್ಮ ಐಪಿಎಲ್ ವೃತ್ತಿ ಜೀವನದಲ್ಲಿ ಚೊಚ್ಚಲ ಶತಕವನ್ನು ಬಾರಿಸಿದರು. 44 ಎಸೆತಗಳಲ್ಲಿ ಮುಂಬೈ ಇಂಡಿಯನ್ಸ್ ಪರ ವೇಗದ ಶತಕ ಸಿಡಿಸಿ, 45 ಎಸೆತಗಳಲ್ಲಿ ಶತಕ ಬಾರಿಸಿದ್ದ ಸನತ್ ಜಯಸೂರ್ಯ ದಾಖಲೆಯನ್ನು ಮುರಿದಿದ್ದಾರೆ. ಅಂತಿಮವಾಗಿ 55 ಎಸೆತಗಳಲ್ಲಿ 8 ಸಿಕ್ಸರ್, 10 ಬೌಂಡರಿಗಳೊಂದಿಗೆ ಅಜೇಯ 123 ರನ್ ಗಳಿಸಿದರು.

ಸ್ಕೋರ್ ಬೋರ್ಡ್

ಮುಂಬೈ 243/5 20 ಓವರ್

		ರನ್	ಎಸೆತ	4s	6s
ವಿಲ್ ಜ್ಯಾಕ್ಸ್	ಸಿ ಕಿಶನ್, ಬಿ ನಿತೀಶ್ ರೆಡ್ಡಿ	46	22	5	3
ರಿಕೆಲ್ಟನ್	ನಾಟ್ ಔಟ್	123	55	10	8
ಸೂರ್ಯಕುಮಾರ್	ಸಿ ಅಭಿಷೇಕ್, ಬಿ ಮಾಲಿಂಗ	5	5	1	0
ನಮನ್ ಧೀರ್	ಸಿ ದುಬೆ, ಬಿ ಪ್ರಫುಲ್	22	17	3	0
ಪಾಂಡ್ಯ	ಸಿ ಕ್ಲಾಸೆನ್, ಬಿ ಹುಸೈನ್	31	15	2	2
ತಿಲಕ್	ಸಿ ಕ್ಲಾಸೆನ್, ಬಿ ಪ್ರಫುಲ್	7	5	0	1
ರಾಬಿನ್ ಮಿಂಜ್	ನಾಟ್ ಔಟ್	1	1	0	0

ಬೌಲಿಂಗ್ ಹೈದರಾಬಾದ್

	ಓವರ್	ಮೆಡನ್	ರನ್	ವಿಕೆಟ್
ಕಮಿನ್ಸ್	4	0	39	0
ಪ್ರಫುಲ್	4	0	54	2
ಮಾಲಿಂಗ	4	0	29	1
ಹರ್ಷ ದುಬೆ	3	0	50	0
ಹುಸೈನ್	3	0	39	1
ನಿತೀಶ್ ರೆಡ್ಡಿ	2	0	31	1

ವಿಕೆಟ್ ಪತನ: 1/93, 2/110, 3/165, 4/221, 5/232

ಹೈದರಾಬಾದ್ 249/4 18.4 ಓವರ್

		ರನ್	ಎಸೆತ	4s	6s
ಅಭಿಷೇಕ್	ಸಿ ಬೌಲ್ಟ್, ಬಿ ಗಜನ್‌ಫರ್	45	24	4	3
ಟ್ರಾವಿಸ್ ಹೆಡ್	ಸಿ ಜ್ಯಾಕ್ಸ್, ಬಿ ಪಾಂಡ್ಯ	76	30	4	8
ಇಶಾನ್ ಕಿಶನ್	ಬಿ ಗಜನ್‌ಫರ್	0	1	0	0
ಹೆನ್ರಿಕ್ ಕ್ಲಾಸೆನ್	ನಾಟ್ ಔಟ್	65	30	7	4
ನಿತೀಶ್ ರೆಡ್ಡಿ	ಸಿ ಯಾದವ್, ಬಿ ಬೌಲ್ಟ್	21	17	3	0
ಅರೋರಾ	ನಾಟ್ ಔಟ್	30	10	2	3

ಬೌಲಿಂಗ್ ಮುಂಬೈ

	ಓವರ್	ಮೆಡನ್	ರನ್	ವಿಕೆಟ್
ಬೌಲ್ಟ್	4	0	41	1
ಬುಮ್ರಾ	4	0	54	0
ವಿಲ್ ಜ್ಯಾಕ್ಸ್	1	0	19	0
ಗಜನ್‌ಫರ್	4	0	51	2
ಅಶ್ವನಿ ಕುಮಾರ್	2	0	41	0
ಪಾಂಡ್ಯ	3.4	0	39	1

ವಿಕೆಟ್ ಪತನ: 1-129, 2-129, 3-133, 4-213

ಪ್ಲೇಯರ್ ಆಫ್ ದಿ ಮ್ಯಾಚ್
ಹೆನ್ರಿಕ್ ಕ್ಲಾಸೆನ್ (ಹೈದರಾಬಾದ್)

ವಿರಾಮ
ಪ್ರತಿ ಭಾನುವಾರ

ಪಂದ್ಯ ಗೆದ್ದರೆ ರಜತ್‌ಪಾಟೀದಾರ್ ಪಡೆ ಅಗ್ರಸ್ಥಾನಕ್ಕೆ | ಶುಭಮನ್ ಗಿಲ್ ತಂಡಕ್ಕೆ ಪ್ರತಿಷ್ಠೆಯ ಕಾದಾಟ

ತವರಲ್ಲಿಂದು ಟೈಟಾನ್ಸ್‌ಗೆ ಆರ್‌ಸಿಬಿ ಚಾಲೆಂಜ್

ಅಹಮದಾಬಾದ್: ಇಂದು ನಡೆಯುವ ಐಪಿಎಲ್‌ನ 42ನೇ ಪಂದ್ಯದಲ್ಲಿ ಆರ್‌ಸಿಬಿ ತಂಡವು ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ. ಅಹಮದಾಬಾದ್‌ನ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಆರ್‌ಸಿಬಿಯನ್ನು ಹೇಗಾದರೂ ಸೋಲಿಸಿ ಸೇಡು ತೀರಿಸುವ ಯೋಚನೆ ಶುಭಮನ್ ಗಿಲ್ ಪಡೆಯದ್ದಾಗಿದೆ.

ಗುಜರಾತ್ ತಂಡವು ಈ ಹಿಂದಿನ ಮುಖಾಮುಖಿಯಲ್ಲಿ ಆರ್‌ಸಿಬಿ ಎದುರು 5 ವಿಕೆಟ್ ಅಂತರದ ಸೋಲು ಕಂಡಿತ್ತು.

ಚೆನ್ನೈ ವಿರುದ್ಧ ಎಂಟು ವಿಕೆಟ್‌ಗಳ ಜಯ ಸಾಧಿಸಿ ಗೆಲುವಿನ ಹಳಿಗೆ ಮರಳಿರುವ ಗುಜರಾತ್ ಟೈಟಾನ್ಸ್ ತಂಡವು ಮತ್ತೊಂದು ಭರ್ಜರಿ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ, ಮತ್ತೊಂದೆಡೆ ಆರ್‌ಸಿಬಿ ತಂಡವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದ ಉತ್ಸಾಹದಲ್ಲಿದೆ.

ಆರ್‌ಸಿಬಿ ತಂಡ ಎಲ್ಲಾ ವಿಭಾಗದಲ್ಲೂ ಬಲಿಷ್ಠವಾಗಿದೆ. ಬ್ಯಾಟಿಂಗ್‌ನಲ್ಲಿ ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ನಾಯಕ ರಜತ್ ಪಾಟೀದಾರ್, ಟಿಮ್ ಡೇವಿಡ್ ಅಬ್ಬರಿಸುತ್ತಿದ್ದಾರೆ. ಫಿಲ್ ಸಾಲ್ಟ್ ಗಾಯಗೊಂಡಿರುವ ಕಾರಣ ಜೇಕಬ್ ಬೆಥೆಲ್‌ಗೆ ಇಂಪ್ಯಾಕ್ಟ್ ಪ್ಲೇಯರ್ ಆಗಿ ಮತ್ತೊಂದು ಅವಕಾಶ ಸಿಗುವುದು ಬಹುತೇಕ ಖಚಿತ. ಬೌಲಿಂಗ್‌ನಲ್ಲಿ ಭುವನೇಶ್ವರ್ ಕುಮಾರ್, ಹೇಜಲ್‌ವುಡ್, ಕೃನಾಲ್ ಪಾಂಡ್ಯ ಪಂದ್ಯದಿಂದ ಪಂದ್ಯಕ್ಕೆ ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಗುರುವಾರ ಪಂದ್ಯ ಗೆದ್ದರೆ ಪಂಜಾಬ್ ಕಿಂಗ್ಸ್ ತಂಡವನ್ನು ಹಿಂದಿಕ್ಕಿ ಅಂಕಪಟ್ಟಿಯಲ್ಲಿ ಆರ್‌ಸಿಬಿ ಅಗ್ರಸ್ಥಾನಕ್ಕೆ ಜಿಗಿಯುವ ಅವಕಾಶ ಹೊಂದಿದೆ.

ಸಂಭಾವ್ಯ ತಂಡಗಳು

ಗುಜರಾತ್ ಟೈಟಾನ್ಸ್: ಶುಭಮನ್ ಗಿಲ್ (ನಾಯಕ), ಸಾಯಿ ಸುದರ್ಶನ್, ಜೋಸ್ ಬಟ್ಲರ್ (ಕೀಪರ್), ಶಾರುಖ್ ಖಾನ್, ವಾಷಿಂಗ್ಟನ್ ಸುಂದರ್, ಜೇಸನ್ ಹೋಲ್ಡರ್, ರಶೀದ್ ಖಾನ್, ಪ್ರಸಿದ್ಧ್ ಕೃಷ್ಣ, ಕಗಿಸೊ ರಬಾಡ, ಮೊಹಮ್ಮದ್ ಸಿರಾಜ್, ಮಾನವ್ ಸುತಾರ್.

ಇಂಪ್ಯಾಕ್ಟ್ ಆಟಗಾರ: ರಾಹುಲ್ ತೆವಾಟಿಯಾ.

ಆರ್‌ಸಿಬಿ: ರಜತ್ ಪಾಟಿದಾರ್ (ನಾಯಕ), ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಜಿತೇಶ್ ಶರ್ಮಾ (ಕೀಪರ್), ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್, ಕೃನಾಲ್ ಪಾಂಡ್ಯ, ಭುವನೇಶ್ವರ್ ಕುಮಾರ್, ಜೋಶ್ ಹೇಜಲ್‌ವುಡ್, ಸುಯಶ್ ಶರ್ಮಾ, ರಸಿಖ್ ಸಲಾಮ್ ದಾರ್.

ಇಂಪ್ಯಾಕ್ಟ್ ಪ್ಲೇಯರ್: ಜಾಕೋಬ್ ಬೆಥೆಲ್.

ಇಂದಿನ ಪಂದ್ಯ

ಬೆಂಗಳೂರು-ಗುಜರಾತ್

ಪಂದ್ಯ ಆರಂಭ: ರಾತ್ರಿ 7.30
ತಾಣ: ಮೋದಿ ಸ್ಟೇಡಿಯಂ, ಅಹಮದಾಬಾದ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಜಿಯೋ ಹಾಟ್‌ಸ್ಟಾರ್

ಗುಜರಾತ್ ತಂಡ ಇದೀಗ ಅಂಕಪಟ್ಟಿಯಲ್ಲಿ 5ನೇ ಸ್ಥಾನದಲ್ಲಿದ್ದು ಇಂದಿನ ಪಂದ್ಯ ಗೆದ್ದು ತನ್ನ ನೆಟ್ ರನ್‌ರೇಟ್ ಸುಧಾರಿಸಿ ಅಗ್ರ 4ರೊಳಗೆ ಸ್ಥಾನ ಪಡೆಯುವ ತವಕವನ್ನೊಂದಿದೆ. ಹಾಗಾಗಿ ತವರಿನ ಪಂದ್ಯವನ್ನು ಹೇಗಾದರೂ ಗೆದ್ದು ಬೀಗುವ ಆತುರದಲ್ಲಿದೆ.

ಪಿಚ್ ರಿಪೋರ್ಟ್: ಮೋದಿ ಕ್ರೀಡಾಂಗಣದ ಪಿಚ್ ಸಮತೋಲಿತ ವಿಕೆಟ್‌ಗಳನ್ನು ಹೊಂದಿದ್ದು ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡೂ ಅಂಶಗಳಿಗೆ ಸಮಾನವಾಗಿ ಇದುವರೆಗೂ ಸಹಾಯ ಮಾಡಿದೆ. ಈ ಋತುವಿನಲ್ಲಿ ಇಲ್ಲಿಯವರೆಗೆ ಮೂರು ಪಂದ್ಯಗಳು ಅಲ್ಲಿ ನಡೆದಿದ್ದು ಅವುಗಳಲ್ಲಿ ಎರಡೂ ತಂಡಗಳು ಉತ್ತಮ ಮೊತ್ತವನ್ನೇ ಕಲೆ ಹಾಕಿವೆ.

ಮುಖಾಮುಖಿ: ಐಪಿಎಲ್‌ನಲ್ಲಿ ಈ ವರೆಗೂ ಒಟ್ಟು 7 ಬಾರಿ ಆರ್‌ಸಿಬಿ ಮತ್ತು ಗುಜರಾತ್ ಮುಖಾಮುಖಿ ಆಗಿದ್ದು, ಆರ್‌ಸಿಬಿ 4ರಲ್ಲಿ ಗೆಲುವನ್ನು ಪಡೆದಿದ್ದರೆ, ಗುಜರಾತ್ 3ರಲ್ಲಿ ಜಯ ಕಂಡಿದೆ.

ಬಿಜೆಪಿ ಸೂಚನೆಯಂತೆ ಕೇಂದ್ರ ಪಡೆಗಳ ಕೆಲಸ: ಮಮತಾ ಬ್ಯಾನರ್ಜಿ ಆರೋಪ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭೆಗೆ ಬುಧವಾರದಂದು ಎರಡನೆಯ ಹಾಗೂ ಕೊನೆಯ ಹಂತದ ಮತದಾನ ನಡೆಯಿತು. ಈ ಸಂದರ್ಭದಲ್ಲಿ ತಾವು ಸ್ಪರ್ಧಿಸಿರುವ ಭವಾನಿಪುರ ಕ್ಷೇತ್ರಕ್ಕೆ ಭೇಟಿಯಿತ್ತ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ನಾಯಕಿ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು, ''ಕೇಂದ್ರೀಯ ಪಡೆಗಳ ಸಿಬ್ಬಂದಿ ಹಾಗೂ ಚುನಾವಣಾ ವೀಕ್ಷಕರು ಬಿಜೆಪಿಯ ಸೂಚನೆಯಂತೆ ಕೆಲಸ ಮಾಡುತ್ತಿದ್ದಾರೆ. ತನ್ಮೂಲಕ ಬಿಜೆಪಿಯು ಚುನಾವಣೆಯ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಿದೆ'' ಎಂದು ಆರೋಪಿಸಿದರು.



ದಕ್ಷಿಣ ಕೋಲ್ಕತ್ತಾ ಸೇರಿದಂತೆ ಹಲವಾರು ಮತಗಟ್ಟೆಗಳಿಗೆ ಭೇಟಿ ನೀಡಿದ ಬಳಿಕ ಮಾಧ್ಯಮ ಮಿತ್ರರೊಂದಿಗೆ ಮಾತನಾಡಿದ ಅವರು, ''ಜನರು ತಮ್ಮ ಇಚ್ಛಾನುಸಾರ ಮತವನ್ನು ಚಲಾಯಿಸುವಂತಾಗಬೇಕು. ಆದರೆ, ಹೊರಗಿನವರು ಮತದಾನದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಹೀಗಾದರೆ ಮತದಾನ ಪ್ರಕ್ರಿಯೆ ಪಾರದರ್ಶಕವಾಗಿ ಹೇಗೆ ನಡೆಯುತ್ತದೆ? ಟಿಎಂಸಿ ಪಕ್ಷದ ಎಲ್ಲ ಧ್ವಜಗಳನ್ನು ತೆಗೆದುಹಾಕಲಾಗಿದೆ, ಗಲಭೆಗಳನ್ನು ಸೃಷ್ಟಿಸಲು ಕೆಲವರು ಯತ್ನಿಸುತ್ತಿದ್ದಾರೆ. ಚುನಾವಣಾ ಆಯೋಗವು ತಕ್ಷಣವೇ ಮಧ್ಯ ಪ್ರವೇಶಿಸಬೇಕು'' ಎಂದು ಆಗ್ರಹಿಸಿದರು. ಆದರೆ, ಮಮತಾ ಬ್ಯಾನರ್ಜಿಯವರ ಆರೋಪಗಳನ್ನು ತಳ್ಳಿಹಾಕಿರುವ ಬಿಜೆಪಿ, ''ಸಾರ್ವಜನಿಕರ ಆಕ್ರೋಶಕ್ಕೆ ಒಳಗಾಗಿರುವ ಆಡಳಿತ ಪಕ್ಷವು ಮತದಾರರಲ್ಲಿ ಗೊಂದಲವನ್ನು ಸೃಷ್ಟಿಸಲು ಯತ್ನಿಸುತ್ತಿದೆ'' ಎಂದು ಹೇಳಿದೆ.

ಭವಾನಿಪುರ ಕ್ಷೇತ್ರವು ಮಮತಾ ಬ್ಯಾನರ್ಜಿಯವರ ರಾಜಕೀಯ ಭದ್ರಕೋಟೆಯಗಿದ್ದು, ಅವರಿಗೆ ವಿಪಕ್ಷ ನಾಯಕ ಸುವೇಂದು ಅಧಿಕಾರಿ ಪ್ರತಿಸ್ಪರ್ಧಿಯಾಗಿರುವುದರಿಂದ ಇದು ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದೆ. ಮತ್ತೊಂದೆಡೆ, 2021ರ ವಿಧಾನಸಭಾ ಚುನಾವಣೆಯಲ್ಲಿ ನಂದಿಗ್ರಾಮ ಕ್ಷೇತ್ರದಲ್ಲಿ ಸುವೇಂದು ಅಧಿಕಾರಿ ಅವರು ಮಮತಾರನ್ನು ಸೋಲಿಸಿದ್ದರು ಎಂಬುದನ್ನಿಲ್ಲಿ ಸ್ಮರಿಸಬಹುದು.

ಮಾತಿಲ್ಲ, ಕಥೆಯಿಲ್ಲ!

ಕದನ ಕುತೂಹಲಕ್ಕೆ ವೇದಿಕೆಯಾಗಿದೆ ಭವಾನಿಪುರ ವಿಧಾನಸಭಾ ಕ್ಷೇತ್ರ. ಇದರ ವ್ಯಾಪ್ತಿಯಲ್ಲಿ ಬರುವ ಚಕ್ರಬೇರಿಯಾದ ವಾರ್ಡ್ ಸಂಖ್ಯೆ 70ರಲ್ಲಿ ಟಿಎಂಸಿ ಪಕ್ಷದ ಅಭ್ಯರ್ಥಿ ಸಿಎಂ ಮಮತಾ ಬ್ಯಾನರ್ಜಿ ಹಾಗೂ ವಿಪಕ್ಷ ನಾಯಕ ಬಿಜೆಪಿಯ ಸುವೇಂದು ಅಧಿಕಾರಿ ಹಾಜರಾಗಿದ್ದು ಹೌದಾದರೂ, ಯಾವುದೇ ನೇರ ಸಂವಹನವಾಗಲೀ, ಸೌಜನ್ಯಕ್ಕಾದರೂ ನಗೆಯ ವಿನಿಮಯವಾಗಲೀ ಅಲ್ಲಿ ನಡೆಯಲಿಲ್ಲ.

ಅಷ್ಟು ಹೊತ್ತಿಗೆ ಅಲ್ಲಿ ನೆರೆದಿದ್ದ ಟಿಎಂಸಿಯ ಸ್ಥಳೀಯ ನಾಯಕರು ಮತ್ತು ಕಾರ್ಯಕರ್ತರು, ''ರಾಜಕೀಯ ಎದುರಾಳಿಗಳು ನಮ್ಮ ಮೇಲೆ ಬೆದರಿಕೆ ಹಾಕಿದ್ದಾರೆ'' ಎಂದು ಮಮತಾ ಬ್ಯಾನರ್ಜಿಯವರ ಬಳಿ ದೂರಿದರು. ಇದಕ್ಕೆ ಪ್ರತಿಯಾಗಿ ಮಮತಾ ಅವರು, ''ಕೇಂದ್ರೀಯ ಪಡೆಗಳು, ಪೊಲೀಸ್ ವೀಕ್ಷಕರು ಹಾಗೂ ಚುನಾವಣಾ ಅಧಿಕಾರಿಗಳನ್ನು ಬಳಸಿಕೊಂಡು ಚುನಾವಣೆಯಲ್ಲಿ ಅಕ್ರಮವೆಸಗಲು ಬಿಜೆಪಿ ಯತ್ನಿಸುತ್ತಿದೆ'' ಎಂದು ಕೆಂಡ ಕಾರಿದ್ದೂ ಆಯಿತು. ಇದು ತಮ್ಮ ಗಮನಕ್ಕೆ ಬರುತ್ತಿದ್ದಂತೆ ಬಿಜೆಪಿಯ ಸುವೇಂದು ಅಧಿಕಾರಿ, ''ಇಂಥ ಆರೋಪಗಳು ಹತಾಶೆಯ ಸಂಕೇತಗಳಷ್ಟೇ; ತಮ್ಮ ಕಡೆಗೆ ಒಂದೇ ಒಂದು ಮತವೂ ಬರುತ್ತಿಲ್ಲ ಎಂಬುದು ಮುಖ್ಯಮಂತ್ರಿಗಳಿಗೆ ಗೊತ್ತಾಗಿ ಹೀಗೆಲ್ಲಾ ಮಾತನಾಡುತ್ತಿದ್ದಾರೆ'' ಎಂದು ತಿರುಗೇಟು ನೀಡಿದರು. ಮಾತು ಮುಂದುವರಿಸಿದ ಸುವೇಂದು, ''ಇಂದು ಮತದಾರರ ದಿನ. ನಾನು ಭವಾನಿಪುರ ಕ್ಷೇತ್ರದಲ್ಲಿ ಕನಿಷ್ಠ ಪಕ್ಷ 30,000 ಮತಗಳ ಅಂತರದಿಂದ ಗೆಲ್ಲುತ್ತೇನೆ'' ಎಂದು ಆತ್ಮವಿಶ್ವಾಸದಿಂದ ನುಡಿದರು.

142 ಸ್ಥಾನಗಳಿಗೆ ನಡೆದ ಈ ಎರಡನೇ ಹಂತದ ಮತದಾನದಲ್ಲಿ ಹೊಮ್ಮುವ ಫಲಿತಾಂಶವು ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ಎರಡೂ ಪಕ್ಷಗಳಿಗೆ ನಿರ್ಣಾಯಕವಾಗಲಿದೆ. ಏಕೆಂದರೆ, 2021ರ ಚುನಾವಣೆಯಲ್ಲಿ ಈ 142 ಸ್ಥಾನಗಳ ಪೈಕಿ ಬಿಜೆಪಿಗೆ ದಕ್ಕಿದ್ದು 18 ಮಾತ್ರ. 123 ಸ್ಥಾನಗಳ ಸಿಂಹಪಾಲು ಟಿಎಂಸಿ ಮಡಿಲನ್ನು ಸೇರಿತ್ತು ಹಾಗೂ ಐಎಸ್‌ಎಫ್ ಪಕ್ಷ ಮಿಕ್ಕ ಒಂದು ಸ್ಥಾನವನ್ನು ಪಡೆದುಕೊಂಡಿತ್ತು. ಪ್ರಸ್ತುತ, ಈ ವಲಯದಲ್ಲಿ ಮತ್ತಷ್ಟು ಸ್ಥಾನಗಳನ್ನು ದಕ್ಕಿಸಿಕೊಳ್ಳಬೇಕೆಂದು ಬಿಜೆಪಿ ಇದುವರೆಗೆ ಇನ್ನಿಲ್ಲದ ಹರಸಾಹಸವನ್ನು ಮಾಡಿದೆ. ಅದರ ಫಲಿತವು ಮೇ 4ರಂದು ಗೊತ್ತಾಗಲಿದೆ.

ಮತದಾನದ ವೇಳೆ ಕೆಲವೆಡೆ ಹಿಂಸಾಚಾರ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಎರಡನೇ ಹಂತದ ಮತದಾನದ ವೇಳೆ ಕೆಲವೆಡೆ ಘರ್ಷಣೆ ಮತ್ತು ಹಿಂಸಾಚಾರಗಳು ನಡೆದಿರುವುದು ವರದಿಯಾಗಿದೆ. ಎರಡನೇ ಹಂತದ ಮತದಾನ ನಿಗದಿಯಾಗಿದ್ದ 142 ಕ್ಷೇತ್ರಗಳ ಪೈಕಿ ಶಾಂತಿಪುರ, ಛಪ್ರಾ, ನಿಮ್ತಾಲಾ ಮತ್ತು ಭಂಗಾರ್ ಕ್ಷೇತ್ರಗಳಲ್ಲಿ ಈ ಬೆಳವಣಿಗೆ ತೀವ್ರ ಸ್ವರೂಪದಲ್ಲಿ ಕಂಡುಬಂದಿದೆ ಎನ್ನಲಾಗಿದೆ.

ಶಾಂತಿಪುರ ಕ್ಷೇತ್ರದ ವಾರ್ಡ್ 16ರಲ್ಲಿದ್ದ ಬಿಜೆಪಿಯ ಕ್ಯಾಂಪ್ ಕಚೇರಿಯ ಮೇಲೆ ದಾಳಿ ನಡೆಸಿದ ಆರೋಪಿಗಳು ಅಲ್ಲಿನ ಪೀಠೋಪಕರಣಗಳನ್ನು ಧ್ವಂಸಮಾಡಿದರು ಎಂದು ತಿಳಿದುಬಂದಿದೆ.

ಇನ್ನು, ನಾದಿಯಾ ಜಿಲ್ಲೆಯ ಛಪ್ರಾದಲ್ಲಿನ ಬೂತ್ ಸಂಖ್ಯೆ 53ರಲ್ಲಿ ಬಿಜೆಪಿಯ ಮತಗಟ್ಟೆ ಏಜೆಂಟ್ ಮೇಲೆ ಟಿಎಂಸಿ ಪಕ್ಷದ ಗೂಂಡಾಗಳು ಹಲ್ಲೆ ನಡೆಸಿದ್ದು, ಈ ಕುರಿತು ಪ್ರಕರಣವನ್ನು ದಾಖಲಿಸಲಾಗಿದೆ ಎಂದು ಬಿಜೆಪಿ ಅಭ್ಯರ್ಥಿ ಸೈಕತ್ ಸರ್ಕಾರ್ ತಿಳಿಸಿದ್ದಾರೆ. ಗಾಯಾಳುವನ್ನು ಮೊಷರೆಫ್ ಮೀರ್ ಎಂದು ಗುರುತಿಸಲಾಗಿದ್ದು ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಟಿಎಂಸಿ ಪಕ್ಷದ ಸುಮಾರು 15 ಮಂದಿ ಕಾರ್ಯಕರ್ತರು ಸಲಾಕೆಯಿಂದ ತಮ್ಮ ಮೇಲೆ ಹಲ್ಲೆ ನಡೆಸಿದ್ದಾಗಿಯೂ, ಅವರಲ್ಲಿ ಒಬ್ಬನ ಬಳಿ ಬಂದೂಕು ಇದ್ದುದಾಗಿಯೂ ಗಾಯಾಳು ತಿಳಿಸಿದ್ದಾರೆ ಎನ್ನಲಾಗಿದೆ.

ಮತಗಟ್ಟೆಯೊಂದರ ಬಳಿ ಪಕ್ಷದ ಕಾರ್ಯಕರ್ತರ ಗುಂಪು ಕಟ್ಟಿಕೊಂಡು ನಿಂತಿದ್ದ ಕಾರ್ತಿಕ್ ಬ್ಯಾನರ್ಜಿಯವರಿಗೆ (ಇವರು ಸಿಎಂ ಮಮತಾ ಬ್ಯಾನರ್ಜಿಯವರ ಸೋದರ) ಪೊಲೀಸರು ಎಚ್ಚರಿಕೆ ನೀಡಿ, ಮತಗಟ್ಟೆಯ ಬಳಿ ನಾಲ್ಕಕ್ಕಿಂತ ಹೆಚ್ಚು ಜನರು ಗುಂಪುಕಟ್ಟಿಕೊಂಡು ನಿಲ್ಲದಂತೆ ಸೂಚಿಸಿದರು ಎಂದು ಸುದ್ದಿಮೂಲಗಳು ತಿಳಿಸಿವೆ. ಏಪ್ರಿಲ್ 23ರಂದು ಮೊದಲ ಹಂತದ ಮತದಾನ ನಡೆದ ಸಂದರ್ಭದಲ್ಲೂ ಸಾಕಷ್ಟು ಕಡೆ ಹಿಂಸಾಚಾರ ಮತ್ತು ಗಲಭೆಗಳಾಗಿದ್ದವು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಚುನಾವಣೆ ಮುಗಿದ ಮೇಲೂ ಭದ್ರತೆ: ಶಾ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭೆಗೆ ಏಪ್ರಿಲ್ 29ರಂದು ಎರಡನೇ ಹಂತದ ಮತದಾನ ನಡೆದಿದೆ ಮತ್ತು ಈ ಸಂದರ್ಭದಲ್ಲಿ ಸಾಕಷ್ಟು ಕಡೆ ಗಲಭೆ-ಹಿಂಸಾಚಾರಗಳು ನಡೆದಿರುವುದು ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ''ಕೇಂದ್ರೀಯ ಭದ್ರತಾ ಪಡೆಯ ಸಿಬ್ಬಂದಿಗಳು ಚುನಾವಣೆ ಮುಗಿದ ನಂತರವೂ 60ಕ್ಕೂ ಹೆಚ್ಚು ದಿನಗಳವರೆಗೆ ರಾಜ್ಯದಲ್ಲಿದ್ದು ಭದ್ರತೆಯನ್ನು ಒದಗಿಸಲಿದ್ದಾರೆ'' ಎಂದು ತಿಳಿಸಿದ್ದಾರೆ.

ಚುನಾವಣೆ ಸಂಪನ್ನಗೊಂಡ ನಂತರದಲ್ಲಿ ಬಂಗಾಳದಲ್ಲಿ ವಿವಿಧ ಕಾರಣಗಳಿಗೆ ಹಿಂಸಾಚಾರವು ಭುಗಿಲೇಳುವುದನ್ನು ತಡೆಗಟ್ಟಲೆಂದು ಕೇಂದ್ರ ಸರಕಾರವು ಸಿಎಪಿಎಫ್ ಪಡೆಯ ಸೇವೆಯನ್ನು ಹೀಗೆ ಮತ್ತಷ್ಟು ಅವಧಿಯವರೆಗೆ ವಿಸ್ತರಿಸಲು ನಿರ್ಧರಿಸಿದೆ ಎಂದು ತಿಳಿದುಬಂದಿದೆ.

2021ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲೂ ಚುನಾವಣೋತ್ತರ ಹಿಂಸಾಚಾರಕ್ಕೆ ರಾಜ್ಯವು ಸಾಕ್ಷಿಯಾಗಿತ್ತು. 2021ರ ಮೇ 2ರಂದು ಫಲಿತಾಂಶ ಹೊರಬೀಳುತ್ತಿದ್ದಂತೆ ಅನೇಕ ಜಿಲ್ಲೆಗಳಲ್ಲಿ ಹಿಂಸಾಚಾರ ಭುಗಿಲೆದ್ದು, ಬಿಜೆಪಿ ಹಾಗೂ ತೃಣಮೂಲ ಕಾಂಗ್ರೆಸ್ ಪಕ್ಷಗಳ ಕಾರ್ಯಕರ್ತರ ನಡುವೆ ಮಾರಾಮಾರಿ ನಡೆದಿತ್ತು ಎಂಬುದನ್ನಿಲ್ಲಿ ಸ್ಮರಿಸಬಹುದು.

ನಿರ್ಭಯ ಮತದಾನ: ಪಿಎಂ ನರೇಂದ್ರ ಮೋದಿ ಮೆಚ್ಚುಗೆ

ಹರ್ದೋಯಿ: ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಮತದಾರರು ನಿರ್ಭಯವಾಗಿ ಮತ ಚಲಾಯಿಸಿದ್ದಾರೆ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ. ಉತ್ತರ ಪ್ರದೇಶದ ಹರ್ದೋಯಿಯಲ್ಲಿ 'ಗಂಗಾ ಎಕ್ಸ್‌ಪ್ರೆಸ್ ಹೈವೇ'ಯನ್ನು ಉದ್ಘಾಟಿಸಿ ಮಾತನಾಡಿದ ಅವರು, ''ಕಳೆದ 6-7 ದಶಕಗಳಿಗೆ ಹೋಲಿಸಿದರೆ, ಬಂಗಾಳದಲ್ಲಿ ಈ ಬಾರಿಯ ಚುನಾವಣಾ ವಾತಾವರಣ ನಿರ್ಭೀತಿಯಿಂದ ಕೂಡಿತ್ತು. ಜನರು ಭಾರಿ ಸಂಖ್ಯೆಯಲ್ಲಿ ಮನೆಯಿಂದ ಹೊರಬಂದು ಮತ ಚಲಾಯಿಸಿರುವುದು ನಿಜಕ್ಕೂ ಅಭೂತಪೂರ್ವವಾದ ದೃಶ್ಯ. ಇದು ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಬಲಕ್ಕೆ ಸಾಕ್ಷಿ'' ಎಂದು ಬಣ್ಣಿಸಿದರು.

ಟಿಎಂಸಿ ಗೂಂಡಾಗಳಿಂದ ದಾಳಿ: ಸುವೇಂದು ಆರೋಪ

ಕೋಲ್ಕತ್ತಾ: ಬಂಗಾಳ ವಿಧಾನಸಭೆಯಲ್ಲಿ ವಿಪಕ್ಷ ನಾಯಕರೂ ಆಗಿರುವ ಸುವೇಂದು ಅಧಿಕಾರಿ ಅವರು, ಟಿಎಂಸಿ ಅಭ್ಯರ್ಥಿ ಸಿಎಂ ಮಮತಾ ಬ್ಯಾನರ್ಜಿಯವರ ವಿರುದ್ಧ ಭವಾನಿಪುರ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದಾರೆ. ಮತಗಟ್ಟೆಯೊಂದರ ಬಳಿ ತಮ್ಮ ಮೇಲೆ ದಾಳಿ ಮಾಡಲು ಬಂದವರು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಗೂಂಡಾಗಳೇ ವಿನಾ, ಮತದಾರರಲ್ಲ. ಅವರೆಲ್ಲರೂ ಹೊರಗಿನವರು ಎಂದು ಸುವೇಂದು ಆರೋಪಿಸಿದ್ದಾರೆ.

ಬುಧವಾರದ ಮತದಾನದ ವೇಳೆ ಮತಗಟ್ಟೆಯೊಂದರ ಬಳಿ ಸುವೇಂದು ಅವರನ್ನು ಸುತ್ತುವರಿದ ಟಿಎಂಸಿ ಬೆಂಬಲಿಗರು 'ಜೈ ಬಂಗಾಳ' ಘೋಷಣೆಯನ್ನು ಕೂಗಿದ್ದರು.

ಮೋದಿಗೆ ಡೆರೆಕ್ ಒಬ್ರಿಯೆನ್ ಸವಾಲು

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಪಡೆಯುವಲ್ಲಿ ಬಿಜೆಪಿ ಒಂದೊಮ್ಮೆ ವಿಫಲವಾದರೆ, ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಿಯೆನ್ ಸವಾಲು ಹಾಕಿದ್ದಾರೆ. ಈ ಕುರಿತಂತೆ ಒಂದು ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಅವರು, ''ಮೋದಿಯವರು ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಬಿಜೆಪಿಯ ಮುಖವಾಣಿಯಂತೆ ತಮ್ಮನ್ನು ಬಿಂಬಿಸಿಕೊಂಡಿದ್ದಾರೆ. ಬಂಗಾಳದ ಎಲ್ಲಾ ಕ್ಷೇತ್ರಗಳಲ್ಲೂ ತಾವೇ ಅಭ್ಯರ್ಥಿ ಎಂದು ಹೇಳಿಕೊಂಡಿದ್ದಾರೆ. ಮೇ 4ರಂದು ಚುನಾವಣಾ ಫಲಿತಾಂಶ ಹೊರಹೊಮ್ಮಿ, ಮಮತಾ ಬ್ಯಾನರ್ಜಿ ನೇತೃತ್ವದ ಸರಕಾರವು ಮತ್ತೊಮ್ಮೆ ಅಧಿಕಾರದ ಗದ್ದುಗೆಯೇರಿದಾಗ ತಮ್ಮ ಹುದ್ದೆಗೆ ರಾಜೀನಾಮೆ ನೀಡುವ ಧೈರ್ಯವನ್ನು ಪ್ರಧಾನಿ ತೋರಿಸಲಿ. ನನ್ನ ಈ ಸವಾಲನ್ನು ಅವರು ಸ್ವೀಕರಿಸಲಿ'' ಎಂದಿದ್ದಾರೆ.

ಇವಿಎಂ ಟ್ಯಾಂಪರಿಂಗ್: ಬಿಜೆಪಿ ಗಂಭೀರ ಆರೋಪ

ಕೋಲ್ಕತ್ತಾ: ಪಶ್ಚಿಮ ಬಂಗಾಳ ಚುನಾವಣೆಯ 2ನೇ ಹಂತದ ಮತದಾನದ ವೇಳೆ ಆಡಳಿತಾರೂಢ ಟಿಎಂಸಿ ಪಕ್ಷ ಅಕ್ರಮವೆಸಗಿದೆ ಎಂದು ಬಿಜೆಪಿ ಆರೋಪಿಸಿದೆ. ಈ ಕುರಿತು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ವಿಡಿಯೋ ಹಂಚಿಕೊಂಡಿರುವ ಬಿಜೆಪಿ ನಾಯಕ ಅಮಿತ್ ಮಾಳವೀಯ ಅವರು, ''ಸಿಎಂ ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರ ರಾಜಕೀಯ ಭದ್ರಕೋಟೆ ಎನಿಸಿಕೊಂಡಿರುವ 'ಡೈಮಂಡ್ ಹಾರ್ಬರ್' ಕ್ಷೇತ್ರದಲ್ಲಿ ಈ ಘಟನೆ ನಡೆದಿದೆ. ದಕ್ಷಿಣ 24 ಪರಗಣ ಜಿಲ್ಲೆಯ ಫಾಲ್ಟಾ ಕ್ಷೇತ್ರದ ಅನೇಕ ಮತಗಟ್ಟೆಗಳಲ್ಲಿ, ವಿದ್ಯುನ್ಮಾನ ಮತಯಂತ್ರದ (ಇವಿಎಂ) ಮೇಲಿರುವ ಬಿಜೆಪಿಯ ಕಮಲದ ಚಿಹ್ನೆಯ ಬಟನ್ ಅನ್ನು ಟೇಪ್‌ನಿಂದ ಮುಚ್ಚಲಾಗಿದೆ'' ಎಂದು ಆರೋಪಿಸಿ, ''ಫಾಲ್ಟಾದಲ್ಲಿನ ಎಲ್ಲಾ ಮತಗಟ್ಟೆಗಳಲ್ಲಿ ಮರು ಮತದಾನವನ್ನು ನಡೆಸಬೇಕು'' ಎಂದು ಆಗ್ರಹಿಸಿದ್ದಾರೆ.

ಬಿಜೆಪಿ ನಾಯಕರ ಈ ಆರೋಪಕ್ಕೆ ತಿರುಗೇಟು ನೀಡಿರುವ ಟಿಎಂಸಿ ಪಕ್ಷದ ವಕ್ತಾರ ರಿಜು ದತ್ತಾ, ''ಪಶ್ಚಿಮ ಬಂಗಾಳದಲ್ಲಿ ತನಗೆ ಸೋಲು ಒದಗುವ ಭೀತಿಯಿಂದಾಗಿ ಬಿಜೆಪಿ ಹೀಗೆ ಸುಳ್ಳು ಸುದ್ದಿ ಹಬ್ಬಿಸುತ್ತಿದೆ. ವಿದ್ಯುನ್ಮಾನ ಮತಯಂತ್ರದ ನಿರ್ವಹಣೆಯು ಚುನಾವಣಾ ಆಯೋಗದ ಜವಾಬ್ದಾರಿ; ಅದಕ್ಕೂ ನಮಗೂ ಸಂಬಂಧವಿಲ್ಲ. ಅಮಿತ್ ಮಾಳವೀಯ ಅವರು ಹೀಗೆ ಸಾಮಾಜಿಕ ಮಾಧ್ಯಮದಲ್ಲಿ ಸುಳ್ಳು ಟ್ವೀಟ್ ಮಾಡುವ ಬದಲು, ತಮ್ಮ ಮೇಲಧಿಕಾರಿಗಳಿಗೆ ದೂರು ನೀಡಿ, ಮುಖ್ಯ ಚುನಾವಣಾ ಆಯುಕ್ತರನ್ನೇ ವಜಾಗೊಳಿಸಲಿ'' ಎಂದಿದ್ದಾರೆ.

ವಿಶ್ವವಾಣಿ ಬೆಂಗಳೂರು 30-04-2026 ಗುರುವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ನರಸಿಂಹ ಜಯಂತಿ ವಿಶೇಷ

ನವ ನರಸಿಂಹರ ದರ್ಶನ ಮಾಡೋಣ ಬನ್ನಿ...

ನರಸಿಂಹನ ಆರಾಧನೆಯು ನಮ್ಮ ದೇಶದಲ್ಲಿ ವ್ಯಾಪಕವಾಗಿದೆ. ವಿಷ್ಣುವಿನ ಅವತಾರವೆಂದು ಪೂಜಿಸಲ್ಪಡುವ ನರಸಿಂಹನು, ಹಿರಣ್ಯಕಶಿಪುವನ್ನು ಕೊಂದು, ವಿಷ್ಣುಭಕ್ತ ಪ್ರಹ್ಲಾದನನ್ನು ರಕ್ಷಿಸಿದ ಕಥೆಯೂ ಪ್ರಸಿದ್ಧ. ನರಸಿಂಹನ ಒಂಬತ್ತು ದೇಗುಲಗಳು ಅಹೋಬಿಲದಲ್ಲಿದ್ದು, ನರಸಿಂಹ ಜಯಂತಿಯ ಈ ಸಂದರ್ಭದಲ್ಲಿ ಅವುಗಳ ಪರಿಚಯ ಮಾಡಿಕೊಳ್ಳೋಣ.

● ಶಶಾಂಕ್ ಮುದೂರಿ

ಭಕ್ತ ಪ್ರಹ್ಲಾದನನ್ನು ಸಂರಕ್ಷಿಸಲೆಂದು, ಆತನ ತಂದೆ ಹಿರಣ್ಯಕಶಿಪುವನ್ನು ಉಗ್ರನರಸಿಂಹನು ಸಂಹರಿಸಿದ ಸ್ಥಳವೇ ಆಂಧ್ರಪ್ರದೇಶದ ಅಹೋಬಲ ಎಂಬ ನಂಬಿಕೆ ಇದೆ. ಅಲ್ಲಿ ಈಗಲೂ ಇರುವ ದಟ್ಟ ಅರಣ್ಯ ಮತ್ತು ಬೆಟ್ಟಗುಡ್ಡಗಳ ಪ್ರದೇಶದಲ್ಲಿರುವ ಒಂದು ಶಿಲಾಸ್ತಂಭದಿಂದ ಬೆಟ್ಟದಲ್ಲಿ, ನರಸಿಂಹನು ಕಲ್ಲುಗಳನ್ನು ಒಡೆದು ಹೊರಬಂದು, ಹಿರಣ್ಯಕಶಿಪುವನ್ನು ಸಂಹರಿಸಿದ ಎಂಬುದು ನಂಬಿಕೆ.

ಇಂದು ಅಹೋಬಲ ಕ್ಷೇತ್ರವು ಸಾಕಷ್ಟು ಪ್ರಸಿದ್ಧ. ಅಲ್ಲಿನ ಬೆಟ್ಟಗುಡ್ಡಗಳ ನಡುವೆ ಒಂಬತ್ತು ನರಸಿಂಹ ದೇಗುಲಗಳಿದ್ದು, ಅವೆಲ್ಲಾ ದೇಗುಲಗಳಿಗೆ ಭೇಟಿ ಕೊಡುವ ಪದ್ಧತಿಯೂ ಇದೆ. ಕೆಲವು ದೇಗುಲಗಳನ್ನು ತಲುಪಲು ವಾಹನ ಸೌಕರ್ಯವಿದೆ; ಇನ್ನು ಕೆಲವು ದೇಗುಲಗಳನ್ನು ಕಾಲ್ನಡಿಗೆಯಲ್ಲೇ ಸಂದರ್ಶಿಸಬೇಕು. ನರಸಿಂಹ ಸ್ತಂಭವನ್ನು ನೋಡಲು ಕಡಿದಾದ ದಾರಿಯಲ್ಲಿ ಚಾರಣವನ್ನೂ ಮಾಡಬೇಕು.

ಕಾಡುಪ್ರದೇಶದ ನಡುವೆ ಹರಡಿರುವ ನವ ನರಸಿಂಹ ದೇಗುಲಗಳನ್ನು ಸಂದರ್ಶಿಸಲು ಸಾಕಷ್ಟು ಓಡಾಟ ನಡೆಸಬೇಕು ಮತ್ತು ಅಂಥ ಯಾತ್ರೆ ಮಾಡಿದರೆ, ಅಹೋಬಲ ಸುತ್ತಮುಲಿನ ಧಾರ್ಮಿಕ ಪರಂಪರೆಯ ಪರಿಚಯವಾಗುತ್ತದೆ. ಅಹೋಬಲದ ಸರಹದ್ದಿನಲ್ಲಿ ಒಂಬತ್ತು ನರಸಿಂಹ ದೇಗುಲಗಳಿವೆ.

1. **ಜ್ವಾಲಾ ನರಸಿಂಹ:** ಅಹೋಬಲದಲ್ಲಿರುವ ಈ ದೇಗುಲದ ವ್ಯಾಪ್ತಿಯಲ್ಲೇ ನರಸಿಂಹನು ಹಿರಣ್ಯಕಶಿಪುವನ್ನು ಸಂಹರಿಸಿದ ಎಂಬುದು ನಂಬಿಕೆ. ದೇಗುಲದ ಹಿಂಭಾಗದ ಬೆಟ್ಟದಲ್ಲಿರುವ ಶಿಲಾಸ್ತಂಭದಿಂದಲೇ ಉಗ್ರನರಸಿಂಹ ಹೊರಬಂದನಂತೆ. ದೇಗುಲದ ಸನಿಹದಲ್ಲೇ ಇರುವ 'ರಕ್ತ ಕುಂಡ'ದಲ್ಲಿ, ನರಸಿಂಹನು ತನ್ನ ರಕ್ತಸಿಕ್ತ ಕೈಗಳನ್ನು ತೊಳೆದನೆಂಬ ನಂಬಿಕೆಯಿದೆ; ಆ ಕುಂಡದ ನೀರು ತಿಳಿ ಕೆಂಪು ಬಣ್ಣ ಹೊಂದಿದೆ. ಈ ದೇಗುಲವು ಮೇಲಿನ ಅಹೋಬಲ ದೇಗುಲದಿಂದ ನಾಲ್ಕು ಕಿ.ಮೀ. ದೂರದಲ್ಲಿದೆ.

2. **ಮಾಲೋಲ ನರಸಿಂಹ:** ಮೇಲಿನ ಅಹೋಬಲ ದೇಗುಲದಿಂದ ಎರಡು ಕಿ.ಮೀ. ದೂರದಲ್ಲಿರುವ ಈ ದೇಗುಲವನ್ನು ಮಾರ್ಕಾಂಡ ಲಕ್ಷ್ಮಿ ಕ್ಷೇತ್ರ ಎಂದೂ ಕರೆಯುವರು. ಕಾಲನ್ನೆತ್ತಿ ನಿಂತಿರುವ ನರಸಿಂಹನ ಇನ್ನೊಂದು ಕಾಲು ಮಡಚಿರುವ ಸ್ಥಿತಿಯಲ್ಲಿದೆ ಮತ್ತು ಅದರ ಮೇಲೆ ಲಕ್ಷ್ಮಿಯ ಕುಳಿರುವಂತೆ ವಿಗ್ರಹವನ್ನು ಕೆತ್ತಲಾಗಿದೆ.

3. **ವರಾಹ ನರಸಿಂಹ (ಕ್ರೋಢ ನರಸಿಂಹ):** ವೇದಾದ್ರಿ ಮತ್ತು ಗರುಡಾದ್ರಿ ಬೆಟ್ಟಗಳ ನಡುವೆ ಇರುವ ಈ ದೇಗುಲವು, ಮೇಲಿನ ಅಹೋಬಲ ದೇಗುಲದಿಂದ ಎರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ನರಸಿಂಹನಿಗೆ ವರಾಹ (ಕಾಡು ಹಂದಿ) ಮುಖ, ಸಿಂಹದ ಬಾಲ ಮತ್ತು ಮನುಷ್ಯನ ದೇಹವಿದೆ.

4. **ಕಾರಂಜ ನರಸಿಂಹ (ಸಾರಂಗ ನರಸಿಂಹ):** ಕಾರಂಜ ಮರದ ನೆರಳಿನಲ್ಲಿರುವ ಈ ದೇಗುಲವು ಮೇಲಿನ ಅಹೋಬಲ ದೇಗುಲದಿಂದ ಒಂದು ಕಿ.ಮೀ. ದೂರದಲ್ಲಿದೆ. ಸಾರಂಗ (ಬಿಲ್ಲು) ಹಿಡಿದಿರುವ ಭಂಗಿಯಿಂದಾಗಿ, ಸಾರಂಗ ನರಸಿಂಹ ಎಂಬ ಹೆಸರು ಸಹ ಇದಕ್ಕಿದೆ.

5. **ಭಾರ್ಗವ ನರಸಿಂಹ:** ಪರಶುರಾಮನು ಇಲ್ಲಿ ನರಸಿಂಹನ ಪೂಜೆ ಮಾಡಿದನು ಎಂಬ ನಂಬಿಕೆ ಇದೆ. ಈ ದೇಗುಲವು ಮೇಲಿನ ಅಹೋಬಲ ದೇಗುಲದಿಂದ ಎರಡು ಕಿ.ಮೀ. ದೂರದಲ್ಲಿದೆ. ಹಿರಣ್ಯಕಶಿಪುವಿನ ಹೊಟ್ಟೆಯನ್ನು ಬಗೆಯುವ ರೀತಿಯ ವಿಗ್ರಹ ಇಲ್ಲಿದೆ.

6. **ಯೋಗಾನಂದ ನರಸಿಂಹ:** ಕೆಳಗಿನ ಅಹೋಬಲ ದೇಗುಲದಿಂದ ಎರಡು ಕಿ.ಮೀ. ದೂರದಲ್ಲಿರುವ ಈ ದೇಗುಲದಲ್ಲಿ ಯೋಗಕ್ಕೆ ಪ್ರಾಮುಖ್ಯ. ಪ್ರಹ್ಲಾದನಿಗೆ ಯೋಗಾಭ್ಯಾಸದ ಮಹತ್ವವನ್ನು ನರಸಿಂಹನು ಇಲ್ಲಿ ಬೋಧಿಸಿದ ಎಂಬ ನಂಬಿಕೆಯಿದೆ. ನರಸಿಂಹನು ಇಲ್ಲಿ ಪದ್ಮಾಸನ ಸ್ಥಿತಿಯಲ್ಲಿದ್ದಾನೆ.

7. **ಛತ್ರವಾಟ ನರಸಿಂಹ:** ನವ ನರಸಿಂಹ ದೇಗುಲಗಳಲ್ಲಿರುವ ಅತಿ ಎತ್ತರದ ನರಸಿಂಹನ ವಿಗ್ರಹ ಇಲ್ಲಿದೆ. ಕೆಳಗಿನ ಅಹೋಬಲ ದೇಗುಲದಿಂದ ನಾಲ್ಕು ಕಿ.ಮೀ. ದೂರದಲ್ಲಿರುವ ಈ ದೇಗುಲಕ್ಕೆ ಸಂಗೀತದ ನಂಟಿದೆ. ಇಬ್ಬರು ಗಂಧರ್ವರು ನರಸಿಂಹನ ಎದುರು ಸಂಗೀತ ಕಾರ್ಯಕ್ರಮ ನೀಡಿದರು ಎಂಬ ನಂಬಿಕೆ. ಆದ್ದರಿಂದ, ಸಂಗೀತಗಾರರು, ಸಂಗೀತ ಕಲಿಯುವವರು ಇಲ್ಲಿಗೆ ಬಂದು ಹಾಡಿ ಅಥವಾ ವಾದ್ಯವನ್ನು ನುಡಿಸಿ, ನರಸಿಂಹನ ಆಶೀರ್ವಾದ ಪಡೆಯುವರು.

8. **ಪಾವನ ನರಸಿಂಹ:** ಕಾಡಿನ ನಡುವೆ, ಮೇಲಿನ ಅಹೋಬಲ ದೇಗುಲದಿಂದ 7 ಕಿ.ಮೀ. ದೂರದಲ್ಲಿರುವ ಈ ದೇಗುಲದ ಸುತ್ತಲೂ ನಲ್ಲಮಲ್ಲ ಕಾಡು ವ್ಯಾಪಿಸಿದೆ. ಲಕ್ಷ್ಮೀ ನರಸಿಂಹನ ರೂಪದಲ್ಲಿರುವ ವಿಗ್ರಹಕ್ಕೆ ಆದಿಶೇಷನ ನೆರಳಿದೆ.

9. **ಉಗ್ರ ನರಸಿಂಹ (ಅಹೋಬಲ ನರಸಿಂಹ):** ಅಹೋಬಲದಲ್ಲಿರುವ ನವ ನರಸಿಂಹ ದೇಗುಲಗಳಲ್ಲಿ ಇದಕ್ಕೇ ಹೆಚ್ಚು ಪ್ರಾಧಾನ್ಯ. ಕೆಳಗಿನ ಅಹೋಬಲ ದೇಗುಲದಿಂದ 13 ಕಿ.ಮೀ. ದೂರದಲ್ಲಿರುವ ಇದನ್ನು ಮೇಲಿನ ದೇಗುಲ ಎನ್ನುವುದುಂಟು. ಇಲ್ಲಿಗೆ ವಾಹನದಲ್ಲಿ ಬರಬಹುದು ಅಥವಾ ನದಿಗುಂಟ ನಡೆಯುತ್ತಾ ಬರಬಹುದು. ಹಿರಣ್ಯಕಶಿಪುವನ್ನು ವಧಿಸುವ ಭಂಗಿಯಲ್ಲಿರುವ ನರಸಿಂಹನು ಇಲ್ಲಿ ಉಗ್ರರೂಪದಲ್ಲಿ ಕಂಡರಿಸಲ್ಪಟ್ಟಿದ್ದಾನೆ.

ಉಗ್ರಸ್ತಂಭ: ಜ್ವಾಲಾ ನರಸಿಂಹ ದೇಗುಲದಿಂದ ಉಗ್ರ ಸ್ತಂಭದ ತುದಿಗೆ ಕಡಿದಾದ ದಾರಿಯಲ್ಲಿ ಚಾರಣ ಮಾಡುವುದು ಮೈನವಿರೇಳಿಸುವ ಅನುಭವ. ಇಲ್ಲಿನ ಶಿಲಾಭಿತ್ತಿಗಳಿಂದಲೇ ನರಸಿಂಹನು ಹೊರಬಂದನು ಎಂಬ ನಂಬಿಕೆಯಿದೆ. ಕಡಿದಾದ ಈ ದಾರಿಯನ್ನು ನಡೆದು ಸಾಗಲು ಕಷ್ಟ ಎನಿಸುವವರಿಗೆ, ಡೋಲಿ ವ್ಯವಸ್ಥೆಯೂ ಇದೆ. ಯೋಗಾನರಸಿಂಹ, ಛತ್ರವಾಟ ನರಸಿಂಹ, ಭಾರ್ಗವ, ಕಾರಂಜ ನರಸಿಂಹ ಮತ್ತ ಪಾವನ ನರಸಿಂಹ ದೇಗುಲಗಳಿಗೆ ರಸ್ತೆಯಿದೆ. ಉಳಿದ ದೇಗುಲಗಳನ್ನು ಕಾಲ್ನಡಿಗೆಯಲ್ಲಿ ಅಥವಾ ಡೋಲಿಗಳ ಮೂಲಕ ತಲುಪಬಹುದು.

ಕೆಳಗಿನ ಅಹೋಬಲ ದೇಗುಲ: ನವ ನರಸಿಂಹ ಕ್ಷೇತ್ರ ದರ್ಶನದ ನಂತರ, ಕೆಳಗಿನ ಅಹೋಬಲ ದೇಗುಲದಲ್ಲಿ ಪೂಜೆ ಮಾಡಿ, ಈ ಯಾತ್ರೆಯನ್ನು ಸಂಪನ್ನಗೊಳಿಸಬಹುದು. ಇದು ಪ್ರಹ್ಲಾದ ವರದ ನರಸಿಂಹ ದೇಗುಲವಾಗಿದ್ದು, ಇದನ್ನು ತಿರುಪತಿಯ ವೆಂಕಟೇಶ್ವರನೇ ಸ್ಥಾಪಿಸಿದ ಎಂಬ ನಂಬಿಕೆ ಇದೆ.

ನಮ್ಮ ದೇಶದಲ್ಲಿ ನರಸಿಂಹ ದೇಗುಲಗಳು ವ್ಯಾಪಕವಾಗಿ ಹರಡಿವೆ; ಅವುಗಳಲ್ಲಿ ಅಹೋಬಲದ ನವ ನರಸಿಂಹ ದೇಗುಲಗಳು ಪ್ರಮುಖ ಎನ್ನಬಹುದು.

ಚೆಂಚು ಲಕ್ಷ್ಮಿ

ಉಗ್ರ ನರಸಿಂಹನು, ಲಕ್ಷ್ಮಿಯನ್ನು ವರಿಸಿದ್ದರ ಕುರಿತು ಒಂದು ಕಥೆಯಿದೆ. ಈ ಕಥೆಯು ಹೆಚ್ಚು ವ್ಯಾಪಕವಾಗಿ ಚಾಲ್ತಿಯಲ್ಲಿರುವುದು, ಆಂಧ್ರಪ್ರದೇಶದ ಚೆಂಚು ಎಂಬ ಬುಡಕಟ್ಟು ಜನಾಂಗದಲ್ಲಿ. ಅಹೋಬಲದಲ್ಲಿ ಶಿಲಾಸ್ತಂಭದಿಂದ ಹೊರಬಂದ ಉಗ್ರ ನರಸಿಂಹನು, ಪ್ರಹ್ಲಾದನನ್ನು ರಕ್ಷಿಸಲೆಂದು, ಹಿರಣ್ಯಕಶಿಪುವನ್ನು ತನ್ನ ಕೈಯ ಉಗುರಿನಿಂದಲೇ ಬಗೆದು ಸಾಯಿಸಿದ ನಂತರ, ನರಸಿಂಹನು ತೀವ್ರ ತಾಪಕ್ಕೆ ಒಳಗಾಗಿದ್ದನು. ಆತನ ಉಗ್ರ ಸ್ವರೂಪವನ್ನು ಕಂಡು ಎಲ್ಲರೂ ಭಯಭೀತರಾದರು. ಆಗ ಆತನ ಉಗ್ರ ಸ್ವರೂಪವನ್ನು ತಣಿಸಿದವಳು, ಸ್ಥಳೀಯ ಬುಡಕಟ್ಟು ಜನಾಂಗದ ಯುವತಿ. ಅವಳೇ ಲಕ್ಷ್ಮಿ. ಅಹೋಬಲ ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ವಾಸಿಸುವ ಚೆಂಚು ಜನಾಂಗದ ಲಕ್ಷ್ಮಿ ಎಂಬ ಯುವತಿಯನ್ನು ಮದುವೆಯಾದ ನಂತರ, ಉಗ್ರ ನರಸಿಂಹನು, ಸೌಮ್ಯ ಸ್ವರೂಪ ತಾಳಿದನು; ಲಕ್ಷ್ಮೀ ಸಮೇತ ಕಾಣಿಸಿಕೊಂಡು, ಲಕ್ಷ್ಮೀ ನರಸಿಂಹನಾದನು. ಇಂದಿಗೂ, ಅಹೋಬಲ ಸುತ್ತಮುತ್ತಲೂ ವಾಸಿಸುವ ಚೆಂಚು ಜನಾಂಗದವರು, ನರಸಿಂಹವನ್ನು ತಮ್ಮ ಕುಲದ ಅಳಿಯ ಎಂದೇ ಪರಿಗಣಿಸುತ್ತಾರೆ. ಶ್ರೀಶೈಲ ಮತ್ತು ಅಹೋಬಲ ದೇಗುಲಗಳ ಆಚರಣೆಗಳಲ್ಲಿ, ಚೆಂಚು ಕುಲದವರೂ ಪಾಲ್ಗೊಳ್ಳುತ್ತಾರೆ. ಆಂಧ್ರಪ್ರದೇಶದಲ್ಲಿ ಚೆಂಚು ಲಕ್ಷ್ಮಿ ಅದೆಷ್ಟು ಪ್ರಸಿದ್ಧಳೆಂದರೆ, ತೆಲುಗಿನಲ್ಲಿ 'ಚೆಂಚು ಲಕ್ಷ್ಮಿ' ಎಂಬ ಚಲನಚಿತ್ರವೂ ಬಿಡುಗಡೆಯಾಗಿದೆ. ಮಹಾ ಶಿವಭಕ್ತ 'ಬೇಡರ ಕಣ್ಣಪ್ಪ' ಸಹ ಚೆಂಚು ಕುಲದವನು ಎಂಬುದು ಮತ್ತೊಂದು ವಿಶೇಷ.



ಚಿತ್ತವಿಹಾರ

ಕಾನನ

● ಅಶೋಕ ಆರ್. ಹಾಲಣ್ಣವರಮ ಲಕ್ಷ್ಮೇಶ್ವರ

ಮೂಡಣ ತೇಜ ಮೂಡಿ
ಹಸಿರು ಆಲಯ ಹರಡಿ
ಸೂಸಿ ಸುಳಿವ ಪವನ
ನವ ಚಿಗುರು ಪಾವನ...

ಹೊಳೆ ಸಾಲು ಹೊಳೆದು
ನವ್ಯಕಾಲ ತೆರೆ ಬರೆದು
ಸಿರಿಗಿರಿ ಹಚ್ಚ ಹಸಿರ ಗಿರಿ
ಶೃಂಗಾರದ ರಂಗು ಹಾಸಿ...

ನಿತ್ಯ ನೇಸರ ನೂತನ ಸಾರ
ಬರೆದಿದೆ ಸವ್ಯಸಾಚಿ ಸೂತ್ರ
ಹಸಿರು ಗಂಧ ಸವಿ ಸುಗಂಧ
ಎರಕ ಹೊಯ್ದ ತಿಳಿ ಅಂಗಳ...

ಹಸಿರು ವೈಭವದ ತ್ರಾಣ
ಪ್ರಾಚೀನ ಪ್ರಾಣಿ ಪಕ್ಷಿ ತಾಣ
ಚೈತನ್ಯ ಕಾಲ ಚೆಲುವಿನ ಕಣ
ಸಸ್ಯ ಸಂಕುಲದ ನವಿರ ನೆಲ...

ಮೂಲ ನೆಲದ ನವ್ಯ ನಾರು
ಪಸರಿಸಿದೆ ಜಗದಗಲ ಬೇರು
ಕಾನನ ಸಾಲು ಮರದ ತಿರುವು
ಸಸ್ಯ ಕೋಟಿ ಸವ್ಯಸಾಚಿ ಹಸಿರು...

ಬಾನು-ಭುವಿ ರವಿ-ಚಂದ್ರ ಬೆಳಗಿ
ಹಸಿರು ಕ್ರಾಂತಿ ನಿತ್ಯ ಕಾಂತಿ
ಜಗದಗಲ ಚಾಚಿದ ಶಾಂತಿ
ಮುಗುಳು ಮೊಗ್ಗು ಸುಗ್ಗಿ ಸಾರಿ...

ನೇಸರನೆತ್ತರ ಶಿರಚಾಚಿ ಶಿಕರ
ಹಸಿರು ತಲೆಮಾರಿನ ತವರು
ವಿಶೇಷ ವಿಷಯ ಹೊಸೆದ
ಜಗದ ಕರಳು ಬಳ್ಳಿ ಕಾನನ...

ಜಾತ್ರೆಗಳೆಂಬ ಸಂಸ್ಕೃತಿ ನೋಟಗಳು

● ಡಾ. ರವಿಶಂಕರ್ ಎ.ಕೆ., ಬೆಂಗಳೂರು

ನಮ್ಮ ನಾಡಿನ ಮಣ್ಣಿನ ಸೊಗಡು, ಪರಂಪರೆ ಮತ್ತು ಜನರ ಭಾವನಾತ್ಮಕ ಬೆಸುಗೆಯನ್ನು ನಾವು ಏಕಕಾಲದಲ್ಲಿ ನೋಡಬೇಕೆಂದರೆ ಅದು 'ಜಾತ್ರೆ'ಗಳಲ್ಲಿ ಮಾತ್ರ ಸಾಧ್ಯ. ಜಾತ್ರೆ ಎಂದರೆ ಬಣ್ಣ ಬಣ್ಣದ ತೊಡುಗೆಗಳು, ಮಲ್ಲಿಗೆಯ ಕಂಪಿನ ನಡುವೆ ಸಾಗುವ ಜನಸಾಗರ, ದೇವಸ್ಥಾನದ ಉತ್ಸವವೇ ಮುಖ್ಯ ಕಾರಣವಾಗಿ ಎಲ್ಲರೂ ಸಂಭ್ರಮಿಸುವ ನಮ್ಮ ಸಂಸ್ಕೃತಿಯ ಜೀವಂತ ಅನಾವರಣವಾಗಿಬಿಡುತ್ತದೆ. ಜಾತ್ರೆಯು ಮನುಷ್ಯನ ಅಂತರಂಗ ಮತ್ತು ಬಹಿರಂಗದ ಸಂಘರ್ಷ-ಸಾಮರಸ್ಯಗಳನ್ನು ಒಂದೇ ವೇದಿಕೆಯಲ್ಲಿ ತಂದು ನಿಲ್ಲಿಸುವ ಒಂದು ಸಾಮಾಜಿಕ ಪ್ರಕ್ರಿಯೆ.

● **ಜಾತ್ರೆಯ ನೋಟ:** ಜಾತ್ರೆ ಎನ್ನುವುದು ಸಂಸ್ಕೃತಿಯನ್ನು ಪ್ರದರ್ಶಿಸುವ ಒಂದು ದೊಡ್ಡ ವಸ್ತುಸಂಗ್ರಹಾಲಯವಿದ್ದಂತೆ. ಅಲ್ಲಿನ ಜನಪದ ಕಲೆಗಳು, ತಿಂಡಿ-ತಿನಿಸುಗಳು, ಉಡುಪುಗಳು ಮತ್ತು ಆಚರಣೆಗಳು ನಮ್ಮ ಮೂಲಸತ್ವವನ್ನು ನೆನಪಿಸುತ್ತವೆ. ವರ್ಷಪೂರ್ತಿ ದೂರದ ಊರುಗಳಲ್ಲಿ, ಕೆಲಸದ ಒತ್ತಡದಲ್ಲಿ ಬದುಕುವ ಮನುಷ್ಯನಿಗೆ ಜಾತ್ರೆಯು ಒಂದು 'ವಿರಾಮ'ದ ತಾಣ. ಇದು ಅಪರೂಪವಾಗಿ ಭೇಟಿಯಾಗುವ ಸುಂದರ ಅವಕಾಶ. ಬಾಲ್ಯದ ಗೆಳೆಯರು, ದೂರದ ಸಂಬಂಧಿಗಳು ಅಥವಾ ಹಳೆಯ ಪರಿಚಯಸ್ಥರು ಒಬ್ಬರನ್ನೊಬ್ಬರು ಕಣ್ತುಂಬಿಕೊಳ್ಳುವುದು ಇದೇ ಹಬ್ಬದ ನೆಪದಲ್ಲಿ ಎನಿಸುತ್ತದೆ. ಪರಸ್ಪರ 'ಹೇಗಿದ್ದೀಯಾ?' ಎಂದು ಕೇಳುವ ಆ ಒಂದು ಕ್ಷಣದಲ್ಲಿರುವ ಆತ್ಮೀಯತೆ ಯಾವುದೇ ಡಿಜಿಟಲ್ ಲೋಕದ ಮಾತುಕತೆಗಿಂತ ಮಿಗಿಲಾದದ್ದು. ಇಲ್ಲಿನ ಕುತೂಹಲದ ನೋಟಗಳಲ್ಲಿ ಒಬ್ಬರನ್ನೊಬ್ಬರು ಅರಿಯುವ, ಅರ್ಥೈಸಿಕೊಳ್ಳುವ ಹಂಬಲವಿರುತ್ತದೆ.

● **ಆರ್ಥಿಕ ಚಕ್ರ:** ಜಾತ್ರೆಯು ದೇವರ ಹೆಸರಿನಲ್ಲಿ ನಡೆದರೂ, ಅದೆಷ್ಟೋ ಕುಟುಂಬಗಳಿಗೆ ಅದು ಬದುಕಿನ ಆಧಾರ. ಸಣ್ಣ ಪುಟ್ಟ ಆಟಿಕೆ ಮಾರುವವರಿಂದ ಹಿಡಿದು ದೊಡ್ಡ ಗೃಹೋಪಯೋಗಿ ವಸ್ತುಗಳ ವ್ಯಾಪಾರಸ್ಥರವರೆಗೆ ಪ್ರತಿಯೊಬ್ಬರಿಗೂ ಇದೊಂದು 'ಸಂಪಾದನೆ'ಯ ವೇದಿಕೆ. ಹಳ್ಳಿಗಳ ಆರ್ಥಿಕ ಚಕ್ರ ತಿರುಗಲು ಜಾತ್ರೆಗಳು ಇಂಧನದಂತೆ ಕೆಲಸ ಮಾಡುತ್ತವೆ. ಪ್ಲಾಸ್ಟಿಕ್ ಆಟಿಕೆಗಳು, ಬಟ್ಟೆಗಳು ಅತಿಹೆಚ್ಚು ತಿಂಡಿ ತಿನಿಸುಗಳು ಅಲ್ಲಿ ವ್ಯಾಪಾರವಾಗುತ್ತವೆ. ದೇವರಿಗಾಗಿ ಹೂವು ಅರ್ಪಿಸುವ ಭಕ್ತನಿಗೂ, ಆ ಹೂವನ್ನು ಬೆಳೆದು ತಂದ ರೈತನಿಗೂ ನಡುವೆ ಇರುವ ಈ ವಾಣಿಜ್ಯ ಸಂಬಂಧವನ್ನು ಸೃಷ್ಟಿಸುವುದು ಹಬ್ಬ, ಜಾತ್ರೆಗಳ ಮೂಲ ಧ್ಯೇಯ.

ಜಾತ್ರೆಯು ಒಬ್ಬ ವ್ಯಕ್ತಿಗೆ ತನ್ನ ಶಕ್ತಿ ಮತ್ತು ಜ್ಞಾನವನ್ನು ಸಮಾಜಕ್ಕೆ ತೋರಿಸಲು ಸಿಗುವ ವಾರ್ಷಿಕ ಅವಕಾಶ. ಹಿಂದೆ ಕುಸ್ತಿ ಪಂದ್ಯಗಳಲ್ಲಿ ಜಟ್ಟಿಗಳು ತಮ್ಮ ದೈಹಿಕ ಬಲವನ್ನು ಪ್ರದರ್ಶಿಸಿದರೆ, ಹರಿಕಥೆ ಅಥವಾ ಪ್ರವಚನಗಳಲ್ಲಿ ಪಂಡಿತರು ತಮ್ಮ ಜ್ಞಾನದ ವಿಸ್ತಾರವನ್ನು ಹಂಚಿಕೊಳ್ಳುತ್ತಿದ್ದರು. ಈಗ ಸಿದ್ಧಮಾದರಿಯ ಹಾಡು, ಕುಣಿತ ಹಾಗೂ ತರಬೇತಿ ಪಡೆದ ಇತರ ಕೌಶಲಗಳು ಏರ್ಪಡುತ್ತವೆ. ಇವುಗಳಿಗೆ ಅಲ್ಲಿನ ರಾಜಕೀಯ ವ್ಯಕ್ತಿ ಹಣ ನೀಡುವ ಮೂಲಕ ಎಲ್ಲರ ಮನಸ್ಸಿನಲ್ಲಿ 'ಮಹಾದಾನಿ'ಯಾಗುವುದು ಅವಕಾಶಗಳ ಅನನ್ಯತೆಯಾಗಿದೆ. ಕೆಲವರಿಗೆ ತಮ್ಮ ಸಾಮಾಜಿಕ ಅಂತಸ್ತನ್ನು ಹೊಸ ಬಟ್ಟೆಗಳ ಅಥವಾ ದಾನ-ಧರ್ಮಗಳ ಮೂಲಕ ತೋರಿಸಿಕೊಳ್ಳುವ ಸಣ್ಣ ಹಂಬಲವಿರುತ್ತದೆ. ಇದರಲ್ಲಿ ತಪ್ಪೇನೂ ಇಲ್ಲ, ಏಕೆಂದರೆ ವ್ಯಕ್ತಿಯು ಸಮಾಜದೊಳಗೆ ತನ್ನನ್ನು ತಾನು ಗುರುತಿಸಿಕೊಳ್ಳುವ ಒಂದು ರೀತಿ ಇದಾಗಿದೆ.

● **ಮನದ ಮಾತು**

ಜಾತ್ರೆಯ ಜನಜಂಗುಳಿಯಲ್ಲಿ ಅದೆಷ್ಟೋ ಪ್ರೇಮಕತೆಗಳು ಮೊಳಕೆಯೊಡೆಯುತ್ತವೆ. ಸಾವಿರಾರು ಜನರ ನಡುವೆ ನಡೆಯುವ ಒಂದು ಸಣ್ಣ ಕಣ್ಣಂಚಿನ ಸಂಭಾಷಣೆಯಲ್ಲಿರುವ ಪ್ರೀತಿ ಅದ್ಭುತವಾದುದು. ಅದೇ ರೀತಿ, ಗ್ರಾಮದಲ್ಲಿರುವ ಸಣ್ಣಪುಟ್ಟ ದ್ವೇಷಗಳು, ಅಸೂಯೆಗಳು ಈ ಸಂಭ್ರಮದ ಅಲೆಯ ಮುಂದೆ ತಣ್ಣಗಾಗುತ್ತವೆ. ದ್ವೇಷದ ವ್ಯಕ್ತಿಯನ್ನು ಆ ಜನಸಾಗರದಲ್ಲಿ ಎದುರಿಸಿದಾಗ, 'ಹೋಗಲಿ ಬಿಡು, ದೇವರೆದುರು ಎಲ್ಲರೂ ಒಂದೇ' ಎಂಬ ಅರಿವು ಮೂಡುತ್ತದೆ. ಮನುಷ್ಯ ತನ್ನ ಅಂತರಂಗದ ಸಂಕಟಗಳನ್ನು ಮರೆತು ಸಮಾಜದೊಳಗೆ ಮುಕ್ತವಾಗಿ ತೆರೆದುಕೊಳ್ಳಲು ಜಾತ್ರೆಯು ಒಂದು ಸುರಕ್ಷಿತ ತಾಣವಾಗಿ ಕೆಲಸ ಮಾಡುತ್ತದೆ.

ನಾವು ಮಾಡುವ ಪ್ರತಿಯೊಂದು ಆಚರಣೆಯ ಹಿಂದೆ ಒಂದು 'ಉದ್ದೇಶ' ವಿರುತ್ತದೆ. ಇಲ್ಲಿ ದೇವರು ಎನ್ನುವವನು 'ನಿಮಿತ್ತ' ಮಾತ್ರ. ಆದರೆ ಆ ನಿಮಿತ್ತದಿಂದಾಗಿ ಸಾವಿರಾರು ಜನರು ಒಂದೆಡೆ ಸೇರುವ, ಪರಸ್ಪರ ಸಹಕರಿಸುವ, ಸಂಭ್ರಮಿಸುವ 'ಕಾರ್ಯ'ವೇ ನಿಜವಾದ ಸಂಸ್ಕೃತಿ. ದೇವರಿಗಾಗಿ ರಥವನ್ನು ಎಳೆಯುವುದು ಧಾರ್ಮಿಕ ಕ್ರಿಯೆ. ಆ ರಥದ ಹಗ್ಗ ಹಿಡಿಯುವ ನೂರಾರು ಕೈಗಳ ನಡುವಿನ ಒಗ್ಗಟ್ಟೇ ನಿಜವಾದ ಧರ್ಮ.

ಈ ಸಾಮೂಹಿಕ ಪ್ರಯತ್ನ ಮತ್ತು ಸಮಾನತೆಯೇ ನಮ್ಮ ಪರಂಪರೆಯನ್ನು ಜೀವಂತವಾಗಿಟ್ಟಿದೆ.

ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಳ್ಳಬಾರದು

● ರಂಗನಾಥ್ ಗುಡಿಮನಿ, ಸಿದ್ದಾಪೂರ

ಈ ಬದುಕೇ ಅವಕಾಶಗಳ ಆಗರ. ಹೆಜ್ಜೆ ಹೆಜ್ಜೆಗೂ ವಿಭಿನ್ನವಾದ ಅವಕಾಶಗಳನ್ನು ಬದುಕು ನಮ್ಮೆದುರು ತಂದಿರಿಸುತ್ತದೆ. ನಮಗೆ ಸರಿಹೊಂದುವ ಅವಕಾಶಗಳನ್ನು ಶತಾಯಗತಾಯ ಕಳೆದುಕೊಳ್ಳಬಾರದು. ಸಮಯ, ಸಮುದ್ರದ ಅಲೆಗಳು ಮತ್ತು ಅವಕಾಶಗಳು ಯಾರಿಗೂ ಕಾಯುವುದಿಲ್ಲ. ನಾವೇ ಅವುಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಪಿಟ್ಟುಕೊಳ್ಳಬೇಕು. 'ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಳ್ಳಬಾರದು' ಎಂಬುದೊಂದು ಮಾತಿದೆ. ಇಲ್ಲಿ ಎಣ್ಣೆ ಎಂದರೆ– ಅವಕಾಶಗಳು ಎಂದರ್ಥ. ಕಣ್ಣು ಮುಚ್ಚಿಕೊಳ್ಳುವುದು ಎಂದರೆ– ನಮ್ಮನ್ನು ಹುಡುಕಿಕೊಂಡು ಬಂದಿರುವ ಅವಕಾಶವನ್ನು ಕಳೆದುಕೊಳ್ಳುವ ಬುದ್ಧಿ ನಮ್ಮಲ್ಲಿರಬಾರದು ಎಂದರ್ಥ. ಆರಂಭದಿಂದಲೂ ಶ್ರಮಿಸಿ ಫಲಿತಾಂಶ ಸಿಗುವ ಅಂತಿಮ ಹಂತದಲ್ಲಿ ಎಚ್ಚರ ತಪ್ಪಿ ಅವಕಾಶಗಳನ್ನು ಕಳೆದುಕೊಳ್ಳಬಾರದು. 'ಶ್ರಮವಹಿಸಿ ಮಾಡಿದ

ಪ್ರಯತ್ನಗಳ ಫಲವೇ ಅವಕಾಶಗಳು'. ಇಂಥ ಪ್ರತಿಯೊಂದು ಅವಕಾಶಗಳನ್ನು ಕಡೆಗಣಿಸದೇ ತಾಳ್ಮೆಯಿಂದ ಸರಿಯಾಗಿ ಬಳಸಿಕೊಳ್ಳುವ ಬುದ್ಧಿವಂತಿಕೆ ಇರಲಿ.

ಅವಕಾಶ ಎಂದರೆ ಅದೊಂದು ಅಪರೂಪದ ವರ, ಅಪಾರ ಭರವಸೆ. ಮೇಲಾಗಿ ಹೊಸತನದ ಸ್ವಾಗತ. ಅವಕಾಶ ಎನ್ನುವ ಪದಕ್ಕೆ ತುಂಬಾ ಶಕ್ತಿಯಿದೆ. ಇದಕ್ಕೆ ಕಿವಿಗಳು ನೆಟ್ಟಗಾಗಿ, ಕಣ್ಣುಗಳು ಅರಳುತ್ತವೆ. ಮನಸ್ಸಿನಲ್ಲಿ ಹೇಳಿಕೊಳ್ಳಲಾಗದ ಸಾಂತ್ವನದ ಸಾಮರಸ್ಯ ಮೂಡುತ್ತದೆ. ನಮ್ಮೊಳಗೆ ಪ್ರತಿಭೆ ಹಾಗೂ ಆತ್ಮವಿಶ್ವಾಸಗಳಿದ್ದರೆ ಅವಕಾಶಗಳು ತಾವಾಗಿಯೇ ನಮ್ಮನ್ನು ಹುಡುಕಿಕೊಂಡು ಬರುತ್ತವೆ. ಮನೆಯ ಹೊಸ್ತಿಲವರೆಗೂ ಅವು ಬಂದಾಗ ಎರಡೂ ಕೈಗಳಿಂದ ಬರಮಾಡಿ ಅಪ್ಪಿಕೊಳ್ಳುವ ಚಾಕಚಕ್ಯತೆ ನಮ್ಮಲ್ಲಿರಲಿ. ಅದು ಬಿಟ್ಟು ಆಲಸ್ಯದಿಂದ ಅವಕಾಶಗಳನ್ನು ನಿರ್ಲಕ್ಷಿಸಿದರೆ ಬದುಕು ಸರ್ವನಾಶದ ಹಾದಿ ಹಿಡಿಯುವುದು. ಮನುಷ್ಯನ ಬದುಕು ಸುಂದರ, ಸುಮಧುರವಾಗಲು ಬುಟ್ಟಿ ತುಂಬ ಬುದ್ಧಿಗಿಂತ, ಬೊಗಸೆ ತುಂಬ ಅವಕಾಶಗಳೇ ಲೇಸು.

ನಮ್ಮೆಲ್ಲರ ಬದುಕಿನಲ್ಲಿ ಧನ-ಕನಕಗಳಿಗಿಂತ ಅತ್ಯಮೂಲ್ಯ ಸಂಗತಿ ಎಂದರೆ ಅವಕಾಶಗಳು. ಅವುಗಳನ್ನು ಸರಿಯಾಗಿ ಗುರುತಿಸಿ, ಪೋಷಿಸುವ ಹೊಣೆಗಾರಿಕೆ ನಮ್ಮದಾಗಬೇಕು. ಅವಕಾಶಗಳು ಬರುವುದೇ ನಮ್ಮೊಳಗಿನ ಸತ್ವವನ್ನು ಬಡಿದೆಬ್ಬಿಸಿ ಪರೀಕ್ಷಿಸಲು. ಇವು ಯಾರಲ್ಲಿ ಧೈರ್ಯ, ಪರಾಕ್ರಮದಂಥ ಗುಣಗಳು ಇರುತ್ತವೆಯೋ ಅವರ ಕಾಲಕೆಳಗೆ ಬಂದು ಬಿದ್ದಿರುತ್ತವೆ. ನಮ್ಮೆದುರು ಅಗಣಿತ ಅವಕಾಶಗಳಿವೆ. ಅವು ಮೇಲಿಂದ ಮೇಲೆ ನಮ್ಮನ್ನು ಹುಡುಕಿಕೊಂಡು ಬರಲಾರವು. ನಾವೇ ಅವುಗಳನ್ನು ಹುಡುಕಿಕೊಂಡು ಹೋಗುವ ಲವಲವಿಕೆ ಜತೆಗಿರಲಿ. ಸಿಗದೇ ಇರುವ ಅವಕಾಶಗಳಿಗೆ ಎಡೆಬಿಡದೆ ಕಾಯುವುದಕ್ಕಿಂತ, ಸಿಕ್ಕಿರುವ ಅವಕಾಶಗಳನ್ನು ಬಳಸಿಕೊಳ್ಳುವುದೇ ಉತ್ತಮ. ಸೂಕ್ತ ಅವಕಾಶಗಳು ಸಿಕ್ಕಿದ್ದೇ ನಿಜವಾದಲ್ಲಿ, ಬದುಕು ಮತ್ತಷ್ಟು, ಮಗದಷ್ಟು ಸೊಬಗಿನಿಂದ ಕಂಗೊಳಿಸುವುದರಲ್ಲಿ ಸಂದೇಹವಿಲ್ಲ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	3	■	4		5
	■	6					■	
■	■		■		■		■	■
7			■		■	8		9
	■	■	■	■	■	■	■	
10		11	■	12	■	13		
■	■		■		■		■	■
14	■	15					■	16
17			■		■	18		

ಎಡದಿಂದ ಬಲಕ್ಕೆ

1. ಗ್ರಾಮದಲ್ಲಿ ನಡೆದ ಕಾಳಗ (3)
4. ತಲೆಬಾಚಲು ಬಳಸುವ ಸಾಧನ (3)
6. ವ್ಯರ್ಥವಾದ ಚರ್ಚೆಗೆ ಹೀಗೆನ್ನಬಹುದು (5)
7. ಅಜಾಗರೂಕತೆಯಿಂದ ಉಂಟಾಗಿದೆ ದೋಷ (3)
8. ಬಾಗಿಲಿಗೆ ಕಟ್ಟಿದ ಚಿಗುರು (3)
10. ಪ್ರೀತಿಯಿಂದ ಕೂಡಿದ್ದು, ಹಾಸ್ಯ (3)
13. ಕೊಟ್ಟ ವಸ್ತುವನ್ನು ಒತ್ತಾಯದಿಂದ ಮರಳಿ ಪಡೆಯುವುದು (3)
15. ಹೇಳಿದ ಮಾತನ್ನು ಅನುಮೋದಿಸು ಎಂದರ್ಥ (5)
17. ತುರಗವನ್ನೇರಿದವನು ಜಾಣ (3)
18. ಮೊಸರು ಕಡೆದು ಬೆಣ್ಣೆಯ ಜತೆಗೆ ಸಿಕ್ಕಿದ್ದು (3)

ಮೇಲಿಂದ ಕೆಳಕ್ಕೆ

1. ಹೊಂಚು ಹಾಕಿ ನಡೆಸಿದ ಪಿತೂರಿ (2)
2. ಹೂವಿನಿಂದ ದುಂಬಿಯು ಹೀರುವ ಸಿಹಿ (4)
3. ತಣ್ಣಗಿನ ಜಲ (4)
4. ಸಾಕಷ್ಟು ಧನವಿರುವಾತ (4)
5. ಮರದ ರೆಂಬೆ, ಜಯಿಸು (2)
7. ಊರಿಂದ ಊರಿಗೆ ನಡೆಸಿದ ಸಂಚಾರ (3)
9. ತಲೆಗೆ ಸುತ್ತಿಕೊಳ್ಳುವ ಮುಂಡಾಸು (3)
11. ಒಡಹುಟ್ಟಿದವನು ಸರದ ನಡುವೆ ಸಿಲುಕಿದ್ದಾನೆ (4)
12. ಗುಬ್ಬಚ್ಚಿಯ ಪಂಜರ (4)
13. ಕಾಡಿನಲ್ಲರಳಿದ ಹೂವು (4)
14. ಚಿತ್ರ ಬಿಡಿಸಲು ಬಳಸುವ ಕೂದಲಿನ ಕುಚ್ಚು (2)
16. ಎರಡಕ್ಷರದ ದ್ವೇಷ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ಸಂಗ್ರಾಮ 4.ಹಣಿಗೆ 6.ಕಟ್ಟೆಪುರಾಣ 7.ಪ್ರಮಾದ 8.ತಳಿರು 10.ಸರಸ 13.ವಸೂಲು 15.ದನಿಗೂಡಿಸು 17.ಚತುರ 18.ಮಜ್ಜಿಗೆ

ಮೇಲಿಂದ ಕೆಳಕ್ಕೆ
1.ಸಂಚು 2.ಮಕರಂದ 3.ತಂಪುನೀರು 4.ಹಣವಂತ 5.ಗೆಲ್ಲು 7.ಪ್ರವಾಸ 9.ರುಮಾಲು 11.ಸಹೋದರ 12.ಗುಬ್ಬಿಗೂಡು 13.ವನಸುಮ 14.ಕುಂಚ 16.ಹಗೆ

ರಾಮಚರಿತ ಮಾನಸ: ಲಂಕಾ ಸಮರ, ವಿಭೀಷಣನ ಶಂಕೆ

ಸಂಧಾನದ ಹಾದಿ ಮುಚ್ಚಿದಾಗ, ರಾವಣನ ಅಹಂಕಾರದ ಕೋಟೆ ಕುಸಿಯುವ ಕಾಲ ಹತ್ತಿರವಾಯಿತು. ಶ್ರೀರಾಮನ ಆಜ್ಞೆಯಂತೆ ವಾನರ ಸೈನ್ಯವು ಲಂಕೆಯ ನಾಲ್ಕು ದಿಕ್ಕುಗಳಿಂದಲೂ ಆಕ್ರಮಣ ಮಾಡಿತು. ಆಕಾಶವು 'ಜೈ ಶ್ರೀರಾಮ್' ಎಂಬ ಘೋಷಣೆಯಿಂದ ಕಂಪಿಸಿತು.

ರಣರಂಗದಲ್ಲಿ ರಾವಣನು ತನ್ನ ಭವ್ಯರಥದ ಮೇಲೆ ಕುಳಿತು, ನಾನಾ ಆಯುಧಗಳನ್ನು ಹಿಡಿದು ವಿಜೃಂಭಿಸುತ್ತಿದ್ದನು. ಅತ್ತ ಶ್ರೀರಾಮನು ಬರಿಗಾಲಿನಲ್ಲಿ, ಯಾವುದೇ ಕವಚವಿಲ್ಲದೆ ಸೌಮ್ಯವಾಗಿ ನಿಂತಿದ್ದನು. ಇದನ್ನು ಕಂಡ ವಿಭೀಷಣನಿಗೆ ಆತಂಕವಾಗಿ, ''ಪ್ರಭು, ಶತ್ರುವು ಸರ್ವ ಸನ್ನದ್ಧನಾಗಿದ್ದಾನೆ, ನೀವು ಬರಿಗಾಲಿನಲ್ಲಿದ್ದೀರಿ. ಈ ಯುದ್ಧವನ್ನು ಗೆಲ್ಲುವುದು ಹೇಗೆ?'' ಎಂದು ಪ್ರೇಮಪೂರ್ವಕವಾಗಿ ಕೇಳಿದನು.

ತುಳಸೀದಾಸರು ಈ ಸಂದರ್ಭವನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ:

ನಾಥ ನ ರಥ ನಹೀಂ ತನ ಪದ ತ್ರಾಣಾ ।
ಕೆಹಿ ಬಿಧಿ ಜಿತಬ ಬೀರ ಬಲವಾನಾ ॥
ಸನಹ ಸಖಾ ಕಹ ಕೃಪಾನಿಧಾನಾ ।
ಜೇಹಿಂ ಜಯ ಹೋಯ ಸೋ ಸ್ಯಂದನ ಆನಾ ॥

● **ಭಾವಾರ್ಥ:** ''ಸ್ವಾಮಿ, ನಿಮಗೆ ರಥವಿಲ್ಲ, ಕಾಲಿಗೆ ಪಾದರಕ್ಷೆಯೂ ಇಲ್ಲ. ಇಂಥ ಬಲಶಾಲಿ ರಾಕ್ಷಸನನ್ನು

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನೀವು ಹೇಗೆ ಜಯಿಸುವಿರಿ?'' ಎಂದು ವಿಭೀಷಣ ಕೇಳಿದಾಗ, ಕೃಪಾನಿಧಿಯಾದ ರಾಮನು ನಸುನಗುತ್ತಾ ಹೇಳಿದನು, ''ಸಖನೇ ಕೇಳು, ವಿಜಯವನ್ನು ತಂದುಕೊಡುವ ರಥವೇ ಬೇರೆಯಿದೆ''.

ರಾಮನು ವಿಭೀಷಣನಿಗೆ ವಿವರಿಸಿದ ಆ 'ಧರ್ಮರಥ' ಕೇವಲ ಯುದ್ಧಕ್ಕಲ್ಲ, ನಮ್ಮ ಜೀವನದ ಸಂಕಷ್ಟಗಳನ್ನು ಎದುರಿಸಲು ಬೇಕಾದ ದಿವ್ಯದರ್ಶನ. ಶೌರ್ಯ ಮತ್ತು ಧೈರ್ಯಗಳೇ ಆ ರಥದ ಚಕ್ರಗಳು. ಸತ್ಯ ಮತ್ತು ಶೀಲಗಳೇ ಆ ರಥದ ಅಚಲವಾದ ಧ್ವಜಗಳು. ಬಲ, ವಿವೇಕ, ಇಂದ್ರಿಯ ನಿಗ್ರಹ ಮತ್ತು ಪರೋಪಕಾರಗಳೇ ಈ ರಥದ ನಾಲ್ಕು ಕುದುರೆಗಳು. ಕ್ಷಮೆ ಮತ್ತು ದಯೆಯೇ ಈ ರಥವನ್ನು ಮುನ್ನಡೆಸುವ ಸಾರಥಿಗಳು. ಯುದ್ಧವು ಕೇವಲ ಬಾಣಗಳಿಂದ ಗೆಲ್ಲುವಂಥದ್ದಲ್ಲ, ಅದು ಚಾರಿತ್ರ್ಯದಿಂದ ಗೆಲ್ಲುವಂಥದ್ದು ಎಂದು ರಾಮನು ತೋರಿಸಿಕೊಟ್ಟನು. ಲಂಕೆಯ ಮಣ್ಣಿನಲ್ಲಿ ಅಧರ್ಮದ ಅಟ್ಟಹಾಸ ಮಿತಿಮೀರಿದ್ದರೂ, ರಾಮನ ಮುಖದಲ್ಲಿ ಮಾತ್ರ ಅದೇ ಸ್ಥಿತಪ್ರಜ್ಞತೆ ಇತ್ತು.

ಯುದ್ಧ ಅನಿವಾರ್ಯವಾದಾಗಲೂ ರಾಮನ ಬಾಣಗಳು ಕೇವಲ ಸಂಹಾರಕ್ಕಾಗಿ ಇರಲಿಲ್ಲ, ಅವು ಅಧರ್ಮದ ಸಂಕೋಲೆಯಿಂದ ಆತ್ಮಗಳನ್ನು ಬಿಡುಗಡೆ ಮಾಡಲು ಇದ್ದವು. ಕುಂಭಕರ್ಣನಂಥ ಮಹಾಬಲಶಾಲಿ ಪತನ ಹೊಂದಿದಾಗಲೂ ರಾಮನು ಅವನ ವೀರತ್ವವನ್ನು ಗೌರವಿಸಿದನು. ಮಂಡೋದರಿಯ ವಿಲಾಪವಾಗಲೀ ಅಥವಾ ಶತ್ರು ಸೈನ್ಯದ

ಸಾವು-ನೋವುಗಳನ್ನು ಕಂಡಾಗಲೇ ಆಗಲೀ ರಾಮನ ಕಣ್ಣುಗಳಲ್ಲಿ ದ್ವೇಷವಿರಲಿಲ್ಲ, ಬದಲಾಗಿ ಒಂದು ರೀತಿಯ ವಿಷಾದ ಮತ್ತು ಕರುಣೆಯಿತ್ತು. ಲಕ್ಷ್ಮಣನು ಶಕ್ತಿ ಬಾಣದಿಂದ ಮೂರ್ಛೆ ಹೋದಾಗ ರಾಮನು ಸಾಮಾನ್ಯ ಮನುಷ್ಯನಂತೆ ಹಲುಬಿದನು. ಇದು ರಾಮನ ನರಲೀಲೆ. ಭಕ್ತಿಯ ಪರಾಕಾಷ್ಠೆಯಾದ ಹನುಮಂತನ ಮೂಲಕ ಸಂಜೀವಿನಿಯನ್ನು ತರಿಸಿ ಲಕ್ಷ್ಮಣನನ್ನು ಉಳಿಸಿಕೊಂಡನು.

ನಮ್ಮೊಳಗಿನ ಅಹಂಕಾರವೇ 'ರಾವಣ'. ನಮ್ಮಲ್ಲಿರುವ ಸಂಶಯಗಳೇ 'ಕುಂಭಕರ್ಣ'. ಇವುಗಳನ್ನು ಗೆಲ್ಲಲು ನಮಗೆ ಹೊರಗಿನ ಆಯುಧಗಳಿಗಿಂತ ಒಳಗಿನ 'ಧರ್ಮ ರಥ'ದ ಅಗತ್ಯವಿದೆ . ರಾಮನು ಲಂಕೆಯನ್ನು ಗೆದ್ದದ್ದು ರಾಜ್ಯಭಾರಕ್ಕಲ್ಲ, ಬದಲಾಗಿ ಅಧರ್ಮದ ಲಂಕೆಯನ್ನು ಧರ್ಮದ ಅಯೋಧ್ಯೆಯನ್ನಾಗಿ ಪರಿವರ್ತಿಸಲು. ವಿಭೀಷಣನಿಗೆ ಪಟ್ಟಾಭಿಷೇಕ ಮಾಡುವ ಮೂಲಕ ರಾಮನು 'ತ್ಯಾಗ'ದ ಉತ್ತುಂಗವನ್ನು ತೋರಿದನು. ರಾಮನಾಮದ ಸ್ಮರಣೆ ಎಂಬುದು ಒಂದು ತೇಲುಸೇತುವೆ ಇದ್ದಂತೆ; ಇದನ್ನು ನಂಬಿದವನು ಸಂಸಾರ ಸಾಗರವನ್ನು ಸುಲಭವಾಗಿ ದಾಟಬಲ್ಲ.

ರಘುಕುಲ ರೀತಿ ಸದಾ ಚಲಿ ಆಯೀ । ಪ್ರಾಣ ಜಾಯ್ ಪರು ವಚನ ನ ಜಾಯೆ

ಜೀವನದಲ್ಲಿ ಎಷ್ಟೇ ಕಷ್ಟಗಳು ಬಂದರೂ ಸತ್ಯದ ಹಾದಿ ಬಿಡಬಾರದು ಎಂಬುದು ಈ ಲಂಕಾವಿಜಯದ ಸಾರ. ರಾಮ ಕೇವಲ ತ್ರೇತಾಯುಗದ ದೇವರಲ್ಲ, ಪ್ರತಿ ಮನುಷ್ಯನ ಅಂತರಾಳದಲ್ಲಿ ಜಾಗೃತವಾಗಬೇಕಾದ ಆದರ್ಶ ಗುಣಗಳ ಸಂಕೇತ. ಇಂಥ ರಾಮಾಯಣವನ್ನು ಮನೆ ಮನೆಯಲ್ಲೂ ಪಠಿಸಿ, ಅರ್ಥೈಸಿ, ಪೂಜಿಸಿ ಎಲ್ಲರ ಮನಸ್ಸುಗಳಿಗೆ ಇದರ ಸಾರವನ್ನು ಸರಿಯಾದ ರೀತಿಯಲ್ಲಿ ತುಂಬಿದಾಗ ಅವರಿಗೆ ಬದುಕಿನ ಸವಾಲುಗಳನ್ನು ಎದುರಿಸಲು ತತ್ವಗಳ ಮೆಟ್ಟಿಲುಗಳನ್ನು ಕಟ್ಟಿಕೊಟ್ಟಂತಾಗುತ್ತದೆ.

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಟಾಕ್ಸಿಕ್ ರಿಲೀಸ್ ಮತ್ತೆ ಮುಂದಕ್ಕೆ

ಕೆಜಿಎಫ್ ಚಿತ್ರದ ಬಳಿಕ ಯಶ್ ಅಭಿನಯದ ಬಹುನಿರೀಕ್ಷಿತ ಸಿನಿಮಾ ಟಾಕ್ಸಿಕ್, ಯುಗಾದಿ ಹಬ್ಬದಂದೇ ತೆರೆಗೆ ಬರಬೇಕಿತ್ತು. ಆದರೆ ಕಾರಣಾಂತರಗಳಿಂದ ಬಿಡುಗಡೆಯ ದಿನಾಂಕವನ್ನು ಮುಂದೂಡಿದ ಚಿತ್ರತಂಡ, ಜೂನ್ 4 ರಂದು ಸಿನಿಮಾವನ್ನು ತೆರೆಗೆ ತರುವುದಾಗಿ ಘೋಷಿಸಿತ್ತು. ಹಾಗಾಗಿ ಚಿತ್ರವನ್ನು ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದರು. ಆದರೆ ಟಾಕ್ಸಿಕ್ ಬಿಡುಗಡೆಯ ದಿನಾಂಕ ಮತ್ತೆ ಮುಂದೂಡಿಕೆಯಾಗಿದೆ. ಟಾಕ್ಸಿಕ್ ಕಣ್ತುಂಬಿಕೊಳ್ಳಲು ಕಾತರರಾಗಿದ್ದ ಸಿನಿಪ್ರಿಯರಿಗೆ ಇದು ಮತ್ತೆ ನಿರಾಸೆ ಮಾಡಿದೆ. ಟಾಕ್ಸಿಕ್ ಪ್ಯಾನ್ ವರ್ಲ್ಡ್ ಸಿನಿಮಾವಾಗಿದ್ದು ಕನ್ನಡ, ಇಂಗ್ಲೀಷ್ , ಹಿಂದಿ ಸೇರಿದಂತೆ ಹಲವು ಭಾಷೆಗಳಲ್ಲಿ ನಿರ್ಮಾಣವಾಗಿದೆ. ಜಾಗತಿಕ ಮಟ್ಟದಲ್ಲಿ ಸಿನಿಮಾವನ್ನು ಬಿಡುಗಡೆ ಮಾಡಲು ಚಿತ್ರತಂಡ ಸಿದ್ಧತೆ ನಡೆಸಿದೆ. ಹಾಗಾಗಿಯೇ ಬಿಡುಗಡೆಯ ದಿನಾಂಕ ಮುಂದೂಡಿರುವ ಬಗ್ಗೆ ಮಾಹಿತಿ ಇದೆ.

ಟಾಕ್ಸಿಕ್ ನನ್ನ ಪಾಲಿಗೆ ಒಂದು ವಿಶೇಷ ಪಯಣ. ಈ ಚಿತ್ರಕ್ಕೆ ವಿಶ್ವಮಟ್ಟದಲ್ಲಿ ದೊಡ್ಡ ವೇದಿಕೆ ಬೇಕು ಎಂಬುದು ನಮ್ಮ ಆಶಯವಾಗಿದೆ. ಭಾರತೀಯ ಸಿನಿಮಾ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿರುವ ಈ ಸಮಯದಲ್ಲಿ, ಚಿತ್ರವನ್ನು ಅತ್ಯಂತ ಪ್ರಭಾವಶಾಲಿಯಾಗಿ ಪ್ರೇಕ್ಷಕರ ಮುಂದೆ ತರುವುದು ನಮ್ಮ ಜವಾಬ್ದಾರಿ. ಹೀಗಾಗಿ ಬಿಡುಗಡೆಯ ದಿನಾಂಕವನ್ನು ಮುಂದೂಡಿದ್ದೇವೆ. ತಾಳ್ಮೆಯಿಂದ ಕಾಯುತ್ತಿರುವ ಅಭಿಮಾನಿಗಳಿಗೆ ನಾವು ಹೆಮ್ಮೆ ಪಡುವಂತಹ ಚಿತ್ರವನ್ನು ನೀಡುತ್ತೇವೆ ಎಂದು ಯಶ್ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.

ಎರಡನೇ ಬಾರಿಗೆ ಸಿನಿಮಾದ ಬಿಡುಗಡೆಯ ದಿನಾಂಕವನ್ನು ಮುಂದೂಡಿರುವ ಚಿತ್ರತಂಡ, ಸಿನಿಮಾ ಯಾವಾಗ ರಿಲೀಸ್ ಆಗಲಿದೆ ಎಂದು ಹೇಳಿಲ್ಲ. ಆಗಸ್ಟ್ 15 ರ ಸ್ವಾತಂತ್ರ್ಯದ ದಿನದಂದು ಅಥವಾ ಈ ಬಾರಿಯ ಗಣೇಶ ಚತುರ್ಥಿಗೆ ಸಿನಿಮಾ ತೆರೆಗೆ ಬರಬಹುದು ಎಂಬ ನಿರೀಕ್ಷೆ ಇದೆ.

ಟಾಕ್ಸಿಕ್ ಭೂಗತ ಲೋಕದ ಕಥೆಯನ್ನು ಒಳಗೊಂಡಿದ್ದು, ಮಲೆಯಾಳಂನ ಖ್ಯಾತ ನಿರ್ದೇಶಕಿ ಗೀತು ಮೋಹನ್ ದಾಸ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಯಶ್ ಅಂಡರ್ ವರ್ಲ್ಡ್ ಡಾನ್ ಆಗಿ ಅಬ್ಬರಿಸಿದ್ದಾರೆ. ಬಾಲಿವುಡ್ ಬ್ಯೂಟಿ ಕಿಯಾರಾ ಅಡ್ವಾಣಿ ನಾಯಕಿಯಾಗಿ ಬಣ್ಣಹಚ್ಚಿದ್ದು, ರುಕ್ಮಿಣಿ ವಸಂತ್, ಹುಮಾ ಖುರೇಷಿ, ನಯನತಾರಾ, ತಾರಾ ಸುತಾರಿಯ ಹೀಗೆ ಹಲವರು ಚಿತ್ರದಲ್ಲಿ ನಟಿಸಿದ್ದಾರೆ. ಹಾಲಿವುಡ್ ತಂತ್ರಜ್ಞರು ಚಿತ್ರದಲ್ಲಿ ಕಾರ್ಯ ನಿರ್ವಹಿಸಿದ್ದು ಟಾಕ್ಸಿಕ್ ತಾಂತ್ರಿಕವಾಗಿಯೂ ಶ್ರೀಮಂತಿಕೆಯಿಂದ ಕೂಡಿದೆ. ಇದು ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು, ಕೆವಿಎನ್ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾಗಿದೆ. ಯಶ್ ಕೂಡ ನಿರ್ಮಾಣದಲ್ಲಿ ಕೈಜೋಡಿಸಿದ್ದಾರೆ.

ಕಾಳಿದಾಸನ ಕೆಡಿ ಅವತಾರ ಹೊಸ ಲುಕ್‌ನಲ್ಲಿ ಧ್ರುವ

ಜೋಗಿ ಪ್ರೇಮ್ ನಿರ್ದೇಶನದ ಸಿನಿಮಾಗಳು ಎಂದರೆ ಹಾಗೇ ಅಲ್ಲೊಂದು ಸುಂದರ ಪ್ರೇಮ ಕಥೆ ಇರುತ್ತದೆ. ಜತೆಗೆ ಆ್ಯಕ್ಷನ್‌ಗೂ ಒತ್ತು ನೀಡಲಾಗಿರುತ್ತದೆ. ಅದರೊಂದಿಗೆ ಎಮೋಷನ್ಸ್ ಕೂಡ ಬೆರೆತ್ತಿರುತ್ತದೆ. ಸಿನಿಮಾ ನೊಡುತ್ತಿದ್ದರೆ ಇದು ನಮ್ಮ ನಡುವೆಯೇ ನಡೆಯುತ್ತಿರುವ ಕಥೆ ಎಂದು ಭಾಸವಾಗುತ್ತದೆ. ಅದೇ ರೀತಿ ಪ್ರೇಮ್ ಮತ್ತೊಂದು ಅಪರೂಪದ ಕಥೆಯನ್ನು ಹೊತ್ತುಬಂದಿದ್ದಾರೆ. ಕಾಳಿದಾಸನ ಮುಗ್ಧತೆಯನ್ನು ಕೆಡಿಯ ಅಬ್ಬರವನ್ನು ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಕತ್ತಿ ಹಿಡಿದು ಕೆಡಿಯ ಅಬ್ಬರ

ಕೆಡಿ ಅಂದಾಕ್ಷಣ ಇದು ಭೂಗತ ಲೋಕದ ಕಥೆಯ ಸಿನಿಮಾ ಅನ್ನಿಸುತ್ತದೆ. ಅಂತೆಯೇ ಅದು ಸತ್ಯ. ಇದು ಅರವತ್ತರ ದಶಕದಲ್ಲಿ ಬೆಂಗಳೂರಿನಲ್ಲಿ ನಡೆಯುವ ಕಥೆಯಾಗಿದೆ. ಹಾಗಂತ ಕೆಡಿ ಆ್ಯಕ್ಷನ್‌ಗೆ ಸೀಮಿತವಾಗಿಲ್ಲ. ಹೊಡಿ ಬಡಿ ಸನ್ನಿವೇಶಗಳಿಗಿಂತಲೂ ಇಲ್ಲಿ ಎಮೋಷನ್ಸ್ ಹೆಚ್ಚಾಗಿ ಬೆರೆತಿದೆ. ಅಪಾರ ಕನಸು ಹೊತ್ತು ಹಳ್ಳಿಯಿಂದ ನಗರಕ್ಕೆ ಬಂದ ಕಾಳಿದಾಸನ ಜೀವನದಲ್ಲಿ ನಡೆಯುವ ಘಟನೆಗಳು ಹೈಲೈಟ್ ಆಗಿವೆ. ತನ್ನ ಜೀವನದಲ್ಲಿ ಎದಿರಾಗುವ ಸವಾಲುಗಳು ಅದರಿಂದ ಕಾಳಿದಾಸನ ಜೀವನದಲ್ಲಾಗುವ ಏರಿಳಿತಗಳು. ಸೈಲೆಂಟ್ ಆಗಿದ್ದ ಕಾಳಿದಾಸ ಯಾಕೆ ವೈಲೆಂಟ್ ಆಗುತ್ತಾನೆ ಎಂಬುದನ್ನು ಇಲ್ಲಿ ಎಲ್ಲರ ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಾಗಿದೆ.

ಆ್ಯಕ್ಷನ್ ಎಮೋಷನ್ಸ್

ಕೆಡಿ ಚಿತ್ರದಲ್ಲಿ ಆ್ಯಕ್ಷನ್‌ಗಿಂತಲೂ ಎಮೋಷನ್ಸ್ ಹೆಚ್ಚಾಗಿ ಬೆರೆತಿದೆ. ಇಲ್ಲಿ ಕೌಟುಂಬಿಕ ಕಥೆಯೇ ಪ್ರಧಾನವಾಗಿದ್ದು, ಲವ್, ಕಾಮಿಡಿಯೂ ಬೆರೆತಿವೆ. ಸಿನಿಮಾ ನೋಡುತ್ತಿದ್ದರೆ ಪ್ರೇಕ್ಷಕರು ಕಥೆಯ ಜತೆಗೆ ಸಾಗುತ್ತಾರೆ. ನನ್ನನ್ನು ಈ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನ ಪಾತ್ರದಲ್ಲಿ ಕಣ್ತುಂಬಿಕೊಳ್ಳಬಹುದು. ನನ್ನ ಪಾತ್ರ ಸೈಲೆಂಟ್ ಆಗಿ ವೈಲೆಂಟ್ ಆಗಿ ಸಾಗುತ್ತದೆ. ಕೆಡಿ ಹೊಸತನದ ಪಯಣ ಎಂದು ಧ್ರುವ ಸಂತಸದಿಂದ ನುಡಿಯುತ್ತಾರೆ.

ಕಾಲಭೈರವನೇ ಹೈಲೈಟ್

ನಮ್ಮ ಚಿತ್ರದಲ್ಲಿ ಸುದೀಪ್ ಸರ್ ಅಭಿನಯಿಸಿರುವುದು ಚಿತ್ರಕ್ಕೆ ಹೊಸ ಶಕ್ತಿಬಂದಿದೆ. ಸುದೀಪ್ ಸರ್ ಕಾಲ ಭೈರವನಾಗಿ ಅಬ್ಬರಿಸಿದ್ದಾರೆ. ಅವರ ನನ್ನ ಪಾತ್ರ ಹೇಗೆ ಸಾಗುತ್ತದೆ ಎಂಬುದನ್ನು ನೀವು ಸಿನಿಮಾದಲ್ಲಿಯೇ ನೋಡಬೇಕು. ಸುದೀಪ್ ಅವರಂತಹ ದೊಡ್ಡ ನಟರೊಂದಿಗೆ ನಟಿಸಿದ್ದು ನಿಜಕ್ಕೂ ನನ್ನ ಅದೃಷ್ಟ. ಸಿನಿಮಾರಂಗದಲ್ಲಿ ಅವರಿಗೆ ದೊಡ್ಡ ಮಟ್ಟದ ಖ್ಯಾತಿ ಇದ್ದರೂ ಕಿಂಚಿತ್ತೂ ಅಹಂ ಅವರಲ್ಲಿಲ್ಲ. ಅವರ ಜತೆಗೆ ನಟಿಸುವುದೇ ಒಂದು ದೊಡ್ಡ ಖುಷಿ. ಅವರಿಂದ ನಾನು ಸಾಕಷ್ಟು ಕಲಿತ್ತಿದ್ದೇನೆ ಇನ್ನೂ ಕಲಿಯುವುದಿದೆ.

ಕೆಡಿ ಚಿತ್ರದಲ್ಲಿ ಹಲವು ಪಾತ್ರಗಳಿವೆ. ಆ ಎಲ್ಲಾ ಪಾತ್ರಗಳು ಇಲ್ಲಿ ಪ್ರಮುಖವಾಗಿದ್ದು, ಅವೆಲ್ಲವೂ ಒಂದಕ್ಕೊಂದು ಪೂರಕವಾಗಿವೆ. ರವಿಚಂದ್ರನ್, ರಮೇಶ್ ಅರವಿಂದ್, ಸಂಜಯ್ ದತ್, ಶಿಲ್ಪಾ ಶೆಟ್ಟಿ ಎಲ್ಲಾ ದಿಗ್ಗಜರ ಜತೆಗೆ ನಟಿಸಿದ್ದು ನನ್ನ ಅದೃಷ್ಟ ಅಂತ ಹೇಳಬಹುದು.

ಸೆಟ್ಟೇರಲಿದೆ ತ್ರಿ ಈಡಿಯೇಟ್ಸ್ 2

ಬಾಲಿವುಡ್ ಮಿಸ್ಟರ್ ಪರ್ಫೆಕ್ಟ್ ಅಮೀರ್ ಖಾನ್ ಹಲವು ಹಿಟ್ ಸಿನಿಮಾಗಳನ್ನು ನೀಡಿದ್ದಾರೆ. ಅದರಲ್ಲಿ ತ್ರಿ ಈಡಿಯೇಟ್ಸ್ ಚಿತ್ರವೂ ಒಂದು. ತ್ರಿ ಈಡಿಯೇಟ್ಸ್ ತೆರೆಗೆ ಬಂದು ಎರಡು ದಶಕಗಳು ಸಮೀಪಿಸಿದೆ, ಆದರೂ ಸಿನಿಮಾದ ಕ್ರೇಜ್ ಕಡಿಮೆಯಾಗಿಲ್ಲ. ರಾಜ್ ಕುಮಾರ್ ಹಿರಾನಿ ನಿರ್ದೇಶದ ಈ ಚಿತ್ರ ಭರ್ಜರಿ ಯಶಸ್ಸು ಪಡೆಯಿತು, ಕಾಲೇಜು ಕಥೆಯ ಸಿನಿಮಾ ಎಲ್ಲರನ್ನೂ ಸೆಳೆಯಿತು. ಅಮೀರ್ ಖಾನ್, ಮಾಧವನ್, ಶರ್ಮನ್, ಕರೀನಾ ಕಪೂರ್, ಬೋಮನ್ ಇರಾನಿ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿತ್ತು. ಈಗ ತ್ರಿ ಈಡಿಯೇಟ್ಸ್ ಚಿತ್ರದ ಸೀಕ್ವೆಲ್ ಮೂಡಿಬರುವುದಾಗಿ ನಟ ಅಮೀರ್ ಖಾನ್ ತಿಳಿಸಿದ್ದಾರೆ. ಇದನ್ನು ಕೇಳಿ ಸಿನಿಪ್ರಿಯರು ಖುಷಿಯಾಗಿದ್ದಾರೆ.

ತ್ರಿ ಈಡಿಯೇಟ್ಸ್‌ನಲ್ಲಿ ಕಾಲೇಜು ಕಥೆ ಇರುತ್ತದೆಯೋ ಅಥವಾ ಬೇರೆ ಕಥೆ ಸಾಗುತ್ತದೋ ಎಂಬ ಕುತೂಹಲವಿದೆ. ಒಂದು ಮಾಹಿತಿಯ ಪ್ರಕಾರ, ಚಿತ್ರದಲ್ಲಿ ಕಾಲೇಜು ಸ್ಟೋರಿಯ ಜತೆಗೆ ಕೌಟುಂಬಿಕ ಕಥೆಯೂ ಇರಲಿದೆ. ಅದರ ಜತೆಗೆ ಲವ್, ಕಾಮಿಡಿ ಎಲ್ಲವೂ ಮನಗೆಲ್ಲಲಿದೆಯಂತೆ. ಈ ಚಿತ್ರವನ್ನೂ ರಾಜ್‌ಕುಮಾರ್ ಹಿರಾನಿ ನಿರ್ದೇಶನ ಮಾಡಲಿದ್ದು, ಅಮೀರ್ ಖಾನ್, ಮಾಧವನ್, ಕರೀನಾ ಕಪೂರ್ ಜತೆಗೆ ಹೊಸಬರ ತಂಡವೂ ಚಿತ್ರದಲ್ಲಿ ಇರಲಿದೆಯಂತೆ. ಈಗಾಗಲೇ ಸಿನಿಮಾದ ಚಿತ್ರಕಥೆ ಸಿದ್ಧವಾಗಿದ್ದು ಚಿತ್ರೀಕರಣ ಪೂರ್ವ ಕೆಲಸಗಳು ಆರಂಭವಾಗಿವೆ. ಎಲ್ಲವೂ ಅಂದುಕೊಂಡಂತೆ ಆದರೆ ಈ ವರ್ಷವೇ ತ್ರಿ ಈಡಿಯೇಟ್ಸ್ 2 ಸೆಟ್ಟೇರಲಿದೆ.

ಅಮೀರ್ ಖಾನ್ ಬಾಲಿವುಡ್ ಸಿನಿಮಾಗಳ ಜತೆಗೆ ದಕ್ಷಿಣ ಭಾರತೀಯ ಚಿತ್ರಗಳಲ್ಲಿಯೂ ವಿಶೇಷ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಈ ಹಿಂದೆ ರಜನಿಕಾಂತ್ ನಾಯಕರಾಗಿ ನಟಿಸಿದ್ದ ಕೂಲಿ ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ನಟಿಸಿದ್ದು, ವಿಭಿನ್ನ ಲುಕ್‌ನಲ್ಲಿ ಕಂಗೊಳಿಸಿದ್ದರು. ಮುಂದೆ ಮತ್ತಷ್ಟು ದಕ್ಷಿಣ ಭಾರತದ ಚಿತ್ರಗಳಲ್ಲಿಯೂ ಅಮೀರ್ ಖಾನ್ ನಟಿಸಬಹುದು ಎಂಬ ನಿರೀಕ್ಷೆ ಇದೆ.

ನರ್ತಕಿ
3D 4K DOLBY DIGITAL 7.1 bookmyshow

ಮಾಗಡಿರಸ್ತೆ : ಪ್ರಸನ್ನ
ಎಂ.ಜಿ.ರಸ್ತೆ : Swagath SHANKARNAG MG ROAD
ಜೆ.ಪಿ.ನಗರ : ಸಿದ್ದೇಶ್ವರ
ರಾಜಾಜಿನಗರ: ನವರಂಗ್
ಆವಲಹಳ್ಳಿ : ವೆಂಕಟೇಶ್ವರ
ಸೇವಾನಗರ : ಮುಕಂದ
ಪೀಣ್ಯ : ಭಾರತಿ
ಕಮಲಾನಗರ : ವೀರಭದ್ರೇಶ್ವರ
ಸಂಜಯನಗರ: ವೈಭವ್
ಬನಶಂಕರಿ : ಕಾಮಾಕ್ಯ
ಉಲ್ಲಾಳ : ವಜ್ರೇಶ್ವರಿ
ಸುಂಕದಕಟ್ಟೆ : ಮೋಹನ್
ಉತ್ತರಹಳ್ಳಿ : ವೈಷ್ಣವಿ ವೈಭವಿ
ತಾವರೆಕೆರೆ : ಬಾಲಾಜಿ
ಹೊಂಗಸಂದ್ರ : ಬೃಂದಾ
ಕೋಣನಕುಂಟೆ: ಮಾನಸ
ಗರುಡಾಚಾರ್‌ಪಾಳ್ಯ: ವಿಜಯಲಕ್ಷ್ಮೀ
ಕದಿರೇನಹಳ್ಳಿ : ಮಹದೇಶ್ವರ
ಜೆ.ಪಿ.ನಗರ : ರೇಣುಕಾಪ್ರಸನ್ನ
ಅಗರ : ತಿರುಮಲ
ಕಾಡುಗೋಡಿ : ಶ್ರೀನಿವಾಸ
ಕೆ.ಆರ್.ಪುರಂ: ವೆಂಕಟೇಶ್ವರ
ಆರ್.ಟಿ.ನಗರ : ರಾಧಾಕೃಷ್ಣ
ಕೋನಪ್ಪನಅಗ್ರಹಾರ: ವೆಂಕಟೇಶ್ವರ
ಚಿಕ್ಕಬಾಣಾವರ: ಅಶೋಕ
ಗೌಡನಪಾಳ್ಯ : ಶ್ರೀನಿವಾಸ
ಗೊಟ್ಟಿಗೆರೆ : ಲಕ್ಷ್ಮೀ
ದೊಮ್ಮಸಂದ್ರ : ಬಾಲಾಜಿ
ಗೊಲ್ಲರಹಟ್ಟಿ : ವೆಂಕಟೇಶ್ವರ
ರಾಜ್‌ಗೋಪಾಲ್‌ನಗರ: ಮಾರುತಿ
ಯಶವಂತಪುರ: ಗೋವರ್ಧನ್
ವಿದ್ಯಾಪೀಠ : ಚಂದ್ರೋದಯ
ಹರಿನಗರ : ವಿನಾಯಕ
ವರ್ತೂರು : ವಿನಾಯಕ
ಸಿಂಗಾಪುರ : ವೈನಿಧಿ
ಮಲ್ಲತ್ತಹಳ್ಳಿ : ವಿ.ಆರ್.ಸಿನಿಮಾಸ್
ಅತ್ತಿಬೆಲೆ : ಗೌರಿಶಂಕರ
ಯಲಹಂಕ : ಪ್ರಕಾಶ್
ಲಗ್ಗೆರೆ : ಆಕಾಶ್
ಕೊಡಿಗೆಹಳ್ಳಿ : ರಾಜ್‌ಮುರಳಿ
ಹೆಸರಘಟ್ಟ : ಎಸ್.ಎಲ್.ಎನ್
ಜಿಗಣಿ : ನಂದೀಶ್ವರ
ಹಾರೋಹಳ್ಳಿ : ವಿನಾಯಕ
ನೆಲಮಂಗಲ : ರೂಪ
AMB CINEMAS KAPALI
PVR INOX MALL OF ASIA | NEXUS | ORION | VAISHNAVI | REGALIA | MARKET CITY | SPIRIT | UPTOWN | BHARATIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD
cinépolis ETA | MEENAKSHI | ORION EAST | LULU | SHANTINIKETAN | SJR
GOPALAN CINEMAS ARCH | INNOVATION | GRAND | SIGNATURE | LEGACY
ROCKLINE mall & cinemas
MIRAJ SUNKADAKATTE
KINO CINEMAS SEEGEHALLI
MOVIETIME RR NAGAR
ತುಮಕೂರು : ಗಾಯತ್ರಿ ಮಾರುತಿ PVR INOX
ದೊಡ್ಡಬಳ್ಳಾಪುರ: ವೈಭವ್
ಚಿಕ್ಕಬಳ್ಳಾಪುರ : ಬಾಲಾಜಿ
ಮಾಲೂರು : ಬಾಲಾಜಿ
ಕನಕಪುರ : ಅರ್ಕಾವತಿ
ಚನ್ನಪಟ್ಟಣ : ಲಕ್ಷ್ಮೀ
ಕುಣಿಗಲ್ : ಆಕಾಶ್
ರಾಮನಗರ : ಶಾನ್
ಸಿರಾ : ಸಪ್ತಗಿರಿ
ತಿಪಟೂರು : ಗಣೇಶ
ಮಧುಗಿರಿ : ಶಾಂತಲಾ
ಮಾಗಡಿ : ಬಾಲಾಜಿ
ಕೋಲಾರ : ನಾರಾಯಣಿ
ಮುಳುಬಾಗಿಲು : ರಾಧಿಕ
ಆನೇಕಲ್ : ಎಸ್.ಎಲ್.ಎನ್
ಗೌರಿಬಿದನೂರು: ಅಭಿಲಾಷ್
ಬಂಗಾರಪೇಟೆ : ವಿಜಯ
ಪಾವಗಡ : ಅಲಂಕಾರ್
ವಿಜಿಪುರ : ಗೌರಿಶಂಕರ
ತುರುವೇಕೆರೆ : ಕೃಷ್ಣ
ಮೈಸೂರು : ವುಡ್‌ಲ್ಯಾಂಡ್ ಗಾಯತ್ರಿ DRC CINEMAS PVR INOX GARUDA|FORUM|SATYAM VISION CINEMAS
ಮಂಡ್ಯ : ಮಹಾವೀರ್
ಹಾಸನ : ಎಸ್.ಬಿ.ಜಿ
ಚಾಮರಾಜನಗರ: ಬಸವೇಶ್ವರ
ಕೊಳ್ಳೆಗಾಲ : ಶಾಂತಿ
ಚನ್ನರಾಯಪಟ್ಟಣ: ಗಾಯತ್ರಿ
ಹೊಳೆನರಸೀಪುರ: ಚನ್ನಾಂಬಿಕ
ಪಾಂಡವಪುರ : ಕೋಕಿಲ
ಬನ್ನೂರು : ರತ್ನಮಹಲ್
ಬೆಳ್ಳೂರುಕ್ರಾಸ್: ಮಾರುತಿ
ನಾಗಮಂಗಲ : ವೆಂಕಟೇಶ್ವರ
ಹುಲ್ಲಹಳ್ಳಿ : ವಿನಾಯಕ
ಹುಣಸೂರು : ಲೀಲಾ
ಗೋಣಿಕೊಪ್ಪ : ಕೂರ್ಗ್‌ಸಿನಿಪ್ಲೆಕ್ಸ್
ಶನಿವಾರಸಂತೆ: ಯಶಸ್ವಿನಿ
ನಂಜನಗೂಡು : ಭಾರ್ಗವಿ
ಗುಂಡ್ಲುಪೇಟೆ : ವೆಂಕಟೇಶ್ವರ
ಕೆ.ಆರ್.ನಗರ : ಗೌರಿಶಂಕರ
ಬೇಲೂರು : ರೇಣುಕಾ
ಕೆ.ಎಂ.ದೊಡ್ಡಿ : ಸುಮಾ
ಕೆ.ಆರ್.ಪೇಟೆ : ಕೆ.ಜೆ.ಬಿ
ಮಳವಳ್ಳಿ : ಮಹಾಲಕ್ಷ್ಮೀ
ಅರಸೀಕೆರೆ : ರತ್ನ
ಟಿ.ನರಸೀಪುರ : ವಿಜಯ್‌ಭಗವಾನ್
ಸಕಲೇಶಪುರ : ತೇಜಸ್ವಿನಿ
ಸಾತನೂರು : ವೆಂಕಟೇಶ್ವರ
ಪಿರಿಯಾಪಟ್ಟಣ : ಮಹದೇಶ್ವರ
ಮದ್ದೂರು : ಮಹಾವೀರ್
ಶ್ರೀರಂಗಪಟ್ಟಣ: ಶ್ರೀದೇವಿ
ಶುಂಠಿಕೊಪ್ಪ : ಗಣೇಶ
ರಾಮಪುರ : ವೀರಭದ್ರೇಶ್ವರ
ಹಲಗೂರು : ರವಿ
ಸಾಲಿಗ್ರಾಮ : ಪದ್ಮಾಂಬ
ಅರೆಕೆರೆ : ಮಂಜುನಾಥ
ಬೆಳಕವಾಡಿ : ಬೀರೇಶ್ವರ
ದಾವಣಗೆರೆ : ಗೀತಾಂಜಲಿ MOVIETIME
ಚಿತ್ರದುರ್ಗ : ವೆಂಕಟೇಶ್ವರ
ಬಳ್ಳಾರಿ : ನಟರಾಜಕಾಂಪ್ಲೆಕ್ಸ್ MOVIETIME
ಹೊಸಪೇಟೆ : ಮೀರ್‌ಆಲಂ
ಶಿರುಗುಪ್ಪ : ರಾಮಕೃಷ್ಣ
ಹರಿಹರ : ಜಯಶ್ರೀ
ಹಿರಿಯೂರು : ನಂಜುಂಡೇಶ್ವರ
ಹಗರಿಬೊಮ್ಮನಹಳ್ಳಿ: ಕೃಷ್ಣ
ಚಳ್ಳಕೆರೆ : ರಾಮಕೃಷ್ಣ
ಜಗಳೂರು : ನಟರಾಜ
ಹೂವಿನಹಡಗಲಿ: ಶಂಕರ್
ಪರಶುರಾಂಪುರ: ಸಾಗರ್
ಸಂಡೂರು : ಶ್ರೀನಿವಾಸ
ಚಿಕ್ಕಜೋಗಿಹಳ್ಳಿ: ಕೃಷ್ಣ
ಹುಬ್ಬಳ್ಳಿ : ಅಪ್ಸರಾ PVR INOX cinépolis
ಧಾರವಾಡ : ಸಂಗಮ್ ಪದ್ಮ PVR INOX
ಗದಗ : ಕೃಷ್ಣ
ಬೆಳಗಾವಿ : ಚಿತ್ರಾ PVR INOX KAPEEL CINEMA
ಬಿಜಾಪುರ : ಲಕ್ಷ್ಮೀ
ಹಾವೇರಿ : ಮಾಗವಿ
ಸಿರ್ಸಿ : ನಟರಾಜ
ಅಂಕಲಿ : ಮಯೂರ
ರಾಣೇಬೆನ್ನೂರು: ಶಕ್ತಿ
ಇಳಕಲ್ : ಶ್ರೀನಿವಾಸ
ಬಾಗಲಕೋಟೆ: ವಾಸವಿ SMART MOVIZ A/C CINEMA
ಸಿಂಧಗಿ : ವಿನಾಯಕ
ಮುಧೋಳ : ಸೂರ್ಯವಂಶಿ
ಗೋಕಾಕ್ : ಲಕ್ಷ್ಮೀ
ಬನಹಟ್ಟಿ : ವೈಭವ್
ಜಮಖಂಡಿ : ಸುವರ್ಣ
ಅಥಣಿ : ದುರ್ಗಾಲಕ್ಷ್ಮೀ
ಶಿಗ್ಗಾಂವ್: ರಾಜಶ್ರೀ
ಮಹಾಲಿಂಗಪುರ: ಮಾರುತಿ
ಹಾರೂಗೇರಿ : ಚಂದ್ರಮ
ರಾಯಭಾಗ : ದತ್ತ
ರಾಮದುರ್ಗ : ಶ್ರೀನಿವಾಸ
ಇಂಡಿ : ಮಹಾವೀರ್
ತಾಳಿಕೋಟೆ : ಅಮೀರ್
ಮುದ್ದೇಬಿಹಾಳ : ಗಿರಿಜಾಶಂಕರ್
ಬಸವನಬಾಗೇವಾಡಿ: ಸತ್ಯನಾರಾಯಣ
ಯಾದವಾಡ : ಬಸವೇಶ್ವರ
ನಿಡಗುಂದಿ : ಯಲಗೂರೇಶ್ವರ
ಸಂಕೇಶ್ವರ : ಸಾಯಿನಾಥ್
ಬೈಲಹೊಂಗಲ : ಸಂಗಮ್
ಗಜೇಂದ್ರಗಡ : ಅಲಂಕಾರ್
ಮುಂಡರಗಿ : CHHOTU MAHARAJ
ಬಾದಾಮಿ : ಮಹಾಕೂಟೇಶ್ವರ
ಲಕ್ಷ್ಮೇಶ್ವರ : ಕೃಷ್ಣ
ಹೊನ್ನಾವರ : ಪದ್ಮಾಂಜಲಿ
ಬ್ಯಾಡಗಿ : ಶೋಭಾ
ಗುಳೇದಗುಡ್ಡ : ಅಂಕಿತ
ಕಲಬುರ್ಗಿ : ಸಂಗಮ್ PVR INOX MIRAJ
ರಾಯಚೂರು : ಪೂರ್ಣಿಮಾ MIRAJ
ಗಂಗಾವತಿ : ಕನಕದುರ್ಗ
ಕೊಪ್ಪಳ : ಶಾರದ
ಕರಟಗಿ : ಪದ್ಮಾವತಿ
ಕನಕಗಿರಿ : ನಂದಿ
ಮಾನ್ವಿ : ಅಪರ್ಣ
ದೇವದುರ್ಗ : ಭಾರತ್
ಶಹಪುರ : ಜಯಶ್ರೀ
ಕುಷ್ಟಗಿ : ಬಸವರಾಜು
ಲಿಂಗಸೂರು : ಎಂಪೈರ್
ಕಂಪ್ಲಿ : ಚಂದ್ರಕಲಾ
ಕುರಗೋಡು : ಎಸ್.ಎಲ್.ವಿ
ಸಿಂಧನೂರು : ಮಂಜುನಾಥ
ಮಸ್ಕಿ : ಶರಣಬಸವೇಶ್ವರ
ಸಿರವಾರ : ಶಿವಮಾತಾ
ಶ್ರೀರಾಮನಗರ: ಲಕ್ಷ್ಮೀಟಿಕ್ಚರ್‌ಹೌಸ್
ಶಿವಮೊಗ್ಗ : ವೀರಭದ್ರೇಶ್ವರ Bharath Cinemas
ಭದ್ರಾವತಿ : ವೀರಭದ್ರೇಶ್ವರ
ಚಿಕ್ಕಮಂಗಳೂರು: ಮಿಲನ್
ಸಾಗರ : ಶ್ರೀ
ಕಡೂರು : ಅನ್ನಪೂರ್ಣ
ಶಿಕಾರಿಪುರ : ಕಿರಣ್
ಬಾಳೇಹೊನ್ನೂರು: ಸುದರ್ಶಿನಿ
ಶಿರಾಳಕೊಪ್ಪ : ಮಾರುತಿ
ಚನ್ನಗಿರಿ : ಲಕ್ಷ್ಮೀ
ಆನವೇರಿ : ಶ್ರೀದೇವಿ
ತೀರ್ಥಹಳ್ಳಿ : ವಿನಾಯಕ
ಶಿರಾಳಿ : ವೆಂಕಟೇಶ್ವರ
ಕಾರ್ಕಳ : ಪ್ಲಾನೆಟ್
ಬೈಂದೂರು : ಶಂಕರ್
ಕೊಪ್ಪ : ಜೆ.ಎಂ.ಜೆ
ಆನವಟ್ಟಿ : ರೇಣುಕಾ
ಮಂಗಳೂರು : SP CINEMAS PVR INOX cinépolis Bharath Cinemas BHARATH MALL Cine GALAXY SURATHKAL
ಉಡುಪಿ : ಅಲಂಕಾರ್ Bharath Cinemas
ಮಣಿಪಾಲ : PVR INOX cinépolis
ಕುಂದಾಪುರ : Bharath Cinemas
ಪಡುಬಿದ್ರೆ : Bharath Cinemas
ಹಾಗೂ ರಾಜ್ಯಾದ್ಯಂತ